17 March 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬದುಕಿನಲ್ಲಿ ನಮ್ಮ ಸಮಾಧಾನವೇ ಕಳೆದು ಹೋಗುವಷ್ಟು ಯಾರನ್ನೂ ಸಮಾಧಾನಿಸುವುದು, ಒಲೈಸುವುದು ಮಾಡಬಾರದು!

-ಸ್ನೇಹಾ ಆನಂದ್

info.varthaman@gmail.com



ಕ್ರೀಡೆಗೂ ಪ್ರಾಶಸ್ತ್ಯ ನೀಡಿ: ಡಾ.ಈ.ಸಿ.ನಿಂಗರಾಜ್ ಗೌಡ ಕಿವಿಮಾತು

ಪುಟ ಸಂ. 2



ಒಳಮೀಸಲಾತಿ ವಿಚಾರದಲ್ಲಿ ಅನ್ಯಾಯ: ಬಲಗೈ ಸಮುದಾಯದ ಆರೋಪ

ಪುಟ ಸಂ. 3



ಕೆಂಗಲ್ ಕರ್ನಾಟಕ ಏಕೀಕರಣದ ರೂವಾರಿ: ಸಿ.ಎಂ.ಲಿಂಗಪ್ಪ ಅಭಿಮತ

ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 123 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸಿಡಿದೆದ್ದ ಸ್ಪೀಕರ್ ಸಭಾತ್ಯಾಗ

## ಸರ್ಕಾರದ ವಿರುದ್ಧವೇ ಯು.ಟಿ.ಖಾದರ್ ಅಸಮಾಧಾನ | ಅಪರೂಪದ ಪ್ರಸಂಗ

**ಬೆಂಗಳೂರು:** ಸರ್ಕಾರದ ವಿರುದ್ಧ ಸಿಟ್ಟಾಗಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿ ಸಭಾತ್ಯಾಗ ಮಾಡುವುದು ಸಾಮಾನ್ಯ. ಆದರೆ ಈ ಬಾರಿ ವಿಧಾನ ಸಭಾ ಸ್ಪೀಕರ್ ಯು.ಟಿ ಖಾದರ್ ಅವರು ಸರ್ಕಾರದ ವಿರುದ್ಧ ಅಸಮಾಧಾನಗೊಂಡು ಸಭಾತ್ಯಾಗ ಮಾಡಿದ ಪ್ರಸಂಗ ನಡೆದಿದೆ.

ಶಾಸಕರ ಲಿಖಿತ ಪ್ರಶ್ನೆಗಳಿಗೆ ಸಚಿವರು ಮತ್ತು ವಿಧಾನಸಭೆ ಕಾರ್ಯದರ್ಶಿಗಳು ಸಮರ್ಪಕ ಉತ್ತರ ನೀಡದೇ ಇರುವುದು, ಪದೇ ಪದೇ ಕಲಾಪಕ್ಕೆ ಗೈರಾಗುತ್ತಿರುವುದಕ್ಕೆ ಸ್ಪೀಕರ್ ಸಿಟ್ಟಾಗಿ ಕಲಾಪದಿಂದ ಹೊರ ನಡೆದರು. ಸ್ಪೀಕರ್ ಸಿಟ್ಟಿಗೆ ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಗೃಹ ಸಚಿವ ಪರಮೇಶ್ವರ್ ಅವರು ಲಿಖಿತ 230 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಉತ್ತರ ನೀಡಿದ್ದರು. ಇದಕ್ಕೆ ವಿಪಕ್ಷಗಳು ವಿರೋಧ ವ್ಯಕ್ತಪಡಿಸಿ ಸದನ ಆರಂಭವಾದಾಗಿನಿಂದ ಸಚಿವರಿಂದ ಸರಿಯಾದ ಉತ್ತರ ಬರುತ್ತಿಲ್ಲ. ಸರ್ಕಾರ ಸತ್ತು ಹೋಗಿದೆ, ತಿಥಿ ಮಾಡಬೇಕು, ತಿಥಿ ಊಟಕ್ಕೆ ಹೋಗಬೇಕು ಅಂತ ಅಶೋಕ್ ಆಕ್ರೋಶ ಹೊರ ಹಾಕಿದರು.

ಸಚಿವರು ಗೈರಾಗಿದ್ದಕ್ಕೆ ಮೊದಲೇ ಸಿಟ್ಟಾಗಿದ್ದ ಸ್ಪೀಕರ್, ಸದನದಲ್ಲಿ ಶಾಸಕರು ಪ್ರಶ್ನೆ ಕೇಳುತ್ತಾರೆ. ಎಲ್ಲವೂ ಚುಕ್ಕೆ ಗುರುತಿನ ಪ್ರಶ್ನೆ ಆಗುವುದಿಲ್ಲ. ಚುಕ್ಕೆ ಗುರುತಿಲ್ಲದ ಪ್ರಶ್ನೆಯೇ ಜಾಸ್ತಿ. ಗಮನ ಸೆಳೆಯುವ ಸೂಚನೆಗೂ ಸಚಿವರು ಉತ್ತರ ನೀಡುವುದಿಲ್ಲ. ಸಚಿವರು ಹೀಗೆ ಮಾಡಿದರೆ ಹೇಗೆ? ಮೂರು ಸಲ ನಾನು ಸಚಿವರಿಗೆ ಹೇಳಿದರೂ

ಪುಟ 2ಕ್ಕೆ





### ಮೂವರು ಅಧಿಕಾರಿಗಳ ತಲೆದಂಡ

ಶಾಸಕರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡದ ಸಚಿವರು, ಅಧಿಕಾರಿಗಳ ತಲೆದಂಡ ಮಾಡುವುದಾಗಿ ಎಚ್ಚರಿಕೆ ನೀಡಿದ ಸಿಎಂ ಮೂವರು ಅಧಿಕಾರಿಗಳ ಸಸ್ಪೆಂಡ್‌ಗೆ ಸೂಚಿಸಿದರು. ಅಲ್ಲದೇ, ಅತಿ ಹೆಚ್ಚು ಉತ್ತರ ಬಾಕಿ ಉಳಿಸಿಕೊಂಡಿರುವ ಇಲಾಖೆ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಹೇಳಿದರು. ಸಿಎಂ ಸೂಚನೆ ಬಳಿಕ ಖಾದರ್ ಸದನ ನಡೆಸಲು ಒಪ್ಪಿಕೊಂಡರು. ಲಿಖಿತ ಪ್ರಶ್ನೆಗಳಿಗೆ ಉತ್ತರ ಸಂಬಂಧ ಸಿಎಂ ಹಾಗೂ ಸಚಿವರು ಮತ್ತೆ ಪ್ರತಿಪಕ್ಷ ನಾಯಕರ ಜೊತೆ ಚರ್ಚಿಸಿ ತೀರ್ಮಾನ ಮಾಡಲಾಗಿದೆ. ಭೋಜನ ಸಮಯದ ಬಳಿಕ ಸರ್ಕಾರ ಅದಕ್ಕೆ ಉತ್ತರ ಕೊಡಲಿದೆ ಎಂದು ಸ್ಪೀಕರ್ ತಿಳಿಸಿದ್ದಾರೆ.

### ಸಿಎಂ ಸಂಧಾನ ಸಭೆ

ಯು.ಟಿ ಖಾದರ್ ಅವರು ಸದನದಿಂದ ಹೊರನಡೆದ ಬೆನ್ನಲ್ಲೇ ಸ್ಪೀಕರ್ ಕೊಠಡಿಯಲ್ಲಿ ಸಿಎಂ, ಸಚಿವರು, ವಿಪಕ್ಷ ನಾಯಕರು ಯುಟಿ ಖಾದರ್ ಜೊತೆ ಸಭೆ ನಡೆಸಿದರು. ಸ್ಪೀಕರ್ ಜೊತೆ ಸಿಎಂ ಸಿದ್ದರಾಮಯ್ಯ ಸಂಧಾನ ಮಾಡಿದರು. ಸ್ಪೀಕರ್ ಜೊತೆ ಕುಳಿತ ಸಚಿವರು ಸದನ ಸೂಕ್ತ ರೀತಿಯಲ್ಲಿ ನಡೆಸಲು ತಮ್ಮಿಂದ ಸಂಪೂರ್ಣ ಸಹಕಾರ ನಿಡುವ ಭರವಸೆ ನೀಡಿದರು. ಅಷ್ಟೇ ಅಲ್ಲದೇ ಶಾಸಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವ ಸ್ಪಷ್ಟನೆ ನೀಡಿದರು.

## ಬಿಳಿಗಿರಿರಂಗನ ಬೆಟ್ಟದಲ್ಲಿ ದಾಸೋಹ ಪುನಾರಂಭ

**ಚಾಮರಾಜನಗರ:** ಬಿಳಿಗಿರಿರಂಗನ ಬೆಟ್ಟದಲ್ಲಿ ಗ್ಯಾಸ್ ಸಮಸ್ಯೆಯಿಂದ ಸ್ಥಗಿತಗೊಂಡಿದ್ದ ದಾಸೋಹವನ್ನು ಪುನಾರಂಭ ಮಾಡಲಾಗಿದೆ. ಗ್ಯಾಸ್ ಸಿಲಿಂಡರ್ ಕೊರತೆ ಕಾರಣದಿಂದ ಒಂದು ದಿನದ ಮಟ್ಟಿಗೆ ದಾಸೋಹ ಸ್ಥಗಿತಗೊಂಡಿತ್ತು. ಸಮಸ್ಯೆಗೆ ಗ್ಯಾಸ್ ಏಜೆನ್ಸಿಗಳು ಸ್ಪಂದಿಸಿದ್ದರಿಂದ, ದೇವಾಲಯಕ್ಕೆ ಅಗತ್ಯ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯಾಗಿದೆ. ಬಿಳಿಗಿರಿರಂಗನ ಸನ್ನಿಧಿಯಲ್ಲಿ ದಾಸೋಹ ಮತ್ತೆ ಪುನರಾರಂಭಗೊಂಡಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

## ಅರಮನೆ ಆವರಣದಲ್ಲಿ ಯುಗಾದಿ ಸಂಗೀತೋತ್ಸವ



**ಮೈಸೂರು:** ಮೈಸೂರು ಅರಮನೆ ಮಂಡಳಿ ವತಿಯಿಂದ ಯುಗಾದಿ ಹಬ್ಬದ ಅಂಗವಾಗಿ ಮಾರ್ಚ್ 19ರಂದು ಸಂಜೆ 5:30ಕ್ಕೆ ಅರಮನೆ ಆವರಣದಲ್ಲಿ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿಕುಮಾರಸ್ವಾಮಿ, ಸಚಿವರಾದ ಎಚ್.ಸಿ. ಮಹದೇವಪ್ಪ ಭಾಗವಹಿಸುವರು ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸುವರು.

# ರಾಜ್ಯ ರಾಜಕೀಯಕ್ಕೆ ಮತ್ತೆ ಬಿಎಸ್‌ವೈ!

## ಮುಂದಿನ ವಿಧಾನಸಭೆ ಚುನಾವಣೆ ಗೆಲ್ಲಲು ಬಿಜೆಪಿ ರಣತಂತ್ರ

**ಚಿತ್ರದುರ್ಗ:** ರಾಜ್ಯದಲ್ಲಿ ಮುಂದಿನ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಬಿಜೆಪಿ ಚುನಾವಣಾ ತಂತ್ರ ರೂಪಿಸುತ್ತಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಅನಿವಾರ್ಯವಾಗಿ ಮತ್ತೆ ರಾಜಕೀಯ ಹೋರಾಟಕ್ಕೆ ಇಳಿಸಲು ಬಿಜೆಪಿ ಮುಂದಾಗಿದೆ.

ರಾಜ್ಯ ಬಿಜೆಪಿಯಲ್ಲಿ ಜನರನ್ನು ಆಕರ್ಷಿಸುವ ಫೇಸ್ ವ್ಯಾಲ್ಯೂ ಇರುವ ನಾಯಕರ ಕೊರತೆ ಇರುವ ಕಾರಣ ಮತ್ತೆ ಯಡಿಯೂರಪ್ಪ ಅವರನ್ನು ಮುಂಚೂಣಿಗೆ ತರಲು ಬಿಜೆಪಿ ನಾಯಕರು ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಪ್ರವೇಶಕ್ಕೆ 50 ವರ್ಷ ಪೂರೈಸಿದ ಕಾರ್ಯಕ್ರಮವನ್ನು ಪಕ್ಷದಿಂದಲೇ ಆಯೋಜಿಸಲು ಮುಂದಾಗಿದ್ದಾರೆ. ಚಿತ್ರದುರ್ಗದಲ್ಲಿ ಬೃಹತ್ ಸನ್ಮಾನ ಸಮಾರಂಭವನ್ನು ಆಯೋಜಿಸಲಾಗುತ್ತಿದೆ. ಇದಕ್ಕಾಗಿ ಸಿದ್ಧತೆ ನಡೆಯುತ್ತಿದೆ.


ಚಿತ್ರದುರ್ಗದಲ್ಲಿ ಏಪ್ರಿಲ್ ಮಧ್ಯಭಾಗದಲ್ಲಿ ಅಥವಾ ಮೇ ಮೊದಲ ವಾರದಲ್ಲಿ ಈ ಕಾರ್ಯಕ್ರಮ ನಡೆಯುವ ಸಾಧ್ಯತೆ ಇದೆ. ರಾಜ್ಯದ ವಿವಿಧ ಭಾಗಗಳಿಂದ ಲಕ್ಷಾಂತರ ಕಾರ್ಯಕರ್ತರು ಹಾಗೂ ಬೆಂಬಲಿಗರನ್ನು ಸೇರಿಸಿ ಮಹಾಸಮಾವೇಶ ನಡೆಸುವ ಯೋಜನೆಯನ್ನು ಬಿಜೆಪಿ ರೂಪಿಸಿದೆ

ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸದ ಹಾಗೂ ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಮಾತನಾಡಿ, ಯಡಿಯೂರಪ್ಪ ಅವರ ರಾಜಕೀಯ ಜೀವನದ ಸುವರ್ಣ ಮಹೋತ್ಸವದ ಅಂಗವಾಗಿ ಈ ಸನ್ಮಾನ ಸಮಾರಂಭವನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಮಾವೇಶದ ಮೂಲಕ ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ಹೆಚ್ಚಿಸಿ ಮುಂದಿನ ವಿಧಾನಸಭೆ ಚುನಾವಣೆಗೆ ಸಂಘಟನೆಯನ್ನು ಬಲಪಡಿಸುವ ಉದ್ದೇಶ ಹೊಂದಲಾಗಿದೆ. ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೇರಲು ಪಕ್ಷ ರಣತಂತ್ರ ರೂಪಿಸುತ್ತಿದ್ದು, ಈ ಕಾರ್ಯಕ್ರಮ ಚುನಾವಣಾ ಅಭಿಯಾನಕ್ಕೆ ಪ್ರಮುಖ ವೇದಿಕೆಯಾಗಲಿದೆ ಎಂದು ಪಕ್ಷದ ನಾಯಕರು ತಿಳಿಸಿದ್ದಾರೆ.

ಯಡಿಯೂರಪ್ಪ ಅವರು 1972ರಲ್ಲಿ ಜನಸಂಘದ ಅಧ್ಯಕ್ಷರಾಗಿ ರಾಜಕೀಯ ಜೀವನ ಆರಂಭಿಸಿದ್ದರು. ನಂತರ 1983ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಹಲವು ಬಾರಿ ಶಾಸಕ, 20 06ರಲ್ಲಿ ಉಪ ಮುಖ್ಯಮಂತ್ರಿ ಹಾಗೂ 2007, 2008, 2018

ಪುಟ 2ಕ್ಕೆ



# ಹೋಟೆಲ್‌ಗಳಿಗೆ ಸದ್ಯಕ್ಕಿಲ್ಲ ಸಿಲಿಂಡರ್

## ಗ್ಯಾಸ್ ಪೂರೈಕೆ ಗಂಭೀರ ಸ್ಥಿತಿ: ಸಚಿವ ಕೆ.ಎಚ್.ಮುನಿಯಪ್ಪ

**ಬೆಂಗಳೂರು:** ಗ್ಯಾಸ್ ಕೊರತೆಯಿಂದ ತತ್ತರಿಸಿರುವ ಹೋಟೆಲ್ ಉದ್ಯಮಕ್ಕೆ ಸರ್ಕಾರ ಮತ್ತೆ ಶಾಕ್ ನೀಡಿದೆ. ಹೋಟೆಲ್‌ಗಳಿಗೆ ಸದ್ಯಕ್ಕೆ ಗ್ಯಾಸ್ ಪೂರೈಕೆ ಇಲ್ಲ ಎಂದು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ತೈಲ ಪೂರೈಕೆ ಕಂಪನಿಗಳ ಜೊತೆ ಸೋಮವಾರ ಮಹತ್ವದ ಸಭೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗ್ಯಾಸ್ ಪೂರೈಕೆ ಪರಿಸ್ಥಿತಿ ಗಂಭೀರವಾಗಿದೆ. ಕೇಂದ್ರ ಸರ್ಕಾರ ಹೆಚ್ಚಿನ ಗಮನ ಕೊಡಬೇಕು. ಇಂದು ಇಂಧನ ಇಲಾಖೆ ಕಾರ್ಯದರ್ಶಿ, ಕಮಿಷನರ್ ಹಾಗೂ ತೈಲ ಕಂಪನಿಗಳ ಮುಖ್ಯಸ್ಥರ ಜೊತೆ ಸಭೆ ನಡೆಸಲಾಯಿತು. ಒಂದು ಗಂಟೆಯ ತನಕ ಸಭೆಯಾಗಿದೆ. ವಿನಾಕಾರಣ ಆತಂಕಕ್ಕೆ ಒಳಗಾಗಬಾರದು ಎಂದು ಗ್ರಾಹಕರಲ್ಲಿ ಮನವಿ ಮಾಡುತ್ತೇವೆ ಎಂದು ತಿಳಿಸಿದರು.



ಕೇಂದ್ರ ಸರ್ಕಾರಕ್ಕೆ ಸಿಎಂ ಎರಡನೇ ಪತ್ರ ಬರೆಯುತ್ತಿದ್ದಾರೆ. ಗ್ಯಾಸ್ ಡಬಲ್ ಬುಕ್ಕಿಂಗ್ ಬೇಡ. ಮಿತವ್ಯಯದಲ್ಲಿ ಬಳಕೆ ಮಾಡಿ. ಹಡಗುಗಳ ಮೂವ್‌ಮೆಂಟ್ ಆರಂಭವಾಗಿದೆ. ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆಗಳು, ಏರ್‌ಲೈನ್ಸ್, ರೈಲ್ವೆ ಕ್ಯಾಂಟೀನ್‌ಗಳಿಗೆ ಶೇ.100ರಷ್ಟು ಸಿಲಿಂಡರ್ ನೀಡಲು ಒಪ್ಪಿಗೆ ನೀಡಲಾಗಿದೆ. ಪ್ರತಿದಿನ ಆರೂವರೆ ಸಾವಿರ ಸಿಲಿಂಡರ್ ಪೂರೈಕೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇದರಲ್ಲಿ 4200 ಸಿಲಿಂಡರ್ ಎಸೆನ್ಸಿಯಲ್ ವಲಯಕ್ಕೆ ಪೂರೈಕೆ ಮಾಡಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆಗಳು, ಇಂದಿರಾ ಕ್ಯಾಂಟೀನ್‌ಗಳಿಗೆ 5400, ಎಸೆನ್ಸಿಯಲ್ ಸರ್ವೀಸ್ ವಲಯಕ್ಕೆ 5200 ಪೂರೈಕೆ ಮತ್ತು 2250 ಸಿಲಿಂಡರ್‌ಗಳು ಆಟೋಗಳಿಗೆ ಪೂರೈಕೆ ಮಾಡಲಾಗುತ್ತದೆ. ಹೋಟೇಲ್‌ಗಳಿಗೆ ಸದ್ಯಕ್ಕೆ ಪೂರೈಕೆ ಆಗಲ್ಲ. ಎಲೆಕ್ಟ್ರಿಕ್ ಸ್ಟವ್ ಬಳಕೆ ಮಾಡುವಂತೆ ಸಚಿವರು ಮನವಿ ಮಾಡಿದರು.

ಒಂದು ದಿನಕ್ಕೆ 1 ಸಾವಿರ ಸಿಲಿಂಡರ್ ಪೂರೈಕೆ ಮಾಡಲಾಗುವುದು. ಇದರಲ್ಲಿ ಹೋಟೆಲ್

ಪುಟ 2ಕ್ಕೆ

## ಗ್ಯಾಸ್ ಸಮಸ್ಯೆ: ಮತ್ತೆ ಪತ್ರ ಬರೆದ ಸಿಎಂ

**ಬೆಂಗಳೂರು:** ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆಯನ್ನು ಎದುರಿಸಲು ವಿದೇಶಗಳಿಂದ ಅನಿಲವನ್ನು ಆಮದು ಮಾಡುವುದೂ ಸೇರಿದಂತೆ ಪರ್ಯಾಯ ಕ್ರಮಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರವನ್ನು ವಿನಂತಿಸಿ ಮತ್ತೆ ಪತ್ರ ಬರೆದಿದ್ದೇನೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ರಾಜ್ಯದಲ್ಲಿ ಗ್ಯಾಸ್ ಸಿಲಿಂಡರ್ ಸಮಸ್ಯೆ ಬಗ್ಗೆ ಸರ್ಕಾರ ಈಗಾಗಲೇ ಪ್ರತಿಕ್ರಿಯೆ ನೀಡಿದೆ ಎಂದು ಹೇಳಿದರು. ಜನ ಸಂಖ್ಯೆಯ ದೊಡ್ಡ ಭಾಗವು ಆಹಾರಕ್ಕಾಗಿ ಹೊಟೇಲ್ ಮೇಲೆ ಅವಲಂಬಿತವಾಗಿದೆ. ಎಲ್‌ಪಿಜಿ ಕೊರತೆಯಿಂದ ಹೊಟೇಲ್ ಸೇವೆಗಳು ಅಸ್ತವ್ಯಸ್ತವಾದರೆ ಸಾಮಾನ್ಯ ಜೀವನದ ಮೇಲೂ ಪರಿಣಾಮ ಬೀರುತ್ತದೆ ಎಂದು ಹೇಳಿದರು.

# ಶಿಕ್ಷಕಿಯರಿಗೆ ಮಾತೃತ್ವ ರಜೆ ನಂತರ 5 ವರ್ಷ ಇಚ್ಛಿಸುವ ಶಾಲೆಗೆ ನಿಯುಕ್ತಿ

**ಬೆಂಗಳೂರು:** ಮಾತೃತ್ವ ರಜೆ ನಂತರ (ಹೆರಿಗೆ ರಜೆ) ಕರ್ತವ್ಯಕ್ಕೆ ಮರಳುವ ಶಿಕ್ಷಕಿಯರಿಗೆ ಐದು ವರ್ಷ ಅವರು ಇಚ್ಛಿಸುವ ಶಾಲೆಗಳಿಗೆ ನಿಯುಕ್ತಿ ಮಾಡಲಾಗುವುದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.



ವಿಧಾನಪರಿಷತ್‌ನಲ್ಲಿ ಬಿಜೆಪಿ ಸದಸ್ಯ ವೈ.ಎಂ.ಸತೀಶ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಗುವಿನ ವಯಸ್ಸು ಐದು ವರ್ಷ ಪೂರ್ಣಗೊಳ್ಳುವವರೆಗೆ ಅವರ ಲಾಲನೆಪಾಲನೆಗೆ ಹೆಚ್ಚಿನ ಸಮಯ ಬೇಕಾಗುತ್ತದೆ. ಶಿಕ್ಷಕಿಯರು ಮತ್ತು ಮಕ್ಕಳ ಆರೈಕೆ, ಪೋಷಣೆ ಗಮನದಲ್ಲಿಟ್ಟುಕೊಂಡು ಇಂತಹ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲಿ ಮಹಿಳಾ ಸರ್ಕಾರಿ ನೌಕರರಿಗೆ 180 ದಿನ ಗಳ ವೇತನ ಸಹಿತ ಮಾತೃತ್ವ ರಜೆ ನೀಡಲಾಗಿದೆ. ಈ ಸೌಲಭ್ಯ ಎರಡು ಮಕ್ಕಳಿಗೆ ಅನ್ವಯಿಸುತ್ತದೆ. ಜತೆಗೆ ಅಷ್ಟೇ ಅವಧಿ (ಆರು ತಿಂಗಳು) ಒಳಗೊಂಡ ಶಿಶುಪಾಲನಾ ರಜೆಯನ್ನು ಸರ್ಕಾರಿ ಉದ್ಯೋಗದಲ್ಲಿದ್ದ ಮಹಿಳೆಯರು ತಮ್ಮ ಮಕ್ಕಳಿಗೆ 18 ವರ್ಷ

ಪುಟ 2ಕ್ಕೆ

### 15 ದಿನದೊಳಗೆ ಮಂಜೂರು

ಎರಡೂ ಬಗೆಯ ರಜೆಗಳಿಗೆ ಶಿಕ್ಷಕಿಯರು ಅರ್ಜಿ ಸಲ್ಲಿಸಿದ 15 ದಿನಗಳ ಒಳಗೆ ಸಕ್ಷಮ ಪ್ರಾಧಿಕಾರ ರಜೆ ಮಂಜೂರು ಮಾಡಬೇಕು. ಶಿಕ್ಷಣಾಧಿಕಾರಿಗಳು ನಿಗದಿತ ಅವಧಿ ಒಳಗೆ ರಜೆ ಮಂಜೂರು ಮಾಡದೇ ಇದ್ದರೆ ಮೇಲಧಿಕಾರಿಗಳಿಗೆ ದೂರು ನೀಡಬಹುದು. ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಲು ಇಲಾಖೆ ಸೂಚನೆ ನೀಡಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು. ಶಿಕ್ಷಕಿಯರು ಸುದೀರ್ಘ ಅವಧಿ ಮಾತೃತ್ವ, ಶಿಶುಪಾಲನಾ ರಜೆ ಪಡೆದಾಗ ಅವರ ಬದಲಿಗೆ ಅರ್ಹ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಮಕ್ಕಳ ಕಲಿಕೆಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುವುದು ಎಂದು ಅವರು ಭರವಸೆ ನೀಡಿದರು.

## ಆರ್‌ಎಸ್‌ಎಸ್, ರಾ ಬ್ಯಾನ್ ಮಾಡಲು ಟ್ರಂಪ್‌ಗೆ ಶಿಫಾರಸು

**ವಾಷಿಂಗ್ಟನ್:** ಆರ್‌ಎಸ್‌ಎಸ್ ಬ್ಯಾನ್ ಮಾಡುವಂತೆ ಅಮೆರಿಕ ಧಾರ್ಮಿಕ ಸ್ವಾತಂತ್ರ್ಯ ಆಯೋಗ ಟ್ರಂಪ್ ಸರ್ಕಾರಕ್ಕೆ ಶಿಫಾರಸು ಮಾಡಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಗುಪ್ತಚರ ಸಂಸ್ಥೆ ಸಂಶೋಧನೆ ಮತ್ತು ವಿಶ್ಲೇಷಣಾ ವಿಭಾಗದ (ರಾ) ಮೇಲೆ (ಭಾರತೀಯ ಗುಪ್ತಚರ ಸಂಸ್ಥೆ) ಡೊನಾಲ್ಡ್ ಟ್ರಂಪ್ ಸರ್ಕಾರ ನಿರ್ಬಂಧ ವಿಧಿಸಬೇಕು ಎಂದು ಆಯೋಗ ತಿಳಿಸಿದೆ. ವರದಿಯು ಎರಡೂ ಸಂಸ್ಥೆಗಳ ಕಾರ್ಯ ವಿಧಾನಗಳ ಬಗ್ಗೆಯೂ ಪ್ರಶ್ನೆಗಳನ್ನು ಹುಟ್ಟುಹಾಕಿದೆ.



ಪುಟ 2ಕ್ಕೆ

## ಭಾರತಕ್ಕೆ 45,000 ಮೆ.ಟನ್ ಗ್ಯಾಸ್ ಹೊತ್ತುತಂದ ಹಡಗು

**ಗಾಂಧಿನಗರ:** ಇರಾಕ್ ಹಾರ್ಮುಜ್ ಜಲಸಂಧಿಯಿಂದ ಬಿಡುಗಡೆಗೊಂಡಿದ್ದ ಶಿವಾಲಿಕ್ ಹಡಗು 45,000 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಗುಜರಾತ್‌ನ ಮುಂದ್ರಾ ಬಂದರಿಗೆ ಬಂದು ತಲುಪಲಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಬಂದರು ಸಚಿವಾಲಯ, ನಿರೀಕ್ಷೆಯಂತೆ ಮಾ.16ರಂದು ಶಿವಾಲಿಕ್ ಹಡಗು ಭಾರತಕ್ಕೆ ಬಂದು ತಲುಪಿದೆ ಎಂದು ತಿಳಿಸಿದೆ. ಸುಮಾರು 92,700 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ನಂದಾ ದೇವಿ ಮತ್ತು ಶಿವಾಲಿಕ್ ಎಂಬ ಎರಡು ಹಡಗುಗಳು ಹಾರ್ಮುಜ್ ಜಲಸಂಧಿಯನ್ನು


ಪುಟ 2ಕ್ಕೆ



## 110 ಅಡಿಗೆ ಕುಸಿದ ಕೆಆರ್‌ಎಸ್ ನೀರಿನ ಮಟ್ಟ

**ಮೈಸೂರು:** ಹಳೆ ಮೈಸೂರು ಪ್ರದೇಶದ ಜೀವನಾಡಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 110.44 ಅಡಿಗೆ ಕುಸಿದಿದೆ. ಆದರೂ ಮುಂದಿನ ಜೂನ್, ಜುಲೈವರೆಗೆ ಕುಡಿಯುವ ನೀರಿಗೆ ಸಮಸ್ಯೆ ಎದುರಾಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

124.80 ಗರಿಷ್ಠ ಅಡಿ ಮಟ್ಟದ ಕೆಆರ್‌ಎಸ್ ಡ್ಯಾಂನಲ್ಲಿ 110.44 ಅಡಿ ನೀರಿದೆ. 32.167 ಟಿಎಂಸಿಯಷ್ಟು ಸದ್ಯ ನೀರಿದ್ದು, ಈ ನೀರು ಮುಂದಿನ ಜೂನ್, ಜುಲೈ ತಿಂಗಳಿನವರೆಗೆ ಕುಡಿಯುವ ನೀರಿಗೆ ಸಮಸ್ಯೆ ಎದುರಾಗುವುದಿಲ್ಲ. ಆದರೆ, ಮಳೆ ಬಾರದಿದ್ದರೆ ಕೃಷಿ ಚಟುವಟಿಕೆಗೆ ನೀರು ಸಿಗುವ ಸಾಧ್ಯತೆ ಇಲ್ಲ. ಸದ್ಯಕ್ಕೆ ಕುಡಿಯುವ ನೀರಿನ ಜೊತೆಗೆ ಮಂಡ್ಯ ಜಿಲ್ಲೆಯ ರೈತರ ಬೇಸಿಗೆ ಬೆಳೆಗಳಿಗೂ ಸಹ ನೀರನ್ನು ಕಟ್ಟು ಪದ್ಧತಿಯಲ್ಲಿ ಪೂರೈಸಲಾಗುತ್ತಿದೆ.



ಕಳೆದ ವರ್ಷ ಉತ್ತಮ ಮಳೆ ಬಿದ್ದ ಪರಿಣಾಮ, ಕೆಆರ್‌ಎಸ್ ವರ್ಷದಲ್ಲಿ ಎರಡು ಬಾರಿ ಭರ್ತಿಯಾಗಿತ್ತು. ಜೊತೆಗೆ ಹಲವು ತಿಂಗಳು ಗರಿಷ್ಠ ಮಟ್ಟವನ್ನೇ ಕಾಯ್ದುಕೊಂಡಿತ್ತು. ಹೀಗಾಗಿ, ಈಗಲೂ ಸಹ ಡ್ಯಾಂನಲ್ಲಿ ಇಷ್ಟು

ಪುಟ 2ಕ್ಕೆ

## ಸಂಸತ್‌ನಲ್ಲೂ ಗ್ಯಾಸ್ ಸಮಸ್ಯೆ ಪ್ರತಿಧ್ವನಿ

**ಎಲ್‌ಪಿಜಿ ಕೊರತೆಗೆ ಖರ್ಗೆ ಕಳವಳ: ವಿಪಕ್ಷಕ್ಕೆ ಬಿಜೆಪಿ ತಿರುಗೇಟು**

**ನವದೆಹಲಿ:** ದೇಶದಲ್ಲಿ ಎಲ್‌ಪಿಜಿ ಕೊರತೆ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಸಂಸತ್ ಅಧಿವೇಶನದಲ್ಲಿ ತೀವ್ರ ಕಳವಳ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರ ಅಡುಗೆ ಅನಿಲದ ಬಿಕ್ಕಟ್ಟು ಮತ್ತು ಕಾಳಸಂತೆಯಲ್ಲಿ ಮಾರಾಟ ತಡೆಯಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿದರು.



ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಜೆ.ಪಿ ನಡ್ಡಾ ಅವರು, ವಿರೋಧ ಪಕ್ಷವು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರ್ಕಾರದೊಂದಿಗೆ ನಿಲ್ಲುವ ಬದಲು ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದು ತಿರುಗೇಟು ನೀಡಿದರು.

ರಾಜ್ಯಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕರಾದ ಖರ್ಗೆ ಅವರು, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ದೇಶಾದ್ಯಂತ

ಪುಟ 2ಕ್ಕೆ

# ಪತ್ರಿಕೋದ್ಯಮದ ದಿಗ್ಗಜ ಬ್ರಹ್ಮಪುರಿಯ ಅಲೆಮಾರಿ

**ಕಾವೇರಿ ಭಾರದ್ವಾಜ್**

ಆಧುನಿಕ ಭಗವದ್ಗೀತೆ ಎಂದೇ ಖ್ಯಾತಿ ಪಡೆದಿರುವ ಮಂಕುತಿಮ್ಮನ ಕಗ್ಗದ ಡಿವಿಜಿ,ಜೀವನ ಧರ್ಮ ಯೋಗ, ಶ್ರೀ ಮದ್ಭಗವದ್ಗೀತಾ ತಾತ್ಪರ್ಯಳಂತ ಶ್ರೇಷ್ಠ ಕೊಡುಗೆಗಳನ್ನು ಕೊಡುವುದರ ಜೊತೆಗೆ ಪತ್ರಿಕಾ ರಂಗದಲ್ಲಿ ಅನನ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಸಾಕಷ್ಟು ಪತ್ರಿಕೆಗಳಿಗೆ ಅಂಕಣ ಬರಹಗಳನ್ನು ನೀಡುವುದರೊಂದಿಗೆ ಕೆಲವು ಪತ್ರಿಕೆಗಳ ಸಂಪಾದಕತ್ವದ ಹೊಣೆಯೂ ಹೊತ್ತಿದ್ದರು. ಪತ್ರಿಕೆದ್ಯಮದ ಏಳು ಬೀಳುಗಳನ್ನು ಬಹಳ ಹತ್ತಿರದಿಂದ ಕಂಡಿದ್ದರು.



### ಪತ್ರಕರ್ತ ಗುಂಡಪ್ಪ

ಸೂರ್ಯೋದಯ ಪ್ರಕಾಶಿಕೆ ಎಂಬ ಪತ್ರಿಕೆಗೆ ಕೆಲಕಾಲ ಡಿವಿಜಿ ಅಂಕಣಗಳನ್ನು ಬರೆಯುತ್ತಿದ್ದರು. ಬೆಂಗಳೂರಿನ ಕಂಟೋನ್ಮೆಂಟ್ ನಲ್ಲಿ ಪ್ರಕಟವಾಗುತ್ತಿದ್ದ ಈವನಿಂಗ್ ಮೆಯಿಲ್ ಪತ್ರಿಕೆಗೂ ಪ್ರತೀ ವಾರ ಲೇಖನಗಳನ್ನು ಬರೆಯುತ್ತಿದ್ದರು. ಭಾರತಿ ಎಂಬ ದಿನ ಪತ್ರಿಕೆಯಲ್ಲಿ ಕೆಲಕಾಲ ಕೆಲಸ ಮಾಡಿದರು. ದಿ ಮೈಸೂರ್ ಸ್ಟ್ಯಾಂಡರ್ಡ್ ಎಂಬ ಇಂಗ್ಲಿಷ್ ಮತ್ತು ನಡೆಗನ್ನಡಿ ಎಂಬ ಕನ್ನಡ ಸಾಪ್ತಾಹಿಕ ಪುರವಣಿಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು.

ಡಿವಿಜಿ ಕೆಲಕಾಲ ಮದರಾಸಿನಲ್ಲಿದ್ದರು. ಈ ಸಂದರ್ಭದಲ್ಲಿ ದಿ ಹಿಂದೂ ಮತ್ತು ಇಂಡಿಯನ್ ಪೇಟ್ರಿಯೆಟ್ ಎಂಬ ಇಂಗ್ಲಿಷ್ ಪತ್ರಿಕೆಗಳಿಗೂ ಲೇಖನಗಳನ್ನು ಬರೆದರು. ಮದರಾಸಿನಿಂದ ಬೆಂಗಳೂರಿಗೆ ಹಿಂತಿರುಗಿದ ನಂತರ ಅವರು 1909ರಲ್ಲಿ ಸುಮತಿ ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಇದಕ್ಕೆ ಸಾಕಷ್ಟು ಮೆಚ್ಚುಗೆಯೂ ಪ್ರೋತ್ಸಾಹವೂ ದೊರೆಯಿತು.

1910ರಲ್ಲಿ ಪ್ರಾರಂಭವಾದ ಮೈಸೂರ್ ಟೈಮ್ಸ್ ಪತ್ರಿಕೆಯ ಸಹಾಯಕ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆದರೆ ಕೆಲ ಕಾರಣದಿಂದಾಗಿ ಬೇಸರಗೊಂಡು ತಮ್ಮ ಸಂಪಾದಕ ವೃತ್ತಿಗೆ ರಾಜೀನಾಮೆ ನೀಡಿದರು.

### ಸಾಹಿತ್ಯ ಲೋಕದ ಹಿರಿಯ ದಿಗ್ಗಜ

ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ, ಡಿವಿಜಿ ಎಂದೇ ಖ್ಯಾತಿ ಪಡೆದಿರುವ ಒಂದು ವಿಶೇಷ ಸಮಾಜಮುಖಿ ವ್ಯಕ್ತಿತ್ವ. ಜೀವನ ಚರಿತ್ರೆ, ಸಾಹಿತ್ಯದ ಸದಭಿರುಚಿ, ಪತ್ರಿಕೋದ್ಯಮ, ಸಂಶೋಧನೆ, ಕಾವ್ಯ, ಗದ್ಯ,ನಾಟಕಗಳ ರಚನೆ, ಕಾವ್ಯಮೀಮಾಂಸೆ ಮತ್ತು ವಿಮರ್ಶೆ,ಸಾರ್ವಜನಿಕ ಬದುಕು ಹೀಗೆ ನಾನಾ ಕ್ಷೇತ್ರಗಳಲ್ಲಿ ತಮ್ಮ ಕಾರ್ಯ ತತ್ಪರತೆಯಿಂದ ಸಾಹಿತ್ಯ ಲೋಕದ ಹಿರಿಯ ದಿಗ್ಗಜರಾಗಿದ್ದಾರೆ.

### ಅವರ ಕುರಿತು ಓದುವುದು, ಬರೆಯುವುದು ಒಂದು ದೊಡ್ಡ ಸಂಶೋಧನೆಯೇ

ವಿರಕ್ತರಾಷ್ಟ್ರಕ, ಬ್ರಹ್ಮಪುರಿಯ ಅಲೆಮಾರಿ ಎಂದೆನ್ನುವ ಗುಂಡಪ್ಪನವರ ಹುಟ್ಟಿದ ದಿನ ಇಂದು. ಇಂತಹ ಕರ್ನಾಟಕ ಕಂಡ ಬಹುದೊಡ್ಡ ವ್ಯಕ್ತಿತ್ವ ಬಡತನದಲ್ಲೇ ತಮ್ಮ ಇಡೀ ಬದುಕನ್ನು ಪೂರ್ಣಗೊಳಿಸಿದರು. ರಾಜಕೀಯ, ಸಾಹಿತ್ಯ, ಸಮಾಜಕ್ಕೆ ಅವರು ನೀಡಿರುವ ಕೊಡುಗೆಯನ್ನು ತಿಳಿಯುವುದು ಒಂದೆರೆಡು ದಿನದ ಅಧ್ಯಯನವಲ್ಲ. ಅವರ ಕುರಿತು ಓದುವುದು, ಬರೆಯುವುದು ಒಂದು ದೊಡ್ಡ ಸಂಶೋಧನೆಯೇ ಸರಿ.

### ಅದು ನಾನು ಆರಿಸಿಕೊಂಡ ವೃತ್ತಿಯಲ್ಲ

ಪತ್ರಿಕಾರಂಗದ ಬಗ್ಗೆ ಡಿವಿಜಿಯವರ ಅಭಿಪ್ರಾಯ ಹೀಗಿದೆ. “ಅದು ನಾನು ಆರಿಸಿಕೊಂಡ ವೃತ್ತಿಯಲ್ಲ, ನನ್ನ ಕುಲವೃತ್ತಿಯೂ ಅಲ್ಲ, ಅದು ನನ್ನ ಒದ್ದಾಟಕ್ಕೆ ತಕ್ಕ ರಂಗಸ್ಥಳವೆಂದು ದೈವ ಏರ್ಪಡಿಸಿದಂತೆ ತೋರುತ್ತದೆ. ನಾನು ಬರೆದಿರುವ

ಪುಟ 2ಕ್ಕೆ

### ಅತೀ ಸರಳ ಜೀವನದಲ್ಲೇ ತಮ್ಮ ಬದುಕಿನ ಯಾತ್ರೆ

ಸಮಾಜಮುಖಿಯಾಗಿದ್ದ ಗುಂಡಪ್ಪನವರು ಅತೀ ಸರಳ ಜೀವನದಲ್ಲೇ ತಮ್ಮ ಬದುಕಿನ ಯಾತ್ರೆಯನ್ನು ಮುಗಿಸಿದರು. ಕನ್ನಡ ಸಾಹಿತ್ಯಕ್ಕೆ ಅವರ

ಪುಟ 2ಕ್ಕೆ



ಹೇಳಿದ್ದರಂತೆ “ ಈತ ಇನ್ನೂ ಹುಡುಗ, ಟೋಪಿ ಹಾಕಿಕೊಂಡಿದ್ದಾನೆ, ಪತ್ರಿಕೆ ನಡೆಸುವಂಥ ದೊಡ್ಡ ಜವಾಬ್ದಾರಿಯನ್ನು ಹೊರ ತಕ್ಕವನಲ್ಲ”. ಆದರೆ ಪೊಲೀಸ್ ಇಲಾಖೆಯ ಮುಖ್ಯಸ್ಥರು ಅನುಮತಿ ದೊರಕಿಸಿದ್ದರು. ದಿ ಕರ್ನಾಟಕ ಪತ್ರಿಕೆ ಎಲ್ಲಾ ರೀತಿಯಲ್ಲೂ ಮಾದರಿ ಪತ್ರಿಕೆಯಾಗಿತ್ತು. ಒಂದು ವರ್ಷದ ನಂತರ ಈ ಪತ್ರಿಕೆ ಕನ್ನಡ ಲೇಖನಗಳನ್ನು ಪ್ರಕಟಿಸಿತ್ತು. 1921ರಲ್ಲಿ ಈ ಪತ್ರಿಕೆ ನಿಂತು ಹೋಯಿತು. ಇಂಡಿಯನ್ ರಿವ್ಯೂ ಆಫ್ ರಿವ್ಯೂಸ್, ವಸಂತ ಕುಸುಮಾಂಜಲಿ ಪತ್ರಿಕೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. 1923ರಲ್ಲಿ ಕರ್ನಾಟಕ ಜನಜೀವನ ಅರ್ಥಸಾಧಕ ಪತ್ರಿಕೆಯ ಸಂಪಾದನಾ ಕಾರ್ಯವನ್ನೂ ನಿರ್ವಹಿಸಿದ್ದರು. 1928ರಲ್ಲಿ ಬಾಗಲಕೋಟೆಯಲ್ಲಿ ನಡೆದ ಪ್ರಥಮ ಕರ್ನಾಟಕ ಪತ್ರಕರ್ತ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಪತ್ರಿಕಾ ರಂಗದಲ್ಲಿ ಗುಂಡಪ್ಪನವರು ಪಡೆದ ಕೀರ್ತಿ, ಸಾರ್ವಜನಿಕ ಗೌರವ, ಸರ್ಕಾರ ಮತ್ತು

ಪುಟ 2ಕ್ಕೆ

ಮೊದಲ ಪುಟದಿಂದ

## ತಮ್ಮ ಬದುಕಿನ ಯಾತ್ರೆ

ಕೊಡುಗೆ ಅಪಾರವಾದುದು. ತಮ್ಮ ಜೀವಿತಾವಧಿಯಲ್ಲಿ ಬೆರಳೆಣಿಕೆಗೆ ಸಿಗದಷ್ಟು ಸಾಹಿತ್ಯ ಕೃಷಿ ನಡೆಸಿರುವ ಇವರು ಎಲ್ಲಾ ಕಾಲಕ್ಕೂ ಅನುಕರಣೀಯ ಶ್ರೇಷ್ಠವಾದ ಮಂಕುತಿಮ್ಮನ ಕಗ್ಗವನ್ನು ನೀಡಿದ್ದಾರೆ. ತಮ್ಮ ಜ್ಞಾಪಕಚಿತ್ರ ಶಾಲೆಯಲ್ಲಿ ಅವರ ಜೀವಿತಾವಧಿಯಲ್ಲಿದ್ದ ಎಲ್ಲಾ ವರ್ಗದ ಜನರ ಕುರಿತು ಆದರಣೀಯವಾಗಿ ದಾಖಲಿಸಿದ್ದಾರೆ.

## ಆರಿಸಿಕೊಂಡ ವೃತ್ತಿಯಲ

ತತ್ತ್ವಶಾಸ್ತ್ರ, ರಾಜಕೀಯ, ಸಂಗೀತ, ಸಾಹಿತ್ಯಗಳು ಮತ್ತು ಭಾಷಣಗಳು ಇದೆಲ್ಲಾ ಪತ್ರಿಕೋದ್ಯೋಗದ ಒಂದೊಂದು ಪ್ರಕಾರಗಳೇ ಹೊರತು ಬೇರೆಯಲ್ಲ."

## ಸಿಡಿದೆದ್ದ ಸ್ಪಿಕರ್ ಸಭಾತ್ಯಾಗ

ಸುಧಾರಣೆ ಕಂಡು ಬರುತ್ತಿಲ್ಲ. ಸಂಬಂಧಿಸಿದ ಸಚಿವರು ಬಂದು ಸ್ಪಷ್ಟತೆ, ಕಾರಣ ಕೊಡಬೇಕು. ಅಲ್ಲಿಯವರೆಗೂ ನಾನು ಸದನ ನಡೆಸುವುದಿಲ್ಲ ಎಂದು ಗರಂ ಆಗಿ ಹೇಳಿ ಸದನದಿಂದ ಹೊರನಡೆದರು.

## ಹೋಟೆಲ್‌ಗಳಿಗೆ ಸಿಲಿಂಡರ್

ಅಸೋಸಿಯೇಷನ್ ಕೂಡ ಇದೆ. ಹೋಟೆಲ್ ಸರ್ವಿಸರ್‌ಗಳ ಬಳಕೆಗೆದರೂ ಸಿಲಿಂಡರ್ ಬೇಕಾಗುತ್ತದೆ. ರಾಜ್ಯದಲ್ಲಿ 44 ಸಾವಿರ ಸಿಲಿಂಡರ್‌ಗಳನ್ನು ಹೋಟೇಲ್‌ಗಳಿಗೆ ಪೂರೈಕೆ ಮಾಡಲಾಗುತ್ತಿತ್ತು. ಸದ್ಯಕ್ಕೆ ಹೋಟೆಲ್‌ಗಳಿಗೆ ಸಿಲಿಂಡರ್ ನೀಡಲು ಸಾಧ್ಯವಿಲ್ಲ ಎಂದು ವಿವರಿಸಿದರು.

## ಸಂಸತ್‌ನಲ್ಲೂ ಗ್ಯಾಸ್ ಪ್ರತಿಧ್ವನಿ

ಎಲ್‌ಪಿಜಿ ಬಿಕ್ಕಟ್ಟಿನಿಂದ ಜನ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದು ಬಡವರು ಮತ್ತು ದುರ್ಬಲರು, ಮಧ್ಯಮ ವರ್ಗ, ಸಾಮಾನ್ಯ ಮನೆಗಳು, ರೆಸ್ಟೋರೆಂಟ್‌ಗಳು, ಹಾಸ್ಟೆಲ್‌ಗಳು ಮತ್ತು ವಾಣಿಜ್ಯ ಬಳಕೆದಾರರ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಉಲ್ಬಣಗೊಂಡಾಗ, ಸರ್ಕಾರ ಭಾರತೀಯ ನಾಗರಿಕರಿಗೆ ಸಲಹೆ ನೀಡಿತ್ತು ಮತ್ತು ಅಂದಿನಿಂದ, ಇಂಧನ ಪೂರೈಕೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಸರ್ಕಾರಕ್ಕೆ ತಿಳಿದಿತ್ತು. ಆದರೆ ಇದರ ಹೊರತಾಗಿಯೂ ಯಾವುದೇ ಸಿದ್ಧತೆಗಳನ್ನು ಕೇಂದ್ರ ಸರ್ಕಾರ ಮಾಡಿಕೊಂಡಿಲ್ಲ. ಪರಿಣಾಮವಾಗಿ ದೇಶದ ಅನೇಕ ವಲಯಗಳು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಬಿಕ್ಕಟ್ಟು ಸರ್ಕಾರದ ಕರುಣಾಜನಕ ನಿರ್ವಹಣೆ ಮತ್ತು ದೋಷಪೂರಿತ ವಿದೇಶಾಂಗ ನೀತಿಯನ್ನು ಬಹಿರಂಗಪಡಿಸಿದೆ ಎಂದು ಅವರು ಟೀಕಿಸಿದರು.

## ರಾಜಕೀಯಕ್ಕೆ ಮತ್ತೆ ಬಿಎಸ್‌ವೈ!

ಮತ್ತು 2019ರಲ್ಲಿ ಸತತ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ ರಾಜಕೀಯ ಜೀವನದ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಈ ಸನ್ಮಾನ ಸಮಾರಂಭವನ್ನು ಅದ್ದೂರಿಯಾಗಿ ಆಚರಿಸಲು ಬಿಜೆಪಿ ಮುಂದಾಗಿದೆ.

## 110 ಅಡಿಗೆ ಕುಸಿದ ಕೆಆರ್‌ಎಸ್

ಪ್ರಮಾಣದ ನೀರು ಸಂಗ್ರಹವಾಗಿದೆ. ಸದ್ಯ ಈ ವರ್ಷ ಮೈಸೂರು, ಮಂಡ್ಯ, ಬೆಂಗಳೂರಿಗೆ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಎದುರಾಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಭಾರತಕ್ಕೆ ಹಡಗು

ದಾಟಿ ಭಾರತಕ್ಕೆ ಬರುತ್ತಿವೆ. ಶಿವಾಲಿಕ್ ಮಾರ್ಚ್ 16ರಂದು ಮತ್ತು ನಂದಾ ದೇವಿ ಮಾರ್ಚ್ 17ರಂದು ಆಗಮಿಸುವ ನಿರೀಕ್ಷೆಯಿದೆ ಎಂದು ತಿಳಿಸಿತ್ತು. ಅಮೆರಿಕ ಇರಾನ್ ಯುದ್ಧದಿಂದ ಅಡುಗೆ ಅನಿಲ ಪೂರೈಕೆಯಲ್ಲಿ ಉಂಟಾದ ವ್ಯತ್ಯಯ ಹಲವಾರು ವಲಯಗಳ ಮೇಲೆ ಪರಿಣಾಮ ಬೀರುತ್ತಿದೆ. ರೆಸ್ಟೋರೆಂಟ್‌ಗಳು,

ಹಾಸ್ಟೆಲ್‌ಗಳು ಮತ್ತು ಕೆಲವು ಕಂಪನಿಗಳು, ಮನೆಗಳು ಮತ್ತು ಹೋಟೆಲ್‌ಗಳಲ್ಲಿ ಭಾರೀ ಸಮಸ್ಯೆ ಎದುರಾಗಿದೆ. ಎಲ್‌ಪಿಜಿ ಸರಬರಾಜಲ್ಲಿ ವಿಳಂಬವಾದರೆ ಮತ್ತಷ್ಟು ಸೇವೆಗಳ ಮೇಲೆ ಪರಿಣಾಮ ಬೀರಬಹುದು. ಇದರ ನಡುವೆ ಶಿವಾಲಿಕ್ ಹಡಗು ಭಾರತ ತಲುಪಿದೆ. ಮತ್ತೊಂದು ಹಡಗು ನಂದಾ ದೇವಿ ಮಂಗಳವಾರ ಕಾಂಡ್ಲಾ ಬಂದರಿಗೆ ಆಗಮಿಸಲಿದೆ. ಇದರಿಂದ ಗ್ಯಾಸ್ ಸಮಸ್ಯೆಗೆ ಕೊಂಚ ರಿಲೀಫ್ ಸಿಗಲಿದೆ.

ವಿದೇಶಾಂಗ ಸಚಿವ ಜೈಶಂಕರ್ ಮತ್ತು ಇರಾನಿನ ವಿದೇಶಾಂಗ ಸಚಿವರ ನಡುವಿನ ಚರ್ಚೆಗಳ ನಂತರ ಈ ಬೆಳವಣಿಗೆ ನಡೆದಿದೆ. ಈ ಮಾತುಕತೆ ಬಳಿಕ ಭಾರತದ ಹಡಗುಗಳಿಗೆ ಹಾರ್ಮೋಜ್ ಮಾರ್ಗವನ್ನು ಸುರಕ್ಷಿತವಾಗಿ ದಾಟಲು ಅನುಮತಿ ದೊರೆತಿತ್ತು.

# ಟ್ರಪ್, ನೆತನ್ಯಾಹು ಅಧಿಕಾರದಿಂದ ಪ್ರಪಂಚ ಕಂಗಾಲು: ಆನಂದಸ್ವಾಮಿ




ಮೈಸೂರು: ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇಸ್ರೇಲ್ ಅಧ್ಯಕ್ಷ ನೆತನ್ಯಾಹು ಅವರ ಅಧಿಕಾರ ದಾಹದಿಂದಾಗಿ ನಡೆಯುತ್ತಿರುವ ಯುದ್ಧದಿಂದ ಇಡೀ ಪ್ರಪಂಚ ಕಂಗಾಲಾಗಿದೆ. ಇದರಿಂದ ಕೇವಲ ಮನುಷ್ಯರು ಮಾತ್ರವಲ್ಲ ಪ್ರಾಣಿ ಸಂಕುಲ ಸಹಾ ಸಮಸ್ಯೆಗೊಳಗಾಗಿದೆ. ಹೀಗಾಗಿ ಭಗವಾನ್ ಬುದ್ಧನ ಬೋಧನೆ, ಆದರ್ಶ ಪಾಲಿಸಬೇಕಾದ ಅಗತ್ಯವಿದೆ ಎಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಅಧ್ಯಕ್ಷ ಹರಿಹರ ಆನಂದಸ್ವಾಮಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇರಾಕ್ ಜೊತೆಗಿನ ಯುದ್ಧದಲ್ಲಿ ಅಂತಾರಾಷ್ಟ್ರೀಯ ನಿಯಮ ನಿಷೇಧ ಹೇರಿರುವ ಹಾಗೂ ಬಳಸಲೇ ಬಾರದ ಶಸ್ತ್ರಾಸ್ತ್ರ ಬಳಲಾಗುತ್ತಿರುವುದು ಸರಿಯಲ್ಲ. ಇದು ಸರಿಪಡಿಸಲಾಗದಷ್ಟು ಹಾನಿಯುಂಟು ಮಾಡಲಿದೆ. ಯುದ್ಧ ಆರಂಭವಾಗಿ ಎರಡು ವಾರ ಗತಿಸಿದರೂ ಅಂತಾರಾಷ್ಟ್ರೀಯ ನ್ಯಾಯಾಲಯ ಹಾಗೂ ವಿಶ್ವ ಸಂಸ್ಥೆ ಈ ಬಗ್ಗೆ ಮೌನವಾಗಿರುವುದು ಸರಿಯಲ್ಲ ಎಂದು ಬೇಸರಿಸಿದರು. ಹೀಗಾಗಿ ಇಂದು ಇಡೀ ಪ್ರಪಂಚ ಕ್ರೈಸ್ತ ಹಾಗೂ ಮುಸ್ಲಿಂ ರಾಷ್ಟ್ರಗಳ ನಡುವಿನ ಸಂಘರ್ಷ ಕಾಣುವಂತಾಗಿದೆ. ಆದ್ದರಿಂದ ಈ ರೀತಿಯ ಪರಿಸ್ಥಿತಿಯಲ್ಲಿ ಬುದ್ಧನ ಶಾಂತಿ ಸಂದೇಶ ಪಾಲನೆ ಅತ್ಯಗತ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸೋಮಯ್ಯ ಮಲೆಯೂರು, ಉತ್ತನಹಳ್ಳಿ ಶಿವಣ್ಣ, ಸತೀಶ್ ಪಡುವಾರಹಳ್ಳಿ ಮೊದಲಾದವರು ಇದ್ದರು.

# ವರ್ಗಗೊಳ್ಳದ ಅಧಿಕಾರಿಗಳಿಂದ ಅವ್ಯವಸ್ಥೆ




ಮೈಸೂರು: ಯಾವುದೇ ಇಲಾಖೆಯಲ್ಲಿ ಅಧಿಕಾರಿ ವರ್ಗ ನಿಗದಿತ ಅವಧಿ ಮೀರಿ ಅದೇ ಸ್ಥಳದಲ್ಲಿ ಇರ ಬಾರದೆಂಬ ನಿಯಮವಿದೆ. ಆದರೆ, ಮಹಾನಗರ ಪಾಲಿಕೆಯಲ್ಲಿ ಸುಮಾರು ಮೂರು ವರ್ಷಗಳ ಹಿಂದೆ ಇದ್ದ ಅಧಿಕಾರಿ ವರ್ಗವೇ ಠಿಕಾಣಿ ಹೂಡಿದ್ದು, ಇದರಿಂದಾಗಿ ಪಾಲಿಕೆ ಆಡಳಿತದಲ್ಲಿ ಅವ್ಯವಸ್ಥೆ ಎದ್ದು ಕಾಣುತ್ತಿದೆ. ಸರ್ಕಾರ ಚುನಾವಣೆ ನಡೆಸದಿರುವುದು ಸಹಾ ಇದಕ್ಕೆ ಕಾರಣವಾಗಿದೆ ಎಂದು ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಣ್ಣ ಪುಟ್ಟ ಸಿಬ್ಬಂದಿಯನ್ನು ಬದಲಾಯಿಸುವವರು ದೊಡ್ಡ ಅಧಿಕಾರಿಗಳನ್ನು ಏಕೆ ಬದಲಾಯಿತುಸುತ್ತಿಲ್ಲ ಎಂದು ಪ್ರಶ್ನಿಸಿ, ಆರೋಗ್ಯಾಧಿಕಾರಿ ಸ್ಥಾನಕ್ಕೆ ವೈದ್ಯರನ್ನು ನೇಮಕ ಮಾಡುವ ಬದಲು ಓರ್ವ ಎಂಜಿನಿಯರ್ ಅನ್ನು ನೇಮಕ ಮಾಡಿದ್ದಾರೆ. ಇದು ಸರಿಯೇ, ಆರೋಗ್ಯ ವಿಷಯ ಕುರಿತು ಅವರಿಗೇನು ಮಾಹಿತಿ ಇರಲಿದೆ ಎಂಬುದನ್ನು ಗಮನಿಸದಿರುವುದು ಬೇಸರದ ಸಂಗತಿ ಯಾಗಿದೆ ಎಂದರು. ಬೃಹತ್ ಮೈಸೂರು ಬಗ್ಗೆ ಚಿಂತನೆ ನಡೆದಿದೆ. ಹೀಗಾಗಿ ಪಾಲಿಕೆಯಲ್ಲಿಯೇ ಠಿಕಾಣಿ ಹೂಡಿ ರುವವರಿಂದ ಇದರ ಕಾರ್ಯಗತ ಸಾಧ್ಯವಿಲ್ಲ ಎಂದರು.

ನಗರದ ಯೋಜನಾ ವಿಭಾಗ ನೆಲಕಚ್ಚಿದೆ. ವಲಯ ಕಚೇರಿಗಳಿಗೆ ನಾಗರಿಕರು ಹೋದರೆ ಯಾವುದೇ ಕೆಲಸ ಆಗುವುದಿಲ್ಲ. ಕುಳಿತುಕೊಳ್ಳಲು ಆಸನ ಸಹಾ ಇರದೇ ಹಿರಿಯ ನಾಗರಿಕರು ಸಮಸ್ಯೆ ಎದುರಿಸುತ್ತಿದ್ದಾರೆ. ಖಾತೆಗೆ ಅರ್ಜಿ ಸಲ್ಲಿಸಿ ಹಲವಾರು ತಿಂಗಳು ಕಳೆದರೂ ನೀಡುತ್ತಿಲ್ಲ. ಯಾವಾಗ ಕೇಳಿದರೂ ಸರ್ವರ್ ಸಮಸ್ಯೆ ಎಂಬ ಮಾತು ಕೇಳಿಬರುತ್ತದೆ. ಇದೇ ವೇಳೆ ನಗರದಲ್ಲಿ ಹೆಜ್ಜೆಗೊಂದರಂತೆ ಸಿಗ್ನಲ್ ದೀಪಗಳು ಇವೆ. ನಿಜಕ್ಕೂ ಅವುಗಳ ಅಗತ್ಯವಿದೆಯೇ ಎಂಬುದನ್ನು ಗಮನಿಸಿಲ್ಲ. ಸರ್ಕಾರ ಸಹಾ ಲ್ಯಾನ್ಸ್‌ಡೌನ್ ಕಟ್ಟಡ, ದೇವರಾಜ ಮಾರುಕಟ್ಟೆಗಳನ್ನು ನಿರ್ಲಕ್ಷಿಸಿದೆ. ಹೀಗಾಗಿ ಕೂಡಲೇ ಇತ್ತ ಗಮನ ಹರಿಸಬೇಕು. ಇಲ್ಲದಿದ್ದರೆ ನಗರದ ಬೆಳವಣಿಗೆ ಸಮರ್ಪಕವಾಗಿರದು, ನಾಗರಿಕರ ಸಮಸ್ಯೆ ಬಗೆಹರಿಯದೆಂದು ಎಚ್ಚರಿಸಿದರು. ಶ್ರೀನಿವಾಸ್, ಸುಬ್ಬಯ್ಯ, ರಂಗಸ್ವಾಮಿ, ರವಿಕುಮಾರ್, ಪ್ರಕಾಶ್, ಪ್ರೇಮಾ ಶಂಕರೇಗೌಡ ಮೊದಲಾದವರು ಇದ್ದರು.

# ಕ್ರೀಡೆಗೂ ಪ್ರಾಶಸ್ತ್ಯ ನೀಡಿ

## ವಿದ್ಯಾರ್ಥಿಗಳಿಗೆ ಡಾ.ಈ.ಸಿ.ನಿಂಗರಾಜ್ ಗೌಡ ಕಿವಿಮಾತು



ಮೈಸೂರು: ಈಗಿನ ವಿದ್ಯಾರ್ಥಿಗಳು ಓದುವುದರ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸ್ಪರ್ಧೆಗಳಲ್ಲಿ ವಿಜೇತರಾಗುವ ಮೂಲಕ ರಾಜ್ಯ, ದೇಶಕ್ಕೆ ಕೀರ್ತಿ ತರಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ತಿಳಿಸಿದರು.

ಮೈಸೂರಿನ ಲಲಿತಾದ್ರಿಪುರದಲ್ಲಿರುವ ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸ್ಕೂಲ್ ನಲ್ಲಿ ಬ್ಯಾಸ್ಕೆಟ್ ಬಾಲ್ ಕೋರ್ಟ್ ಮತ್ತು ಗಂಥಾಲಯವನ್ನೂ ಉದ್ಘಾಟಿಸಿ ಮಾತನಾಡಿ, ಬ್ಯಾಸ್ಕೆಟ್ ಬಾಲ್‌ಒಂದು ಜನಪ್ರಿಯ ಕ್ರೀಡೆಯಾಗಿದೆ. ಈ ಆಟವನ್ನು ಎರಡು ತಂಡಗಳು ಆಡುತ್ತವೆ.

ಬ್ಯಾಸ್ಕೆಟ್ ಬಾಲ್ ಅನ್ನು 1891 ರಲ್ಲಿ ಜೇಮ್ಸ್ ನಾಯಿಸ್ಮಿತ್ ಎಂಬ ಶಿಕ್ಷಕರು ಅಮೇರಿಕಾದಲ್ಲಿ ಕಂಡು ಹಿಡಿದರು. ಮೈಕಾಲ್ ಜೋರ್ಡಾನ್ ರವರಂತಹ ಪ್ರಸಿದ್ಧ ಆಟಗಾರರು ಇದ್ದಾರೆ ಎಂದು ವಿವರವಾಗಿ ಮಾತನಾಡಿದರು.

ಗ್ರಂಥಾಲಯ ಎಂದರೆ ಪುಸ್ತಕಗಳು, ಪತ್ರಿಕೆಗಳು, ಮ್ಯಾಗಜೀನ್ ಗಳು ಹಾಗೂ ಜ್ಞಾನಕ್ಕೆ ಸಂಬಂಧಿಸಿದ ವಿವಿಧ ಮಾಹಿತಿಗಳನ್ನು ಸಂಗ್ರಹಿಸಿ ಜನರಿಗೆ ಓದಲು ಮತ್ತು ಅಧ್ಯಯನ ಮಾಡಲು ನೀಡುವ ಸ್ಥಳವಾಗಿದೆ. "ಗ್ರಂಥ" ಎಂದರೆ ಪುಸ್ತಕ, "ಆಲಯ" ಎಂದರೆ ಸ್ಥಳ. ಆದ್ದರಿಂದ ಗ್ರಂಥಾಲಯವೆಂದರೆ ಪುಸ್ತಕಗಳ ಮನೆ ಅಥವಾ ಪುಸ್ತಕಗಳ ಭಂಡಾರ ಎಂದು ಹೇಳಬಹುದಾಗಿದೆ. ಪುಸ್ತಕಗಳ ಸಂಗ್ರಹ ಮಾಡಿದ ಪಾಂಡವಪುರದ ಅಂಕೇಗೌಡರವರಿಗೆ ಭಾರತ ಸರ್ಕಾರವೂ "ಪದ್ಮಶ್ರೀ" ನೀಡಿರುವುದನ್ನೂ ಸ್ಮರಿಸಿದರು. ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸಂಸ್ಥೆಯ ಕಾರ್ಯದರ್ಶಿ ಎಲ್. ರವಿ ಮೈಸೂರಿನ ವಿದ್ಯಾರ್ಥಿಗಳ ಅನೂಕೂಲಕ್ಕಾಗಿ ಸಂಸ್ಥೇಯ ಆವರಣದಲ್ಲಿ ಸುಸಜ್ಜೀತ ಈಜುಕೊಳ, ಪುಟಬಾಲ್, ಚೆಸ್, ಅಥ್ಲೇಟಿಕ್ಸ್ ಟ್ರಾಕ್, ಈಗ ಬ್ಯಾಸ್ಕೇಟ್ ಬಾಲ್ ಕೋರ್ಟ್ ನಿರ್ಮಿಸುವುದರ ಜೊತೆಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಭಾಗವಹಿಸುವ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತೀರುವುದಕ್ಕೇ ಅಭಿನಂದಿಸಿದರು. ಇದರ ಸಂಪೂರ್ಣ ಪ್ರಯೋಜನಾವನ್ನೂ ಮೈಸೂರು ಜಿಲ್ಲೆಯ ಮಕ್ಕಳು ಪಡೆದುಕೊಳ್ಳಬೇಕೆಂದರು. ಈ ಕಾರ್ಯಕ್ರಮದಲ್ಲಿ ಸಂಸ್ಥೇಯ ನಿರ್ದೇಶಕ ಡಾ.ಸುಮಲಿನಿ, ಬಿ.ಸ್ವಾಮಿ, ಪ್ರಾಂಶುಪಾಲರಾದ ಡಾ.ದೀಪ್ತಿ ಚತುರ್ವೇದಿ, ಎಂ.ಮೋಹನ್, ಚಂದ್ರಣ್ಣ, ಹರೀಶ್ ಮೋಗಣ್ಣ, ಕೆ.ಎನ್. ಸಂತೋಷ್ ಇತರರು ಭಾಗವಹಿಸಿದ್ದರು.



> **ಬ್ಯಾಸ್ಕೆಟ್ ಬಾಲ್ ಆಟವು ದೇಹದ ಆರೋಗ್ಯಕ್ಕೂ ಹಾಗೂ ಮನಸ್ಸಿನ ಬೆಳವಣಿಗೆಗೂ ಬಹಳ ಉಪಯುಕ್ತವಾಗಿದೆ. ದೇಹವನ್ನು ಚುರುಕಾಗಿ ಮತ್ತು ಬಲಿಷ್ಠವಾಗಿರಿಸುತ್ತದೆ. ಓಡುವುದು, ಜಿಗಿಯುವುದು ಇತ್ಯಾದಿಯಿಂದ ಹೃದಯ ಮತ್ತು ಸ್ನಾಯುಗಳು ಬಲವಾಗುತ್ತವೆ. ದೇಹದ ತೂಕ ನಿಯಂತ್ರಣದಲ್ಲಿರುತ್ತದೆ. ಆಟದ ವೇಳೆ ವೇಗವಾಗಿ ಓಡಬೇಕಾಗಿರುವುದರಿಂದ ಚುರುಕುತನ ಹೆಚ್ಚುತ್ತದೆ. ದೇಹದ ಸಮತೋಲನ ಮತ್ತು ಕಣ್ಣು-ಕೈ ಸಮನ್ವಯತೆ ಉತ್ತಮವಾಗುತ್ತದೆ.**
>
> **ಜಿ.ಎಸ್.ಸೋಮಶೇಖರ್** ಮೈಸೂರು ಮಹಾನಗರಪಾಲಿಕೆಯ ಉಪ ಆಯುಕ್ತ

ಮೊದಲ ಪುಟದಿಂದ

## ಪತ್ರಿಕೋದ್ಯಮದ ದಿಗ್ಗಜ ಬ್ರಹ್ಮಪುರಿಯ ಅಲೆಮಾರಿ

ಹಿರಿಯರ ಮೆಚ್ಚುಗೆಗಳಿಂದ, ಅನುಭವಗಳಿಂದ ಮುಂದೆ ತಮ್ಮ ಸಾರ್ವಜನಿಕ ಕಾರ್ಯಗಳಿಗಲ್ಲಿ ದೊಡ್ಡ ಪ್ರಮಾಣದ ಅನುಕೂಲವಾಯಿತು.

ಗುಂಡಪ್ಪವನರು ತಮ್ಮನ್ನು ಪತ್ರಿಕೋದ್ಯೋಗಿಯಾಗಿಯೇ ಗುರುತಿಸಿಕೊಂಡಿದ್ದರು. ಅಧಿಕಾರಿಗಳು, ವಕೀಲರು, ವೇದಾಧ್ಯಯನ ಸಂಪನ್ನರು, ಪುರೋಹಿತರು, ವರ್ತಕರು, ಪೌರ ಸಮಿತಿ ಸದಸ್ಯರು ಮತ್ತು ಸಂಗೀತಗಾರರು ಸೇರಿದಂತೆ ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಅವರಿಗೆ ಸ್ನೇಹ, ಸಂಪರ್ಕವಿತ್ತು. ಸಾಹಿತ್ಯ, ಸಂಗೀತ, ನಾಟ್ಯ, ಚಿತ್ರಕಲೆ ಮತ್ತು ವಾಸ್ತುಶಿಲ್ಪಗಳಲ್ಲಿ ಅವರಿಗೆ ಆಸಕ್ತಿ ಮತ್ತು ಆಳವಾದ ತಿಳಿವಳಿಕೆ ಇತ್ತು. ಅವರದು ವಾತ್ಸಲ್ಯಮಯ ವ್ಯಕ್ತಿತ್ವ.

ಪತ್ರಿಕಾ ವೃತ್ತಿ ಜನಬೋಧನೆಯ ಉದ್ದೇಶವುಳ್ಳದ್ದು, ಜನಬೋಧನೆ ಚೆನ್ನಾಗಿ ನಡೆಯಬೇಕಿದ್ದರೆ ಬೋಧಕರು ಸ್ವಲ್ಪ ಸಿದ್ಧರಾಗಬೇಕು. ಪ್ರತಿಯೊಬ್ಬ ಪತ್ರಕರ್ತನೂ ಯತ್ಕಿಂಚಿತ್ತಾದರೂ ಸಾಹಿತ್ಯ ವ್ಯಾಸಂಗ ಮಾಡಬೇಕು. ನಾವು ಎತ್ತರಕ್ಕೆ ಹೋದಷ್ಟೂ ಕೆಳಗಿನ ತಗ್ಗುದಿಣ್ಣೆಗಳು, ಏರುಪೇರುಗಳು ಕಾಣುವುದಿಲ್ಲ. ಇದಕ್ಕೆ ಹೆಚ್ಚಿನ ಅಧ್ಯಯನ ಮಾಡಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು.

## ಶಿಕ್ಷಕಿಯರಿಗೆ ಮಾತೃತ್ವ ರಜೆ ನಂತರ 5 ವರ್ಷ ಇಚ್ಛಿಸುವ ಶಾಲೆಗೆ ನಿಯುಕ್ತಿ

ತುಂಬುವುದರ ಒಳಗೆ ಸೌಲಭ್ಯ ಪಡೆಯಬಹುದು. ಶಿಕ್ಷಕಿಯರು ಮಾತೃತ್ವದ ರಜೆಯ ಜತೆಗೆ, ಶಿಶುಪಾಲನಾ ರಜೆಯನ್ನೂ ಸಂಯೋಜಿಸಿಕೊಂಡು ಪಡೆಯಬಹುದು. ಎರಡೂ ರಜೆಗಳ ಅವಧಿ ಮುಗಿದ ನಂತರ ನಾಲ್ಕು ವರ್ಷಗಳು ತಮಗೆ ಅನುಕೂಲವಾಗುವ ಶಾಲೆಗೆ

ಸ್ಥಳ ನಿಯೋಜನೆ ಮಾಡಿಸಿಕೊಳ್ಳಬಹುದು. ಒಂದೇ ಶಾಲೆಗೆ ಹೆಚ್ಚಿನ ಶಿಕ್ಷಕಿಯರು ಬೇಡಿಕೆ ಸಲ್ಲಿಸಿದರೆ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಆದೇಶ ನೀಡಲಾಗುವುದು ಎಂದು ತಿಳಿಸಿದರು.

# ಜಿಬಿಡಿಎ ಅಧ್ಯಕ್ಷರಿಂದ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಗ್ರಿ ವಿತರಣೆ



ಬಿಡದಿ; 2025-26ನೇ ಸಾಲಿಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಜಿ.ಎನ್.ನಟರಾಜ್ ಗಾಣಕಲ್ರವರು ಸೋಮವಾರ ಪರೀಕ್ಷಾ ಸಾಮಗ್ರಿಗಳನ್ನು ವಿತರಿಸಿದರು.

ಬಿಡದಿ ಪಟ್ಟಣದ ಶ್ರೀಬಸವೇಶ್ವರಸ್ವಾಮಿ ಗ್ರಾಮಾಂತರ ಪ್ರೌಢಶಾಲೆ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ 1500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಗ್ರಿಗಳನ್ನು ನೀಡಿದ ನಟರಾಜ್ರವರು ಎಸ್ಸೆಸ್ಸೆಲ್ಸಿ ಪರೀಕ್ಷೆ ನಮಗೆ ಭಯವಿಲ್ಲ, ಅದು ಯುಗಾದಿ ಹಬ್ಬ, ಮೊಬೈಲ್ ಬಿಡಿ, ಪುಸ್ತಕ ಹಿಡಿ ಎಂಬ ಘೋಷಣೆಗಳನ್ನು ವಿದ್ಯಾರ್ಥಿಗಳೊಂದಿಗೆ ಕೂಗಿ ಅವರಲ್ಲಿ ಆತ್ಮಸ್ಥೈರ್ಯ ತುಂಬಿದರು.

ಈ ವೇಳೆ ಗಾಣಕಲ್ ನಟರಾಜ್ ಮಾತನಾಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತಿರುವ ಮಕ್ಕಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಪರೀಕ್ಷಾ

ಸಾಮಗ್ರಿಗಳನ್ನು ವಿತರಣೆ ಮಾಡಲಾಗಿದೆ. ಪರೀಕ್ಷೆಯನ್ನು ಯುಗಾದಿ ಹಬ್ಬದಂತೆ ಪರಿಗಣಿಸಬೇಕೆಂದು ಮಕ್ಕಳಲ್ಲಿ ನೈತಿಕ ಸ್ಥೈರ್ಯ ತುಂಬುವ ಕೆಲಸ ಮಾಡಿದ್ದೇವೆ ಎಂದ ಅವರು ಬಿಡದಿ ಹೋಬಳಿಯಾದ್ಯಂತ ಎಲ್ಲಾ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಾಗ್ರಿಗಳನ್ನು ವಿತರಿಸಲಾಗುತ್ತಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗಯ್ಯ ಮಾತನಾಡಿ, ಬಿಡದಿ ಹೋಬಳಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ ಈ ಬಾರಿ ಉತ್ತಮ ಫಲಿತಾಂಶ ಬರುವ ವಿಶ್ವಾಸವಿದೆ. ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಿ ಶುಭಾಶಯ ಕೋರುವ ನಿಟ್ಟಿನಲ್ಲಿ ಗಾಣಕಲ್ ನಟರಾಜ್ರವರು ಉಚಿತವಾಗಿ ಪರೀಕ್ಷಾ ಸಾಮಗ್ರಿಗಳನ್ನು ವಿತರಿಸಿದ್ದಾರೆ. ಅವರಿಗೆ ಶಿಕ್ಷಣ ಮತ್ತು ಸಾಕ್ಷರತೆ ಇಲಾ ಖೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು. ಶ್ರೀಬಸವೇಶ್ವರಸ್ವಾಮಿ ಗ್ರಾಮಾಂತರ ಪ್ರೌಢಶಾಲೆಯ ಮುಖ್ಯಶಿಕ್ಷಕ ಗಿರೀಶ್, ಪ್ರಾಂಶುಪಾಲ ಜಾನ್ಸನ್, ಸಿಆರ್‌ಪಿ ಚಿಕ್ಕವೀರಯ್ಯ, ಮುಖಂಡ ನವೀನ್ ಸೇರಿದಂತೆ ಬೋದಕ ವೃಂದ ಹಾಗೂ ಸಿಬ್ಬಂದಿ ಹಾಜರಿದ್ದರು.

# ವಾಣಿಜ್ಯ, ಬಹುಮಹಡಿ ಕಟ್ಟಡ ವಿರೋಧಿಸಿ ಪ್ರತಿಭಟನೆ



ಮೈಸೂರು: ಕುಕ್ಕರಹಳ್ಳಿ ಕೆರೆಯ ಪರಿಸರದಲ್ಲಿ ವಾಣಿಜ್ಯ, ಬಹುಮಹಡಿ ಕಟ್ಟಡ ವಿರೋಧಿಸಿ ಹಾಗೂ ಆ ಭಾಗದ ಪರಿಸರ ಸಂರಕ್ಷಣೆಯಾಗಲಿ, ವಾಣಿಜ್ಯ ಕಟ್ಟಡ -ಬಹು ಮಹಡಿ ಕಟ್ಟಡಗಳನ್ನು ನಿಷೇದಿಸುವಂತೆ ಆಗ್ರಹಿಸಿ ಪರಿಸರ ಸಂರಕ್ಷಿಸಿ ಹೋರಾಟ ಸಮಿತಿ ನಗರದಲ್ಲಿ ಪ್ರತಿಭಟಿಸಿತು.

ನಗರದ ಹೃದಯ ಭಾಗದಲ್ಲಿರುವ ಪರಿಸರ ತಾಣ ಕುಕ್ಕರಹಳ್ಳಿ ಕೆರೆ ಪ್ರದೇಶ, ಈ ಹಿಂದೆ ಕೆರೆಯ ಪ್ರದೇಶದಲ್ಲಿನ ನೀರನ್ನು ಸುತ್ತಮುತ್ತಲಿನ ನಿವಾಸಿಗಳು ಕುಡಿಯುವ ನೀರಿಗಾಗಿ, ಬಟ್ಟೆ ತೊಳಿಯುವುದು, ದನ-ಕರುಗಳಿಗೆ ನೀರಿಗಾಗಿ ಬಳಸಿಕೊಳ್ಳುತ್ತಿದ್ದರು. ಕಾಲ ಕ್ರಮೇಣ ಈ ಪ್ರದೇಶವು ಬದಲಾಗಿ ಪಶು-ಪಕ್ಷಿಗಳಿಗೆ ಆಶ್ರಯ ತಾಣವಾಗಿದೆ ಹಾಗೂ ವಾಯುವಿಹಾರಿಗಳಿಗೆ ಶುದ್ಧ ಗಾಳಿಯನ್ನು ನೀಡುವ ಸುಂದರ ಪರಿಸರವಾಗಿದೆ ಎಂದರು. ಈ ಹಿಂದೆ ಮೈಸೂರು ರಾಜರು ಮೈಸೂರಿನ ಜನರಿಗಾಗಿ ಈ ಪ್ರದೇಶವನ್ನು 400 ಎಕರೆಗಿಂತಲೂ ಅಧಿಕವಾಗಿ ನಿರ್ಮಿಸಿದ್ದರು. ಆದರೆ ಪ್ರಸ್ತುತ ಈ ಕೆರೆ ಸುತ್ತಮುತ್ತಲಿನ ಪ್ರದೇಶಗಳು ಒತ್ತುವರಿಯಾಗಿ ಈಗ ಕೆರೆಯು 100 ಎಕರೆ ಹಾಗೂ ಕೆರೆ ಆವರಣವು 110 ಎಕರೆ ಮಾತ್ರ ಉಳಿದಿದೆ. ಹಾಗಾಗಿ ಈ ಪ್ರದೇಶವನ್ನು ಸಂರಕ್ಷಿಸಿ ಪರಿಸರ ಕಾಪಾಡುವುದು ನಮ್ಮೆಲ್ಲರ ಹೊಣೆಯಾಗಿದೆ. ಮೈಸೂರು ನಗರಾಭಿವೃಧಿ ಪ್ರಾಧಿಕಾರದ ಪತ್ರ ಸಂಖ್ಯೆ ಮ.ನಾ.ಪ-ನಾ. ಭು.ಉ. ಪ/86/10-11 03.02.2021ರಲ್ಲಿ ಭೂದೇವಿ ಘಾರಂನ 2 : 1/4A 1/4B 1/4C 1/4D, 1/5A, 1/5B, 1/5C, 1/5D 5 ಉದ್ಯಾನ ಮತ್ತು ಬಯಲು ಪ್ರದೇಶದಿಂದ 2 ಎಕರೆ 20 ಗುಂಟೆ ಪ್ರದೇಶವನ್ನು ವಾಣಿಜ್ಯ ವಲಯಕ್ಕೆ ಬದಲಾಯಿಸಿಕೊಂಡಿದ್ದಾರೆ.

ಆರೋಗ್ಯಕರ ಚಟುವಟಿಕೆಗಳನ್ನು ಮಾಡುತ್ತಾ ಉತ್ತಮ ಗಾಳಿ, ಸುಂದರವಾದ ವಾತವಾರಣವನ್ನು ಪಡೆಯುತ್ತಿದ್ದಾರೆ. ವಿಶ್ವವಿದ್ಯಾನಿಲಯದ ಆವರಣಕ್ಕೆ ಹೊಂದಿಕೊಂಡಿದೆ. ಇಲ್ಲಿನ ಕೆರೆಯು ದೇಶ-ವಿದೇಶಗಳ ಅಪರೂಪದ ಪಕ್ಷಿಗಳಿಗೆ ಆಶ್ರಯ ತಾಣವಾಗಿದೆ. ಇಂತಹ ಪ್ರದೇಶದಲ್ಲಿ ವಾಣಿಜ್ಯ ಕಟ್ಟಡ ಮತ್ತು ಬಹುಮಹಡಿ ಕಟ್ಟಡಗಳನ್ನು ಕಟ್ಟಲು ಯೋಜನೆಯನ್ನು ರೂಪಿಸುತ್ತಿರುವುದು ಖಂಡನೀಯ ಎಂದರು. ಪರಿಸರ ಸಂರಕ್ಷಿಸಿ ಹೋರಾಟ ಸಮಿತಿ ವೆಂಕಟಸುಬ್ಬಯ್ಯ, ಪ್ರೊ.ಜಯರಾಮಯ್ಯ, ಸಾಮಾಜಿಕ ಚಳವಳಿಗಾರ ಅರವಿಂದ್ ಶರ್ಮ, ಸಿದ್ದರಾಜು ಸೋಸಲೆ, ಪ್ರಕಾಶ್ ಬಾಬು, ಆದರ್ಶ್ ಅರಸ್, ಬಾನುಮೋಹನ್ , ಗಂಟಯ್ಯ , ಬಾನುಪ್ರಕಾಶ್, ನಟರಾಜ್ ಸುನೀಲ್ ಇದ್ದರು.

# ನೂತನ ಕಟ್ಟಡಕ್ಕೆ ವರ್ಗಗೊಳ್ಳದ ಶಾಲೆ

ಮೈಸೂರು: ತಾಲೂಕಿನ ಇಲವಾಲ ಹೋಬಳಿ ಮೈದನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ ಈಗಾಗಲೇ ಶಿಥಿಲಗೊಂಡಿದೆ. ಹೀಗಿದ್ದರೂ ನೂತನ ಕಟ್ಟಡಕ್ಕೆ ಶಾಲೆ ವರ್ಗಾವಣೆ ಮಾಡದಿರುವ ಅಧಿಕಾರಿ ವರ್ಗದ ನಡೆ ಖಂಡನೀಯ ಎಂದು ಯಾಚೇನಹಳ್ಳಿಯ ಸಾಮಾಜಿಕ ಹೋರಾಟಗಾರ ರವಿಕುಮಾರ್ ಕಿಡಿಕಾರಿದರು.

ನೂತನ ಕಟ್ಟಡ ನಿರ್ಮಾಣವಾಗಿ 4 ವರ್ಷ ಕಳೆದಿದೆ. ಹಳೇ ಕಟ್ಟಡದಲ್ಲಿ 35 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮಳೆಗಾಲ ಸಹಾ ಆರಂಭವಾಗಿದ್ದು, ಈ ಶಿಥಿಲ ಕಟ್ಟಡದಲ್ಲಿ ಕಾಲ ಕಳೆಯುವುದು ಇವರಿಗೆ ಹಾಗೂ ಶಿಕ್ಷಕ, ಬೋಧಕೇತರ ಸಿಬ್ಬಂದಿಗೆ ಅಪಾಯಕಾರಿ ಎನಿಸಿದೆ. ಹೀಗಾಗಿ ಈ ಕುರಿತು ಡಿಡಿಪಿಐಗೆ ಮನವಿ ಸಲ್ಲಿಸಿದ ವೇಳೆ ಶಾಲೆಯಲ್ಲಿ ಕೆಲವೊಂದು ಮೂಲ ಸೌಕರ್ಯ ಇಲ್ಲ ಎಂದು ತಿಳಿಸಿದ್ದಾರೆ. ಆದರೆ ಈ ಸೌಲಭ್ಯ ಒದಗಿಸುವಲ್ಲಿ ಇಲವಾಲ ಗ್ರಾಪಂ ವಿಫಲವಾಗಿದೆ. ನಿರ್ಲಕ್ಷ್ಯ ತೋರುತ್ತಿದ್ದು, ಒಂದು ವೇಳೆ ಏನಾದರೂ ಅನಾಹುತ ಸಂಭವಿಸಿದರೆ ಹೊಣೆ ಹೊರುವರೇನು ಎಂದು ಪ್ರಶ್ನಿಸಿದರು. ಡಾ. ನವೀನ್ ನಾರಾಯಣಗೌಡ, ಎನ್. ಪುಟ್ಟಸ್ವಾಮಿ, ಎಸ್.ಕೆ. ಮಹೇಶ್, ದೀಪು ಇದ್ದರು.




## 'ಭವಿಷ್ಯಕ್ಕಾಗಿ ಶಿಕ್ಷಣವನ್ನು ಪರಿವರ್ತಿಸುವುದು: ಬುದ್ಧಿವಂತ, ಅಂತರ್ಗತ ಮತ್ತು ತಲ್ಲೀನಗೊಳಿಸುವ ಕಲಿಕೆ"

# ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ




ಮೈಸೂರು: ನವದೆಹಲಿಯ ಶೈಕ್ಷಣಿಕ ಸಂವಹನಕ್ಕಾಗಿ ಒಕ್ಕೂಟ ಮತ್ತು ಮೈಸೂರು ವಿಶ್ವವಿದ್ಯಾಲಯದ ಶೈಕ್ಷಣಿಕ ಮಲ್ಟಿಮೀಡಿಯಾ ಸಂಶೋಧನಾ ಕೇಂದ್ರ ಸಹಯೋಗದಲ್ಲಿ ಮಾನಸಗಂಗೋತ್ರಿಯ ಬಿ.ಎನ್.ಬಹದ್ದೂರ್ ನಿರ್ವಹಣಾ ವಿಜ್ಞಾನ ಸಂಸ್ಥೆ ಸಭಾಂಗಣದಲ್ಲಿ "ಭವಿಷ್ಯಕ್ಕಾಗಿ ಶಿಕ್ಷಣವನ್ನು ಪರಿವರ್ತಿಸುವುದು: ಬುದ್ಧಿವಂತ, ಅಂತರ್ಗತ ಮತ್ತು ತಲ್ಲೀನಗೊಳಿಸುವ ಕಲಿಕೆ" ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಲಾಯಿತು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಶಿಕ್ಷಣವು ವ್ಯಕ್ತಿಗಳು ಮತ್ತು ಸಮಾಜವನ್ನು ಪರಿವರ್ತಿಸಲು ಅತ್ಯಂತ ಶಕ್ತಿಶಾಲಿ ಸಾಧನವಾಗಿ ಉಳಿದಿದೆ. ತ್ವರಿತ ತಾಂತ್ರಿಕ ಪ್ರಗತಿಗಳು ಮತ್ತು ವಿಕಸನಗೊಳ್ಳುತ್ತಿರುವ ಶೈಕ್ಷಣಿಕ ಪರಿಸರ ವ್ಯವಸ್ಥೆಯ ಸಂದರ್ಭದಲ್ಲಿ ವಿಚಾರ ಸಂಕಿರಣದ ವಿಷಯವು ಹೆಚ್ಚು ಪ್ರಸ್ತುತವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಉಲ್ಲೇಖಿಸುತ್ತಾ, ಆಧುನಿಕ ಶಿಕ್ಷಣವು ಸಾಂಪ್ರದಾಯಿಕ ತರಗತಿ ಬೋಧನೆಯನ್ನು ಮೀರಿ ಸಾಗಿದೆ ಮತ್ತು ಈಗ ತರಗತಿ ಕಲಿಕೆ, ಮಾರ್ಗದರ್ಶನ ಮತ್ತು ಸ್ವಯಂ-ನಿರ್ದೇಶಿತ ಅಧ್ಯಯನದ ಸಂಯೋಜನೆಯನ್ನು ಒಳಗೊಂಡಿದೆ ಎಂದು ವಿವರಿಸಿದರು

ಮುಖ್ಯ ಭಾಷಣ ಮಾಡಿದ ನವದೆಹಲಿಯ ಶೈಕ್ಷಣಿಕ ಸಂವಹನ ಒಕ್ಕೂಟದ (ಸಿಇಸಿ) ನಿರ್ದೇಶಕ ಪ್ರೊ.ಪರೀಕ್ಷತ್ ಸಿಂಗ್ ಮನ್ಹಾಸ್, ಭಾರತದ "ವಿಕ್ಷಿತ್ ಭಾರತ್ 2047" ದೃಷ್ಟಿಕೋನವನ್ನು ರೂಪಿಸುವಲ್ಲಿ ಶಿಕ್ಷಣದ ನಿರ್ಣಾಯಕ ಪಾತ್ರದ ಬಗ್ಗೆ ಮಾತನಾಡಿದರು. ತಂತ್ರಜ್ಞಾನ, ನಾವೀನ್ಯತೆ ಮತ್ತು ಅಂತರಶಿಸ್ತೀಯ ಕಲಿಕೆಯನ್ನು ಸಂಯೋಜಿಸುವ ಮೂಲಕ ವೇಗವಾಗಿ ಬದಲಾಗುತ್ತಿರುವ ಜಾಗತಿಕ ಪರಿಸರಕ್ಕೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಶಿಕ್ಷಣವು ವಿಕಸನಗೊಳ್ಳಬೇಕು ಎಂದು ಅವರು ಒತ್ತಿ ಹೇಳಿದರು. ವರ್ಷಗಳಲ್ಲಿ ತಾಂತ್ರಿಕ ಪರಿವರ್ತನೆಗಳನ್ನು ಪ್ರತಿಬಿಂಬಿಸುತ್ತಾ, ಕೃತಕ ಬುದ್ಧಿಮತ್ತೆ ಒಂದು ಪ್ರಬಲ ಸಾಧನವಾಗಿದ್ದರೂ, ಅದರ ಪರಿಣಾಮಕಾರಿತ್ವವು ಅಂತಿಮವಾಗಿ ಮಾನವನ ಇನ್ಪುಟ್ ಅನ್ನು ಅವಲಂಬಿಸಿರುತ್ತದೆ. ಯಂತ್ರವು ಮುಖ್ಯವಲ್ಲ, ಆದರೆ, ಯಂತ್ರದ ಹಿಂದಿರುವ ಮಾನವ ಮನಸ್ಸು ಮುಖ್ಯ ಎಂದು ಹೇಳಿದರು. ಯುವ ಕಲಿಯುವವರಿಗೆ ಮಾರ್ಗದರ್ಶಿ ತತ್ವಗಳಾಗಿ ಇಂಗ್ಲಿಷ್ ವರ್ಣಮಾಲೆಯ ಐದು ಸ್ವರಗಳನ್ನು ಆಧರಿಸಿದ ಚೌಕಟ್ಟನ್ನು ಹಂಚಿಕೊಂಡರು. ಎ-ಹೊಂದಾಣಿಕೆ, ಇ ಸಹಾನುಭೂತಿ, ಐ ಸಮಗ್ರತೆ, ಅವಕಾಶಗಳು ಮತ್ತು ಸಾರ್ವತ್ರಿಕತೆ ಸಂದೇಶ ನೀಡುತ್ತವೆ. ವಿದ್ಯಾರ್ಥಿಗಳು ಮತ್ತು ವೃತ್ತಿಪರರು ಪರಸ್ಪರ ಸಂಪರ್ಕ ಹೊಂದಿದ ಮತ್ತು ತಂತ್ರಜ್ಞಾನ-ಚಾಲಿತ ಜಗತ್ತಿನಲ್ಲಿ ಯಶಸ್ವಿ ಯಾಗಲು ಈ ಗುಣಗಳು ಅತ್ಯಗತ್ಯ ಎಂದರು. ಪಾಂಡಿಚೇರಿ ಕೇಂದ್ರ ವಿಶ್ವವಿದ್ಯಾಲಯದ ಮಾಜಿ ಪ್ರೊ-ವೈಸ್-ಚಾನ್ಸೆಲರ್ ಮತ್ತು ಇಎಂಆರ್‌ಸಿ ಮೈಸೂರಿನ ಮಾಜಿ ನಿರ್ದೇಶಕ ಪ್ರೊ.ಎ.ಬಾಲಸುಬ್ರಮಣಿಯನ್ ಗೌರವ ಅತಿಥಿಯಾಗಿದ್ದರು. ಮೈಸೂರು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಪ್ರೊ.ಎಸ್. ಜೆ.ಮಂಜುನಾಥ್ ಮತ್ತು ಇಎಂಆರ್‌ಸಿ ಮೈಸೂರಿನ ನಿರ್ದೇಶಕ ಡಾ.ಗಂಟಾ ರವಿಕುಮಾರ್ ಇದ್ದರು.

# ಬೆಳಗನಹಳ್ಳಿಯಲ್ಲಿ ಮಾರಮ್ಮನ ಹಬ್ಬ




ಎಚ್.ಡಿ.ಕೋಟೆ: ಬೆಳಗನಹಳ್ಳಿ ಗ್ರಾಮದಲ್ಲಿ ಶನಿವಾರದಿಂದ ಆರಂಭವಾದ ಮೂರು ದಿನಗಳ ಮಾರಮ್ಮನವರ ಹಬ್ಬದ ಹಿನ್ನಲೆ ಮೂರನೇ ದಿನವಾದ ಸೋಮವಾರ ಬೆಳಿಗ್ಗೆ ಮಾರಮ್ಮ ದೇವಾಲಯದಲ್ಲಿ ಮಾರಮ್ಮ ದೇವಿಯನ್ನು ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ದೇವಾಲಯವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಗ್ರಾಮದ ಅಂಕದಿಂದ ಮಹಿಳೆಯರು ಕಳಸಗಳನ್ನು ಹೊತ್ತು ಮಾರಮ್ಮ ದೇವಿಯ ಉತ್ಸವಕ್ಕೆ ಚಾಲನೆ ನೀಡಿದರು.

ಮೆರವಣಿಗೆಗೆ ಸತ್ತಿಗೆ, ಸೂರಪಾನಿ, ವೀರಗಾಸೆ ಮಂಗಳವಾದ್ಯಗಳು ಸಾಥ್ ನೀಡಿದವು. ಗ್ರಾಮದ ಮಹಿಳೆಯರು ತಂಬಿಟ್ಟನ್ನು ಮಾಡಿ, ಅದಕ್ಕೆ ಗಣಗಲೆ ಹೂವಿನಿಂದ ಶೃಂಗಾರ ಮಾಡಿ ಮಾರಮ್ಮ ದೇವಾಲಯಕ್ಕೆ ಬಂದು ಸೋಮವಾರ ತಂಪಿನ ಪೂಜೆ ಮಾಡಿದರು. ಬಳಿಕ ಪರಸ್ಪರ ತಂಬಿಟ್ಟು ತಿನ್ನಿಸುವ ಮೂಲಕ ಶುಭಾಶಯ ಕೋರಿದರು. ಗ್ರಾಮದ ಯಜಮಾನರಾದ ಚಲುವೇಗೌಡ, ಗೋವಿಂದೇಗೌಡ, ಹರೀಶ್, ಪ್ರಕಾಶ್, ದಾಸಾಚಾರ್, ನಾಗೇಗೌಡ, ಸೋಮಣ್ಣ, ನಾಗಪ್ಪ, ಮಹದೇವೇಗೌಡ, ಶಿವರಾಜು, ಗೋವಿಂದ, ಮಹದೇವು, ಕೂಸಪ್ಪ, ಮಂಜೇಗೌಡ, ಚಲುವೇಗೌಡ, ನಿಂಗಪ್ಪ, ಸಣ್ಣೇಗೌಡ, ಸುರೇಶ್, ಚಂದ್ರಶೇಖರ್, ಪ್ರಭು, ಮಹೇಶ್ ಸೇರಿದಂತೆ ಅನೇಕರಿದ್ದರು.

**ತಾಯಿಗೆ ತಂಬಿಟ್ಟಿನಿಂದ ತಂಪಿನ ಪೂಜೆ**

# ಬೆಂಗಳೂರಿನತ್ತ ಮಡಿವಾಳ ಮುಖಂಡರು

ಕೊಳ್ಳೇಗಾಲ: ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಅಹೋರಾತ್ರಿ ಪ್ರತಿಭಟನೆಗೆ ಬೆಂಬಲ ಸೂಚಿಸಿ ಕೊಳ್ಳೇಗಾಲ ತಾಲ್ಲೂಕಿನ ಮಡಿವಾಳ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಬೆಂಗಳೂರಿನತ್ತ ಪ್ರಯಾಣ ಬೆಳೆಸಿದರು.

ಈ ಸಂದರ್ಭದಲ್ಲಿ ಪಟ್ಟಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ ಬಳಿಕ ಘೋಷಣೆಗಳನ್ನು ಕೂಗಿ ತಮ್ಮ ಬೇಡಿಕೆಗೆ ಬೆಂಬಲ ವ್ಯಕ್ತಪಡಿಸಿದರು. ನಂತರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಅಹೋರಾತ್ರಿ ಪ್ರತಿಭಟನೆಯಲ್ಲಿ ಭಾಗವಹಿಸಲು ಬಸ್ ಮೂಲಕ ತೆರಳಿದರು.

ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸಮುದಾಯದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಘದ ಮುಖಂಡರು ಆಗ್ರಹಿಸಿದರು. ಅಲ್ಲದೆ ಹಲವು ವರ್ಷಗಳಿಂದ ಮುಂದುವರಿದಿರುವ ಈ ಬೇಡಿಕೆಗೆ ಶೀಘ್ರದಲ್ಲೇ ನ್ಯಾಯ ದೊರಕಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಮಡಿವಾಳ ಸಂಘದ ಅಧ್ಯಕ್ಷ ಕೆ. ಗೋವಿಂದಯ್ಯ, ಕಾರ್ಯದರ್ಶಿ ಪ್ರಭುಸ್ವಾಮಿ, ಯಜಮಾನರು ಮಾರಶೆಟ್ಟಿ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳ ಮುಖಂಡರು, ಯಜಮಾನರು ಹಾಗೂ ಯುವಕರು ಉಪಸ್ಥಿತರಿದ್ದು, ದೊಡ್ಡ ಸಂಖ್ಯೆಯಲ್ಲಿ ಬಸ್ ಮೂಲಕ ಬೆಂಗಳೂರಿಗೆ ತೆರಳಿದರು.



# ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಶಾರದಾ ಪೂಜೆ ಕಾರ್ಯಕ್ರಮ



ಹನೂರು: ಮಕ್ಕಳು ಅಕ್ಷರ ಅಭ್ಯಾಸದ ಜೊತೆಗೆ ತಮ್ಮ ಭವಿಷ್ಯವನ್ನು ಉಜ್ವಲ ಮಾಡಿಕೊಳ್ಳಲು ಸಂಸ್ಕಾರವನ್ನು ಸಹ ಬೆಳೆಸಿಕೊಳ್ಳಬೇಕು ಎಂದು ಕುರುಬರದೊಡ್ಡಿ ಶಾಲೆಯ ಮುಖ್ಯ ಶಿಕ್ಷಕ ಕೃಷ್ಣನಾಯಕ ತಿಳಿಸಿದರು.

ತಾಲೂಕಿನ ಕುರುಬರದೊಡ್ಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಮತ್ತು ಶಾರದಾ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಮಾತನಾಡಿದರು. ವಿದ್ಯಾರ್ಥಿ ದೆಸೆಯಿಂದಲೇ ಸಾಕಷ್ಟು ಕನಸುಗಳನ್ನು ಮಕ್ಕಳು ಹೊತ್ತು ತಂದಿದ್ದು, ಕಂಡ ಕನಸನ್ನು ನನಸು ಮಾಡಲು ಸಾಕಷ್ಟು ಶ್ರಮ ಹಾಕಬೇಕು. ಗುರಿ ತಲುಪಲು ನಿಮಗೆ ಗುರುಗಳು ಈಗಾಗಲೇ ನಿಮಗೆ ಮಾರ್ಗದರ್ಶನ ನೀಡಿದ್ದಾರೆ. ಆ ನಿಟ್ಟಿನಲ್ಲಿ ನೀವೆಲ್ಲರೂ ಸಹ ಉತ್ತಮ ಶಿಕ್ಷಣದ ಜೊತೆಗೆ ಉತ್ತಮವಾದಂತಹ ಸಂಸ್ಕಾರವನ್ನು ಕಲಿತು ಸಮಾಜಕ್ಕೆ ಒಳ್ಳೆ ವ್ಯಕ್ತಿಗಳಾಗಿ ಉತ್ತಮ ಕೊಡುಗೆಗಳನ್ನು ನೀಡಬೇಕು ಎಂದರು.

ಶಾಲಾ ಅಭಿವೃದ್ಧಿ ಮೇಲೆ ಸ್ತುವಾ ಸಮಿತಿಯ ಅಧ್ಯಕ್ಷ ರಿಜ್ವಾನ್ ಖಾನ್ ಮಾತನಾಡಿ ಏಳು ವರ್ಷಗಳ ಕಾಲ ಈ ಶಾಲೆಯಲ್ಲಿ ಕಲಿತು ಇದೀಗ ಎಂಟನೇ ತರಗತಿ ಬೇರೆ ಶಾಲೆಗೆ ಹೋಗುತ್ತಿರುವ ಎಲ್ಲಾ ಮಕ್ಕಳಿಗೂ ಶುಭವಾಗಲಿ. ಈ ಶಾಲೆಯಲ್ಲಿ ತಾವು ಕಲಿತಿರುವಂತಹ ಪಠ್ಯ ವಿಷಯಗಳು ಜೊತೆಗೆ ಪಠ್ಯೇತರ ಚಟುವಟಿಕೆಗಳ ಸಹ ಮುಂದಿನ ಹಂತದಲ್ಲಿಯೂ ಮುಂದುವರೆಯಲಿ ಪ್ರೌಢಶಾಲೆಗಳಲ್ಲಿ, ಕಾಲೇಜುಗಳಲ್ಲಿ ಉತ್ತಮ ವಿದ್ಯಾಭ್ಯಾಸವನ್ನು ಪಡೆಯುವುದರ ಮೂಲಕ ನಿಮ್ಮ ಭವಿಷ್ಯವನ್ನು ನೀವು ಚೆನ್ನಾಗಿ ಕಟ್ಟಿಕೊಳ್ಳಬೇಕು. ಆ ಮೂಲಕ ನಿಮ್ಮ ತಂದೆ ತಾಯಿಗೆ ನಿಮ್ಮ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಗೌರವವನ್ನು ತಂದುಕೊಡಬೇಕು ಎಂದರು. ಇದೇ ಸಂದರ್ಭದಲ್ಲಿ ಶಾಲೆಯ ಸಹ ಶಿಕ್ಷಕಿಯರಾದ ನಿರ್ಮಲ,ಅಶ್ವಿನಿ, ಕುಸುಮ ಸೇರಿದಂತೆ ಅಡುಗೆ ಸಿಬ್ಬಂದಿಗಳು, ಹಾಗೂ ಮಕ್ಕಳು ಭಾಗವಹಿಸಿದ್ದರು.

# ಒಳಮೀಸಲಾತಿ ವಿಚಾರದಲ್ಲಿ ಅನ್ಯಾಯ

## ಬಲಗೈ ಸಮುದಾಯದ ಆರೋಪ । ಹನೂರು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ

ಹನೂರು: ಒಳಮೀಸಲಾತಿ ವಿಚಾರದಲ್ಲಿ ನಾಗಮೋಹನ್ ದಾಸ್ ನೀಡಿರುವ ವರದಿಯು ಅವೈಜ್ಞಾನಿಕವಾಗಿದ್ದು ಹಂಚಿಕೆ ಮತ್ತು ರೋಸ್ಟರ್ ಬಿಂದುಗಳಲ್ಲಿ ಬಲಗೈ ಹೊಲಯ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದು ಖಂಡಿಸಿ ಸೋಮವಾರ ಹನೂರು ಪಟ್ಟಣದಲ್ಲಿ ಬಾರಿ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮ ಬೃಹತ್ ಪ್ರತಿಭಟನೆ ನಡೆಸಿತು.

ಹನೂರು ಪಟ್ಟಣದ ತಾಲೂಕು ಹಾಗೂ ಚಾಮರಾಜನಗರ ಜಿಲ್ಲಾ ಬಲಗೈ ಸಮುದಾಯದ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಹನೂರು ಕೊಳ್ಳೇಗಾಲ ತಾಲೂಕಿನ ಹಲವು ಗ್ರಾಮಗಳಿಂದ ಆಗಮಿಸಿದ ಬಲಗೈ ಸಮುದಾಯದ ಸಂಘಟನೆಗಳು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಟ್ಟಣದ ಮಹದೇಶ್ವರ ಕ್ರೀಡಾಂಗಣದಲ್ಲಿ ಜಮಾಯಿಸಿ ನಂತರ ಅಲ್ಲಿಂದ ಸರ್ಕಾರದ ಘೋಷಣೆ ಕೂಗುತ್ತ ಸಾಗಿದರು.

ನಂತರ ಬೃಹತ್ ಪ್ರತಿಭಟನಾ ಮೆರವಣಿಗೆ ಸಾಗಿ ಪಟ್ಟಣದ ಪೆಟ್ರೋಲ್ ಬಂಕ್, ಖಾಸಗಿ ಬಸ್ ನಿಲ್ದಾಣ, ದಿವಂಗತ ಎಚ್ ನಾಗಪ್ಪ ಸರ್ಕಲ್, ಡಾ.ಬಿಆರ್ ಅಂಬೇಡ್ಕರ್ ಸರ್ಕಲ್ ಮೂಲಕ ತಹಸೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್ ಚೈತ್ರ ಅವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ನಂತರ ಮಾತನಾಡಿದ ಹೋರಾಟಗಾರರು ಒಳ ಮೀಸಲಾತಿ ವರದಿಯು ಅವೈಜ್ಞಾನಿಕವಾಗಿದ್ದು ರೋಸ್ಟರ್ ಬಿಂದುಗಳ ಹಂಚಿಕೆಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ನಾಗಮೋಹನ್ ದಾಸ್ ಒಬ್ಬ ಸವರ್ಣೀಯ, ಅವರಿಗೆ ನೊಂದವರ ಬಗ್ಗೆ ಏನು ಗೊತ್ತಿದೆ. ಹಾಗಾಗಿ ನಾಗಮೋಹನ್ ದಾಸ್ ವರದಿ ಜಾರಿಯಾಗಬಾರದು. ಒಂದು ವೇಳೆ ಜಾರಿಯಾದರೆ ತುಂಬಾ ಕಷ್ಟ ಆಗಲಿದೆ.ಜೀವಂತ ಇರುವ ಹೊಲಯ ಸಮುದಾಯದ ಜನರನ್ನು ಶವ ಪೆಟ್ಟಿಗೆಯಲ್ಲಿ ಹಾಕಿ ಹೂಳುವ ಪರಿಸ್ಥಿತಿ ಬರುತ್ತದೆ. ಹಾಗಾಗಿ ಸರ್ಕಾರ ಮುಂದಿನ ದಿನಗಳಲ್ಲಿ ಸರಿಯಾದ ರೀತಿ ಕ್ರಮ ವಹಿಸದೆ ಇದ್ದಲ್ಲಿ ಹೋರಾಟ ತೀವ್ರವಾಗುತ್ತದೆ. ಒಳ ಮೀಸಲಾತಿಯನ್ನು ಕರ್ನಾಟಕದ ಕಾಂಗ್ರೆಸ್ ಸರ್ಕಾರ ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ಜಾರಿ ಮಾಡಲು ಹೇಳಿರುವ ಒಂದೇ ಒಂದು ಕಾರಣಕ್ಕೆ ಜಾರಿ ಮಾಡಲು ಹೊರಟಿರುವುದು ಪರಿಶಿಷ್ಟ ಜಾತಿಯ 101 ಜಾತಿಗೂ ಮಾಡುತ್ತಿರುವ ಮಹಾ ದ್ರೋಹ, ಸಾಮಾಜಿಕ ನ್ಯಾಯದ ಬಗ್ಗೆ ಬಹಳ ಕಾಳಜಿ ಇರುವ ಸರ್ಕಾರ ಎಂದು ಪರಿಶಿಷ್ಟ ಜಾತಿಯ ದೊಡ್ಡ ಸಮುದಾಯವು ನಂಬಿದ್ದು, ಈ ನಂಬಿಕೆಗೆ ವಿರೋಧವಾಗಿ ಸರ್ಕಾರ ಮಾಡಲು ಹೊರಟಿರುವ ಒಳ ಮೀಸಲಾತಿಯಿಂದ ಪರಿಶಿಷ್ಟ ಜಾತಿಯ ಒಳಗಿನ ಒಳಪಂಗಡದಲ್ಲಿ ದ್ವೇಷ ಬರುವ ರೀತಿಯಲ್ಲಿ ತರಾತುರಿಯಲ್ಲಿ ಒಳಮಿಸಲಾತಿಯನ್ನು ಜಾರಿ ಮಾಡಲು ಹೊರಟಿದೆ ಹಾಗಾಗಿ ಇದೆ ತಿಂಗಳ 25 ನೇ ತಾರೀಕು ಬೆಂಗಳೂರುನಲ್ಲಿ ನಡೆಯುವ ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದರು. ಹನೂರು ಪಟ್ಟಣದ ಯಜಮಾನರು, ಉಪನ್ಯಾಸಕ ಮಲೆ ಮಹದೇವಸ್ವಾಮಿ, ಮಲ್ಲಿಕಾರ್ಜುನ,ಪಟ್ಟಣ ಪಂಚಾಯಿತಿ ಮಾಜಿ ಸದಸ್ಯರುಗಳಾದ ಸಂಪತ್ ಕುಮಾರ್,ಸಿದ್ದರಾಜು, ಬಸವರಾಜು, ಮಹೇಶ್, ಮುಖಂಡರಾದ ಕಿರಣ್, ರವೀಂದ್ರ, ಪುಟ್ಟರಾಜು, ಕೃಷ್ಣ,ಸೇರಿದಂತೆ ಕೊಳ್ಳೇಗಾಲ ತಾಲೂಕಿನ ಕಾಮಗೆರೆ ಸಿಂಗಾನಲ್ಲೂರು, ದೊಡ್ಡಿಂದುವಾಡಿ, ಮತ್ತಿಪುರ, ತೆಳ್ಳನೂರು, ಹನೂರು ತಾಲೂಕಿನ ಮಣಗಳ್ಳಿ, ಬಂಡಳ್ಳಿ, ಅಜ್ಜೀಪುರ, ಮಾರ್ಟಳ್ಳಿ, ಲೊಕ್ಕನಹಳ್ಳಿ,ಚಿಕ್ಕಮಾಲಾಪುರ, ಪಿ. ಜಿ ಪಾಳ್ಯ, ರಾಮಾಪುರ ವ್ಯಾಪ್ತಿಯ ವಿವಿಧ ಗ್ರಾಮಗಳು ತಾಲೂಕಿನ ವಿವಿಧ ಗ್ರಾಮಗಳು ಮುಖಂಡರುಗಳು ಸಂಘಟನೆಗಳು ಭಾಗವಹಿಸಿದ್ದರು.



### ಹಕ್ಕೊತ್ತಾಯಗಳು

ನಾಗಮೋಹನ್ ದಾಸ್ ಸಮಿತಿ ನೀಡಿರುವ ಒಳ ಮೀಸಲಾತಿಯನ್ನು ಈ ಕೂಡಲೇ ರದ್ದು ಪಡಿಸಬೇಕು.ಸರ್ಕಾರ ಶೈಕ್ಷಣಿಕ ಪ್ರವೇಶ ಸಂದರ್ಭದಲ್ಲಿ ಮೂರಕ್ಕಿಂತ ಕಡಿಮೆ ಪ್ರವೇಶಾತಿಗಳು ಇದ್ದರೆ ಇಂತಹ ಸಂದರ್ಭದಲ್ಲಿ ಎಸ್.ಸಿ ಸಾಮಾನ್ಯ ಎಂದು ಪರಿಗಣಿಸಿ, ಪವರ್ಗ ಎ, ಬಿ, ಸಿ ವರ್ಗಗಳು ಅರ್ಜಿ ಸಲ್ಲಿಸಿ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು. ಸರ್ಕಾರಿ ಉದ್ಯೋಗ ನೇಮಕಾತಿ ಸಂದರ್ಭದಲ್ಲಿ ಮೂರಕ್ಕಿಂತ ಕಡಿಮೆ ಹುದ್ದೆಗಳು ಪರಿಶಿಷ್ಟ ಜಾತಿಗೆ ಮೀಸಲಾದಾಗ ಈ ಹುದ್ದೆಗಳನ್ನು, ಸರ್ಕಾರ ಭರ್ತಿ ಮಾಡಲು ಮುಂದಾದರೆ ಎಸ್.ಸಿ. ಸಾಮಾನ್ಯ ಎಂದು ಪರಿಗಣಿಸಿ, ಪರಿಶಿಷ್ಟ ಜಾತಿಯ 101 ಸಮುದಾಯವು ಅರ್ಜಿ ಸಲ್ಲಿಸುವಂತೆ ಮಾಡಬೇಕು. ಈಗ ಸರ್ಕಾರ ಜಾರಿಗೆ ತಂದಿತುವ ಒಳಮೀಸಲಾತಿ



ಮಸೂದೆಯಲ್ಲಿ ಈ ಮಾರ್ಪಾಡು ತುಂಬಾ ಅಗತ್ಯವಾಗಿರುತ್ತದೆ. ಪರಿಶಿಷ್ಟ ಜಾತಿಯ ಜಾತಿ ಪ್ರಮಾಣ ಪತ್ರವನ್ನು ಮೊದಲಿನಂತೆ ನೀಡಬೇಕು. ಒಳ ಮೀಸಲಾತಿಯಲ್ಲಿರುವ ವ್ಯತ್ಯಾಸವನ್ನು ಜಾರಿ ಮಾಡುವುದೇ ಆದರೆ ಸರಿಪಡಿಸುತನಕ ಯಾವುದೇ ಸರ್ಕಾರಿ ಹುದ್ದೆಗಳ ನೇಮಕವನ್ನು ಮಾಡಬಾರದು ಎಂದರು.

# ಸಿಲಿಂಡರ್ ಪ್ರದರ್ಶಿಸಿ ಪ್ರತಿಭಟನೆ




ರಾಮನಗರ: ಅಡುಗೆ ಅನಿಲ ಅಭಾವ ಮತ್ತು ದರ ಹೆಚ್ಚಳವನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಐಜೂರು ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಖಾಲಿ ಸಿಲಿಂಡರ್‌ಗಳನ್ನು ಪ್ರದರ್ಶಿಸಿ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದರು. ಅಡುಗೆ ಅನಿಲದ ಸಿಲಿಂಡರ್‌ಗಳ ಪೂರೈಕೆಯಲ್ಲಿ ಭಾರಿ ವ್ಯತ್ಯಯವಾಗಿದೆ. ಅಲ್ಲದೆ ದರಗಳು ಕೂಡ ಹೆಚ್ಚಾಗಿದೆ. ಜನರ ಪರವಾಗಿ ಕೇಂದ್ರ ಸರ್ಕಾರಕ್ಕೆ ಕಿಂತಿಚತ್ತು ಕಾಳಜಿ ಇಲ್ಲ ಎಂಬುದು ಸ್ಪಷ್ಟವಾಗಿದೆ ಎಂದರು.

ಈ ವೇಳೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಕೋಕಿಲ ರಾಣಿ, ಕೇಂದ್ರ ಸರ್ಕಾರ ನಿರಂತರಾಗಿ ಬಡ ಜನರ ಬದುಕಿನ ಮೇಲೆ ಪ್ರಹಾರ ಮಾಡುತ್ತಲೇ ಇದೆ. ಈಗ ಅಡುಗೆ ಅನಿಲದ ದರವನ್ನು ಹೆಚ್ಚು ಮಾಡಿ ಇನ್ನಷ್ಟು ಸಮಸ್ಯೆಗೆ ಕಾರಣವಾಗಿದೆ. ಅಮೇರಿಕಾದ ಅಧ್ಯಕ್ಷ ಟ್ರಂಪ್ ಅವರ ಕೈಗೊಂಬೆಯಂತೆ ಪ್ರಧಾನಿ ಮೋದಿ ವರ್ತಿಸುತ್ತಿದ್ದಾರೆ ಎಂದರು.

**ಜನ ವಿರೋಧಿ ಕೇಂದ್ರ ಸರ್ಕಾರ – ಗಂಗಾಧರ್**

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಗಂಗಾಧರ್ ಮಾತನಾಡಿ, ರಷ್ಯಾದಿಂದ ಬ್ಯಾರೆಲ್ 45 ಮತ್ತು 60 ರೂಗಳಿಗೆ ಕ್ರೂಡ್ ಆಯಿಲ್ ಖರೀದಿ ಮಾಡುತ್ತಿದ್ದಾಗಲೂ ಕೇಂದ್ರ ಸರ್ಕಾರ ಅಡುಗೆ ಅನಿಲದ ಬೆಲೆಯನ್ನು ಕಡಿಮೆ ಮಾಡಲಿಲ್ಲ. ಈಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಲ್ಪ ಬೆಲೆ ಏರಿಕೆಯನ್ನೇ ನೆಪ ಮಾಡಿಕೊಂಡು ಜನರಿಗೆ ಹೊರ ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು. ಪ್ರಧಾನಿಯಾಗಿ ಮನಮೋಹನ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದ್ದಾಗ 450 ರೂಗಳಿಗೆ ಅಡುಗೆ ಅನಿಲ ಸಿಲಿಂಡರ್ ಸಿಗುತ್ತಿತ್ತು ಈಗ 1000 ರೂ.ಗೆ ಏರಿಕೆ ಆಗಿದೆ.

ಅಡುಗೆ ಅನಿಲದ ಕೊರತೆ ಎದುರಾಗಿದ್ದು, ಸಣ್ಣಪುಟ್ಟ ಹೋಟೆಲ್‌ಗಳು, ಬೀದಿಬದಿ ವ್ಯಾಪಾರ ಮಾಡುವವರಿಗೆ ಕಷ್ಟವಾಗಿದೆ. ಹೋಟೆಲ್‌ಗಳು ಮುಚ್ಚುತ್ತಿವೆ, ಮಾಲೀಕರು ಸೇರಿದಂತೆ ಇಲ್ಲಿ ಕೆಲಸ ಮಾಡುವ ಕಾರ್ಮಿಕರ ಬದುಕು ಸಹ ದುಸ್ತರವಾಗುತ್ತಿದೆ. ಯುದ್ಧ ಎಂದಿಗೆ ಮುಗಿಯುತ್ತದೆಯೋ ಯಾರಿಗೂ ಗೊತ್ತಿಲ್ಲ. ಈ ಕೂಡಲೇ ಬೆಲೆ ಏರಿಕೆ ಇಳಿಸದಿದ್ದಲ್ಲಿ ಪ್ರತಿ ಗ್ರಾಮ, ಹೋಬಳಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಪ್ರತಿಭಟನೆ ನಡೆಸುವುದು ಅನಿವಾರ್ಯ ಎಂದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಹಾಗೂ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು. ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಹೆಚ್.ರಾಜು, ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷ ಪುಟ್ಟರಾಜು, ನಗರಸಭೆ ಸದಸ್ಯೆ ನಾಗಮ್ಮ, ಮುಖಂಡರಾದ ರೈಡ್ ನಾಗರಾಜು, ಸಿಎನ್‌ಆರ್ ವೆಂಕಟೇಶ್, ಕೃಷ್ಣಮೂರ್ತಿ, ಅಶೋಕ್ ಜೆಸಿಪಿ, ಪ್ರಮೋದ್, ಸುನೀಲ್, ಗುರುಪ್ರಸಾದ್, ರಾಜಮಹೇಂದರ್, ಶಕೀಲ್ ಅಹಮದ್, ಜಯಲಕ್ಷ್ಮಮ್ಮ, ಅಶ್ವತ್ಥ್, ಸಿದ್ದರಾಜು, ದೇವರಾಜು, ಸೈಯದ್ ಅರೀಫ್ ಉಲ್ಲಾ, ವಿನಯ್, ಎಂಸಿ.ಸ್ವಾಮಿ, ಶೋಭಾ, ಅರ್ಪಿತಾ, ಉಮಾ, ಅನಿತಾ, ಲೇಖಾನ, ಅಕಿಲಾಬಾನು, ಪದ್ಮಾವತಿ, ರಾಧ, ಸುಕನ್ಯಾ, ರಾಜೇಶ್ವರಿ, ಜಯಮ್ಮ, ಪ್ರಭಾವತಿ, ವಸಂತ ಸೇರಿದಂತೆ ಹಲವರಿದ್ದರು.

# ಗ್ರಾಮಸ್ಥರಿಂದ ಮಾಜಿ ಶಾಸಕರಿಗೆ ಸನ್ಮಾನ



ಗುಂಡ್ಲುಪೇಟೆ: ತಾಲೂಕಿನ ಶೀಲವಂತಪುರ ಗ್ರಾಮದಲ್ಲಿ ಮಾಜಿ ಶಾಸಕರಾದ ಸಿ. ಎಸ್. ನಿರಂಜನ್ ಕುಮಾರ್ ರವರಿಗೆ ಶೀಲವಂತಪುರ ಗ್ರಾಮಸ್ಥರು ಕೃತಜ್ಞತೆ ಸಲ್ಲಿಸಿ ಸನ್ಮಾನಿಸಿದರು.

ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್ ರವರು ಅಧಿಕಾರದಲ್ಲಿ ಇದ್ದ ಸಂದರ್ಭದಲ್ಲಿ ಶೀಲವಂತಪುರ ಗ್ರಾಮದ ಬಹುತೇಕ ಡಾಂಬರು ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಅನುದಾನ ನೀಡಿ ಅಭಿವೃದ್ಧಿ ಪಡಿಸಿದ್ದಾರೆ ಎಂಬ ಕಾರಣಕ್ಕೆ ಗ್ರಾಮಸ್ಥರು ಗ್ರಾಮದ ತುಂಬಾ ಮೆರವಣಿಗೆ ಮಾಡಿ ಸಂಭ್ರಮಾಚರಣೆ ಮಾಡಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಮಲ್ಲೇಶ್ ,ಕನ್ನೆಗಾಲ ಸ್ವಾಮಿ, ಬಿಜೆಪಿ ಮುಖಂಡರಾದ ಜಿಡಿಎಲ್ ಸುರೇಶ್, ಕಮರಹಳ್ಳಿ ರವಿ, ಕೊಡಸೋಗೆ ರಾಜು, ಎಸ್ ಸಿ ಮೋರ್ಚಾ ಜಿಲ್ಲಾಧ್ಯಕ್ಷ ಡಾ.ನವೀನ್ ಮೌರ್ಯ, ಪ್ರಧಾನ ಕಾರ್ಯದರ್ಶಿ ಮಹೇಂದ್ರ, ಶಿವಪುರ ಗೀತಾ, ಮಂಗಳಮ್ಮ, ಸರಸ್ವತಮ್ಮ ಗ್ರಾಮದ ಮುಖಂಡರುಗಳಾದ ತಮ್ಮಣ್ಣ , ಶಶಿ , ಶೇಖರ್ ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತಿತರರಿದ್ದರು.

# ಮಕ್ಕಳಿಗೆ ಶೈಕ್ಷಣಿಕ ಪರಿಕರ ವಿತರಣೆ



ಎಚ್.ಡಿ.ಕೋಟೆ: ಹುಣಸೂರು ಉಪವಿಭಾಗ ಕಚೇರಿ ಭೂದಾಖಲೆಗಳ ವಿಷಯ ನಿರ್ವಾಹಕಿ ಸರಿತಾ ಪತಿ ಗುರು ಅವರು ತಮ್ಮ ಪುತ್ರಿ ತಾರುಣ್ಯ ಅವರ ಪ್ರಥಮ ವರ್ಷದ ಹುಟ್ಟು ಹಬ್ಬವನ್ನು ಆದಿವಾಸಿ ಮಕ್ಕಳಿಗೆ ಶೈಕ್ಷಣಿಕ ಪರಿಕರಗಳನ್ನು ನೀಡುವ ಮೂಲಕ ಆಚರಿಸಿದರು.


ಎಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಹೋಬಳಿ ಮಾನಿಮೂಲೆ ಹಾಡಿಯ ನಲವತ್ತಕ್ಕೂ ಹೆಚ್ಚಿನ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು, ಪೆನ್ಸಿಲ್ ಮತ್ತಿತರ ಕಲಿಕಾ ಸಾಮಾಗ್ರಿಗಳು ಹಾಗೂ ತಿಂಡಿ, ತಿನಿಸುಗಳನ್ನು ನೀಡುವ ಮೂಲಕ ತಮ್ಮ ಮಕ್ಕಳಲ್ಲಿ ಮಾನವೀಯ ಗುಣ ಬೆಳಸಲು ಮುಂದಾಗಿದ್ದಾರೆ.

ತಮ್ಮ ಅತ್ಯಾಪ್ತರ ಹುಟ್ಟು ಹಬ್ಬಗಳಂದು ಆಶ್ರಮ ಕೇಂದ್ರಗಳಿಗೆ ಊಟ, ತಿಂಡಿ ಕೊಡಿಸುವ ಮೂಲಕ ಮೂರ್ನಾಲ್ಕು ವರ್ಷಗಳಿಂದ ಸರಿತಾ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ. ಈ ವರ್ಷ ಹಾಡಿಮಕ್ಕಳಿಗೆ ಸಹಾಯಸ್ತ ಚಾಚಿರುವುದು ಖುಷಿ ತಂದಿದೆ ಎಂದು ಸರಿತಾ ತಿಳಿಸಿದರು. ಪೀಪಲ್ ಟ್ರೀ ಸಂಸ್ಥೆಯ ಸುರೇಶ್, ಹಾಡಿಯ ಮುಖಂಡರಾದ ಗಂಗೆ, ರೂಪ, ಭಾಗ್ಯ ಸೇರಿದಂತೆ ಆದಿವಾಸಿಗಳು ಇದ್ದರು.

# 10 ವಯಸ್ಸಿನ ಬಾಲಕಿ ಮೇಲೆ ವೃದ್ಧನಿಂದ ಲೈಂಗಿಕ ದೌರ್ಜನ್ಯ

ಗುಂಡ್ಲುಪೇಟೆ: 10 ವಯಸ್ಸಿನ ಬಾಲಕಿ ಮೇಲೆ ವೃದ್ಧನೋರ್ವ ಲೈಂಗಿಕ ದೌರ್ಜನ್ಯ ನಡೆಸಿರುವ ಘಟನೆ ತಾಲೂಕಿನಲ್ಲಿ ನಡೆದಿದ್ದು, ಪೋಕ್ಸೋ ಪ್ರಕರಣ ದಾಖಲಾಗಿದೆ.

ಹಸಗೂಲಿ ಗ್ರಾಮದ ಮಹದೇವಪ್ಪ(65) ಎಂಬಾತ ಬಂಧಿತ ಆರೋಪಿ. ಸಂತ್ರಸ್ಥೆ ಬಾಲಕಿಯ ಮನೆಗೆ ಆರೋಪಿ ಮನೆಯ ಗಲ್ಲಿ ದಾಟಿಕೊಂಡೇ ಹೋಗಬೇಕಿದ್ದು, ಆಗಾಗ್ಗೆ ಬಾಲಕಿಯ ಕೆನ್ನೆ ಸವರುವುದು, ಮುತ್ತು ಕೊಡುವುದು ಮಾಡುತ್ತಿದ್ದನಂತೆ. ತಾತನ ಸಮಾನವೆಂದು ಸಾಮಾನ್ಯವಾಗೇ ಪಾಲಕರು ಭಾವಿಸಿದ್ದರು. ಆದರೆ, ಭಾನುವಾರ ಮಧ್ಯಾಹ್ನ ಬಾಲಕಿಯು ಮನೆಗೆ ತೆರಳುತ್ತಿದ್ದಾಗ ವೃದ್ಧ ಬಾಲಕಿಯ ಪಾಲಕರು ಮನೆಯಲ್ಲಿ ಇಲ್ಲದ್ದನ್ನು ಗಮನಿಸಿ ಲೈಂಗಿಕ ದೌರ್ಜನ್ಯ ಎಸಗಿ, ದೇಹದ ಹಲವೆಡೆ ಪರಚಿ-ಚಿವುಟಿ ಗಾಯಗೊಳಿಸಿದ್ದಾನೆ. ಬಾಲಕಿಯು ಸಪ್ಪೆ ಮೋರೆ ಹಾಕಿಕೊಂಡಿದ್ದನ್ನು ಗಮನಿಸಿದ ಪಾಲಕರು ವಿಚಾರಿಸಿದಾಗ ವೃದ್ಧನ ಪೈಶಾಚಿಕ ಕೃತ್ಯ ಬೆಳಕಿಗೆ ಬಂದಿದೆ. ಸದ್ಯ, ಬೇಗೂರು ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



**ಮಹಿಳಾ ದಿನಾಚರಣೆ ಹಾಗೂ ಸಾವಿತ್ರಿಬಾಯಿ ಪುಲೆ ಜಯಂತಿ**

# 30 ಮಂದಿ ಶಿಕ್ಷಕಿಯರಿಗೆ ಮಾತೆ ಸಾವಿತ್ರಿಬಾಯಿ ಪುಲೆ ಪ್ರಶಸ್ತಿ

ಚಾಮರಾಜನಗರ, ನಗರದ ಜೆ,ಎಚ್,ಪಾಟೇಲ್ ಸಭಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯ ಚಾಮರಾಜನಗರ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಜಿಲ್ಲಾ ಘಟಕದ ವತಿಯಿಂದ ಮಹಿಳಾ ದಿನಾಚರಣೆ ಹಾಗೂ ಸಾವಿತ್ರಿಬಾಯಿ ಪುಲೆ ಜಯಂತಿ ಅಂಗವಾಗಿ 30 ಜನ ಶಿಕ್ಷಕಿಯರಿಗೆ ಮಾತೆ ಸಾವಿತ್ರಿಬಾಯಿ ಪುಲೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು

ಕಾರ್ಯಕ್ರಮವನ್ನು ಎಂಎಸ್‌ಐಎಲ್‌ನ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಸಿ, ಪುಟರಂಗ ಶೆಟ್ಟಿ ಉದ್ಘಾಟಿಸಿ ಮಾತನಾಡಿದ ಅವರು ಮಹಿಳೆಯರು ಇಂದು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಇದ್ದರೆ ಸಾವಿತ್ರಿಬಾಯಿ ಪುಲೆ ಡಾ. ಬಿಆರ್ ಅಂಬೇಡ್ಕರ್ ಅವರಂಥವರು ಪ್ರೇರಣೆ ಅಂದಿನ ಕಷ್ಟದ ಪರಿಸ್ಥಿತಿಯಲ್ಲೇ ಸಾವಿತ್ರಿಬಾಯಿಪುಲಿ ಅವರು ಶಿಕ್ಷಣ ನೀಡಲು ಮುಂದಾಗಿದ್ದರು ಇಂದು ಸಾವಿರಾರು ಶಿಕ್ಷಕಿಯರಿದ್ದು ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ದೊರೆಯಲು ತಾವು ಬದ್ಧತೆಯಿಂದ ಪರಿಣಾಮಕಾರಿಯಾಗಿ



ಬೋಧನೆ ನೀಡಬೇಕು ಎಂದು ಶಿಕ್ಷಕರಿಗೆ ತಿಳಿಸಿದರು ಈ ನಿಟ್ಟಿನಲ್ಲಿ ಸಂಘ ಶಿಕ್ಷಕಿಯರಿಗೆ ಸಾವಿತ್ರಿಬಾಯಿ ಪುಲೆ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಮೆಚ್ಚುಗೆಯಾಗಿದೆ ಎಂದು ತಿಳಿಸಿದರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಅಶ್ವಿನಿ ಅವರು ಮಾತನಾಡಿ ಮಹಿಳೆ ಆಬಲೆಯಲ್ಲ ಮಹಿಳೆ ಎಂದರೆ ಒಂದು ಶಕ್ತಿ ಮಹಿಳೆ ಒಂದು ಕುಟುಂಬವನ್ನು ಮುನ್ನೆಡೆಸಬಲ್ಲಳು ಅ??ಟೇ ಅಲ್ಲ ಇಂದು ದೇಶವನ್ನು ಕಟ್ಟಿ ಮುನ್ನಡೆಸಬಲ್ಲಳು, ಪ್ರಾಥಮಿಕ ಶಿಕ್ಷಣ ಗಟ್ಟಿಯಾದರೆ ಮಾತ್ರ ಶಿಕ್ಷಣದ ಗಟ್ಟಿತನ ಉಳಿಯುವುದು ಎಂದರು.

ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ ಪ್ರಸ್ತಾವಿಕ ಮಾತನಾಡಿ ಶಿಕ್ಷಕರ ಸಂಘವು ಪ್ರತಿ ವರ್ಷವೂ ಸಾವಿತ್ರಿಬಾಯಿ ಪುಲೆ ಹಾಗೂ ಮಹಿಳಾ ದಿನಾಚರಣೆಯನ್ನು ಸಂಘಟಿಸಿ ಉತ್ತಮ ಮಹಿಳಾ ಶಿಕ್ಷಕಿಯರಿಗೆ ಸಾವಿತ್ರಿಬಾಯಿ ಪುಲೆ ಹೆಸರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಸಂಘವು ಶಿಕ್ಷಕರ ಸಮಸ್ಯೆಗಳಿಗೆ ಸದಾ ಧ್ವನಿಯಾಗಿ ನಿಲ್ಲಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎ,ಪಿ,ಎಂ,ಸಿ ಮಾಜಿ ಅಧ್ಯಕ್ಷ ಬಿ,ಕೆ ರವಿಕುಮಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷರಾದ ಡಾ ರೇಣುಕಾ ದೇವಿ, ಕಾರ್ಯದರ್ಶಿ ಭರತ್ ಭೂಷಣ್, ಖಜಾಂಚಿ ಶಿವಕುಮಾರಯ,?ಯ ಹಿರಿಯ ಉಪಾಧ್ಯಕ್ಷ ಎಂ ಡಿ ಮಹದೇವಯ್ಯ, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಸಿ ಕೆ ರಾಮಸ್ವಾಮಿ, ಕಾರ್ಯದರ್ಶಿ ಸುಧಾ ಎನ್, ಪದಾಧಿಕಾರಿಗಳಾದ ಬಿ ಕೃಷ್ಣಮೂರ್ತಿ, ಸವಿತಾ ರಾಣಿ, ಎಸ್‌ಜಿ ರಾಜು, ಧನಂಜಯ, ಶಿವಕುಮಾರ್ ಸಮಿವುಲ್ಲಾ, ರಾಜು , ಶಬಾನಾ, ಅಂಜುಮ್, ಸಾವಿತ್ರಿಬಾಯಿ ಪುಲೆ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಭವಾನಿದೇವಿ, ಕಾರ್ಯದರ್ಶಿ ಸುಶೀಲಾ ಸಿಎಂ, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಮೂರ್ತಿ, ಕಾರ್ಯದರ್ಶಿ ಶಿವನಂಜಯ,?ಯ ಸೋಮಶೇಖರ್ ಶ್ವೇತ, ಮಮತ, ನಂಜುಂಡಸ್ವಾಮಿ, ಲತಾ, ಸೇರಿದಂತೆ ಇತರರು ಹಾಜರಿದ್ದರು.

# ಗೃಹ ಅಡುಗೆ ಅನಿಲ ಸಿಲಿಂಡರ್‌ಗಳು ಸಮರ್ಪಕವಾಗಿ ಲಭ್ಯ

## ಗ್ರಾಹಕರ ಅನುಕೂಲಕ್ಕೆ ಸಹಾಯವಾಣಿ–ಜಿಲ್ಲಾಧಿಕಾರಿ ಶ್ರೀರೂಪ

ಚಾಮರಾಜನಗರ, ಜಿಲ್ಲೆಯಲ್ಲಿ ಗೃಹಬಳಕೆ ಎಲ್ ಪಿಜಿ ಗ್ಯಾಸ್ ಸಿಲಿಂಡರ್ ಗಳು ಸಮರ್ಪಕವಾಗಿ ಸಂಗ್ರಹದಲ್ಲಿದ್ದು ಸರಬರಾಜು ಮಾಡಲಾಗುತ್ತಿದೆ.ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗದೇ ಅಗತ್ಯವಿರುವ ಪ್ರಮಾಣದಲ್ಲಿ ಮಾತ್ರ ಬುಕ್ ಮಾಡಿ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಮನವಿ ಮಾಡಿದ್ದಾರೆ.



ಅಡುಗೆ ಅನಿಲವನ್ನು ಮಿತಬಳಕೆ ಪೂರೈಕೆಗಾಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಎಲ್ ಪಿಜಿ ವಿತರಕರೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳ ಸಮರ್ಪಕ ಸಂಗ್ರಹ ಮತ್ತು ಸರಬರಾಜು ಲಭ್ಯವಿರುವುದನ್ನು ದೃಢಪಡಿಸಿ, ಎಂದಿನಂತೆ ಎಲ್ ಪಿಜಿ ವಿತರಕರು ಗ್ರಾಹಕರ ಮನೆಬಾಗಿಲಿಗೆ ಸರಬರಾಜು ಮಾಡಲಿದ್ದಾರೆ. ಈ ಬಗ್ಗೆ ಜಿಲ್ಲೆಯ ಎಲ್ಲಾ ಎಲ್‌ಪಿಜಿ ವಿತರಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಸಾರ್ವಜನಿಕರು ಯಾವುದೇ ರೀತಿಯ ಆತಂಕಕ್ಕೆ ಒಳಗಾಗದೆ ಅಗತ್ಯವಿರುವ ಪ್ರಮಾಣದಲ್ಲಿ ಗ್ಯಾಸ್ ಸಿಲಿಂಡರ್ ಪಡೆಯಬಹುದು. ಎಲ್. ಪಿ.ಜಿ ವಿತರಣೆಯಲ್ಲಿ ಏನಾದರೂ ಕುಂದುಕೊರತೆಗಳು ಕಂಡುಬಂದಲ್ಲಿ, ಈ ಕೆಳಗಿನ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ, ಪರಿಹಾರ ಕಂಡುಕೊಳ್ಳಬಹುದಾಗಿದೆ.

- **ಚಾಮರಾಜನಗರ ತಹಶೀಲ್ದಾರ್ ಕಚೇರಿ ಮೊ.9743122301,**
- **ಗುಂಡ್ಲುಪೇಟೆ ತಹಶೀಲ್ದಾರ್ ಕಚೇರಿ ಮೊ.9945415179**
- **ಯಳಂದೂರು ತಹಶೀಲ್ದಾರ್ ಕಚೇರಿ ಮೊ.9902039929**
- **ಕೊಳ್ಳೇಗಾಲ ತಹಶಿಲ್ದಾರ್ ಕಚೇರಿ ಮೊ.8453500797**
- **ಹನೂರು ತಹಶೀಲ್ದಾರ್ ಕಚೇರಿ ಮೊ. 6360025850 ಅನ್ನು ಸಂಪರ್ಕಿಸಬಹುದಾಗಿದೆ.**

ಯಾವುದೇ ಅನಧಿಕೃತ ಗ್ಯಾಸ್ ಸಿಲಿಂಡರ್ ಸಂಗ್ರಹಣೆ ಅಥವಾ ಅಕ್ರಮ ಮಾರಾಟ ಕಂಡುಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆ–1955 ಹಾಗೂ ಸಂಬಂಧಿತ ನಿಯಂತ್ರಣ ಆದೇಶಗಳಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು. ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ ಗಳ ಸಮರ್ಪಕ ಹಾಗೂ ಸುಗಮ ಸರಬರಾಜು ನಿರ್ವಹಣೆಗೆ ಜಿಲ್ಲೆಯ ಸಾರ್ವಜನಿಕರು ಸಹಕರಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಚಾಮರಾಜದಲ್ಲಿ ಗ್ಯಾರಂಟಿ ಕಚೇರಿ ಉದ್ಘಾಟನೆ



ಮೈಸೂರು: ಮಹಾನಗರಪಾಲಿಕೆ ವಲಯ ಕಚೇರಿ ನಾಲ್ಕರಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಚಾಮರಾಜ ವಿಧಾನಸಭಾ ಕ್ಷೇತ್ರದ ಕಚೇರಿಯನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿದರು.

ಬಳಿಕ ಮಾತನಾಡಿ ನನ್ನ ಕ್ಷೇತ್ರದ ಗ್ಯಾರಂಟಿ ಸಮಿತಿಯ ಕ್ಷೇತ್ರದ ಕಚೇರಿಯನ್ನು ವಲಯ ಕಚೇರಿಯಲ್ಲಿ ತೆರೆಯಲಾಗಿದೆ. ಇದರೊಟ್ಟಿಗೆ 10 ಸದಸ್ಯರನ್ನು ನೇಮಿಸಲಾಗಿದ್ದು, ಮುಂದಿನ ದಿನಗಳಲ್ಲಿ ಈ ಸಮಿತಿ ಕ್ಷೇತ್ರದಲ್ಲಿ ಗ್ಯಾರಂಟಿ ಫಲಾನುಭವಿಗಳನ್ನು ಗುರುತಿಸಿ ಪರಿಶೀಲಿಸಬೇಕು. ಇದುವರೆವಿಗೂ ಯಾರಾದರೂ ಗ್ಯಾರಂಟಿ ಯೋಜನೆಗಳಿಂದ ವಂಚಿತರಾಗಿದ್ದರೆ ಅಂತಹವರನ್ನು ಗುರುತಿಸಿ ಅವರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಕ್ಷೇತ್ರದಲ್ಲಿ ಉತ್ತಮ ರೀತಿಯ ಜನಸೇವೆ ಮಾಡಲಿ ಎಂದು ಹೇಳಿದರು.

ಗ್ಯಾರಂಟಿ ಯೋಜನೆಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಸುಶೀಲ ಮರಿಗೌಡ ಸಿದ್ದರಾಮಯ್ಯ ಹಾಗೂ ಶಾಸಕರಾದ ಹರೀಶ್‌ಗೌಡರು ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಸೇವೆ ಮಾಡುವ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತೇನೆ. ಪ್ರತಿ ಮನೆಗಳಿಗೂ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆ ತಲುಪಿರುವ ಖಾತರಿ ಮಾಡುತ್ತೇನೆಂದರು. ಇದೇ ವೇಳೆ ಸದಸ್ಯರಾದ ಬಿ.ಸುರೇಶ್, ಎ.ರಾಜು, ಆನಂದ್, ಸಮೀನ ಕೌಸರ್, ಚಂದ್ರಕಲಾ, ಎಂ.ವಿ.ವಿಕಾಸ್ ಸಿಂಹ, ಎಂ.ರಾಮಕೃಷ್ಣ, ಜಿ.ವೆಂಕಟೇಶ್, ಸದಸ್ಯ ಕಾರ್ಯದರ್ಶಿಯಾಗಿ ವಲಯ ಕಚೇರಿ 6ರ ಕಂದಾಯ ಅಧಿಕಾರಿ ಎಂ.ಬಸವಣ್ಣರನ್ನು ಇದೇ ವೇಳೆ ಅಭಿನಂಧಿಸಲಾಯಿತು. ಇದೇ ವೇಳೆ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ದೇವರಾಜ ಬ್ಲಾಕ್ ಅಧ್ಯಕ್ಷ ಡಿ.ನಾಗಭೂಷಣ್, ಮಾಜಿ ಮೇಯರ್ ಮೋದಾಮಣಿ ಇನ್ನಿತರರು ಉಪಸ್ಥಿತರಿದ್ದರು.

## ನಾಳೆ ದಿಶಾ ಸಭೆ

ಚಾಮರಾಜನಗರ: ಮಾ. 18ರಂದು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆ

ಚಾಮರಾಜನಗರ, ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 18ರಂದು ಮಧ್ಯಾಹ್ನ 1.30 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಪ್ರಕಟಣೆ ತಿಳಿಸಿದೆ.

# ಮಾ.25 ರಂದು ಬಲಗೈ ಸಮಾವೇಶ



ಮೈಸೂರು: ಒಳ ಮೀಸಲಾತಿ ಕುರಿತು ಸಾಕಷ್ಟು ಚರ್ಚೆಗಳು ನಡೆದಿದ್ದು, ಈ ಕುರಿತ ಗೊಂದಲ ಕೂಡಲೇ ಬಗೆಹರಿಸಬೇಕೆಂದು ಆಗ್ರಹಿಸಿ ಬಲಗೈ ಸಮುದಾಯಗಳ ಒಕ್ಕೂಟದ ವತಿಯಿಂದ ಮಾ. 25 ರಂದು ಬೆಳಗ್ಗೆ 10ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಶಕ್ತಿ ಪ್ರದರ್ಶನ ಸಮಾವೇಶ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಮೊದಲಾದ ಹಳೇ ಮೈಸೂರು ಭಾಗದಿಂದ ಸೇರಿದಂತೆ ರಾಜ್ಯದ 31 ಜಿಲ್ಲೆಗಳಿಂದ ಸುಮಾರು 3 ಲಕ್ಷ ಮಂದಿ ಅಲ್ಲಿ ಸೇರಲಿದ್ದಾರೆ. ಮೈಸೂರು ಭಾಗದಿಂದ ಸುಮಾರು 50 ಸಾವಿರ ಮಂದಿ ತಮ್ಮದೇ ಖರ್ಚಿನಲ್ಲಿ ಅಲ್ಲಿಗೆ ಆಗಮಿಸಿ ಪಾಲ್ಗೊಳ್ಳಲಿದ್ದಾರೆ. ಇದು ಯಾರ ವಿರುದ್ಧವೂ ಅಲ್ಲ. ಬಲಗೈ ಹಾಗೂ ಎಡಗೈ ಸಮುದಾಯಗಳು ಒಗ್ಗಟ್ಟಿನಿಂದ ಇರಬೇಕೆಂಬ ಆಶಯ ತಮ್ಮದಾಗಿದೆ ಎಂದರು. ನಾಗಮೋಹನ ದಾಸ್ ವರದಿ ಸಂಪೂರ್ಣ ಕಡೆಗಣಿಸಬೇಕು, ಅದು ವೈಜ್ಞಾನಿಕವಾದುದಲ್ಲ, ಕೇವಲ ಗೊಂದಲ ಸೃಷ್ಟಿಸಿದೆ. ಎಡಗೈ, ಬಲಗೈ ಸಮುದಾಯದ ನಡುವೆ ವೈಮನಸ್ಯ ತಂದೊಡ್ಡಿದೆ. ಈ ಕುರಿತು ಸರ್ಕಾರದ ಗಮನ ಮತ್ತೊಮ್ಮೆ ಸೆಳೆಯಲಾಗುವುದೆಂದರು. ನಾಗಮೋಹನ ದಾಸ್ ವರದಿಯು ಬಲಗೈ ಸಮುದಾಯದ ಜನಸಂಖ್ಯೆಯ ನಿಖರ ಮಾಹಿತಿ ನೀಡಿಲ್ಲ. ಇದರಲ್ಲಿ ರೋಸ್ಟರ್ ಬಿಂದುವಿನಲ್ಲಿ ಅನ್ಯಾಯವಾಗಿದೆ. ಹೀಗಾಗಿ ಸರ್ಕಾರ ನೇಮಕ ಮಾಡಿಕೊಳ್ಳಲುದ್ದೇಶಿಸಿರುವ ಹುದ್ದೆಗಳಿಗೆ ಒಳ ಮೀಸಲಾತಿ ಅನ್ವಯಿಸಬಾರದು. ಈ ಕುರಿತು ಈಗಾಗಲೇ ತಮ್ಮ ಅಭಿಪ್ರಾಯ ಮಂಡಿಸಿದ್ದೇವೆ. ಈಗ ಇದನ್ನು ಪುನರುಚ್ಚರಿಸಲಾಗುವುದೆಂದರು. ಇನ್ನು, ಕೆಲವರು ಮತ್ತೆ ಮತ್ತೆ ತಮ್ಮ ಸಮುದಾಯ ಹಾಗೂ ಸಚಿವರು ಹಾಗೂ ನಾಯಕರನ್ನು ಅವಹೇಳನ ಮಾಡುತ್ತಿರುವುದು ಸರಿಯಲ್ಲ. ಇದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.ಜ್ಞಾನಪ್ರಕಾಶ ಸ್ವಾಮೀಜಿ, ನಾಗಿದೇವ ಸ್ವಾಮೀಜಿ, ಮಣಿಯಯ್ಯ, ಸೋಮಯ್ಯ ಮಲೆಯೂರು, ತಿಮ್ಮಯ್ಯ ಇದ್ದರು.

# 21ರಂದು ಅಟ್ಟುಣ್ಣುವ ಜಾತ್ರೆ



ಮಂಡ್ಯ: ತಾಲೂಕಿನ ಕೊತ್ತತ್ತಿ ಹೋಬಳಿಯ ಸಂತೆಕಸಲಗೆರೆ ಗ್ರಾಮದ ಶ್ರೀಭೂಮಿಸಿದ್ದೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಾ.21ರಂದು ಅಟ್ಟುಣ್ಣುವ ಜಾತ್ರಾ ಮಹೋತ್ಸವ ಆಯೋಜಿಸಲಾಗಿದೆ ಎಂದು ಶ್ರೀಭೂಮಿಸಿದ್ದೇಶ್ವರಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಕೆ.ಸಿದ್ದರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷ ಯುಗಾದಿ ಹಬ್ಬದ 2ನೇ ದಿನದಂದು ಕೊತ್ತತ್ತಿ, ಸಂತೆಕಸಲಗೆರೆ, ಕಾರಸವಾಡಿ, ಮೊತ್ತಹಳ್ಳಿ, ಮಂಗಲ, ಹನಿಯಂಬಾಡಿ ಮತ್ತು ಬೇವಿನಹಳ್ಳಿ ಗ್ರಾಮಸ್ಥರು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವರು. ಈ ಹಿನ್ನಲೆ ಬಾಯಿಬೀಗ ಸೇವಾಕಾರ್ಯ ನಡೆಸಿಕೊಂಡು ಬರುತ್ತಿದ್ದಾರೆ ಎಂದರು.

ಯುಗಾದಿ ಹಬ್ಬದ 3ನೇದಿನ 35–40 ಸಾವಿರ ಸದ್ಭಕ್ತರು ದೇವಾಲಯದ ಸುತ್ತಮುತ್ತ ಮಾಂಸಾಹಾರದ ಅಟ್ಟುಣ್ಣುವ ಜಾತ್ರ ನಡೆಸಲಿದ್ದಾರೆ. ಭಕ್ತರು ಸ್ವತಃ ತಾವೇ ಅಡುಗೆ ತಯಾರಿಸಿ ಅವರ ಗ್ರಾಮಗಳಿಂದ ಬರುವ ದಾಸಪ್ಪ ಅವರು ತರುವ ದೃಷ್ಟಿಮುಖ ದೇವರ ಮುಂದೆ ಎಡೆ ನೀಡಿ ಪೂಜೆ ಸಲ್ಲಿಸಿದ ನಂತರ ಜಾತ್ರೆಯಲ್ಲಿ ಭಾಗವಹಿಸುವ ತಮ್ಮ ಕುಲದವರಿಗೆ ಪ್ರಸಾದ ರೂಪದಲ್ಲಿ ಉಣಬಡಿಸುತ್ತಾರೆ ಎಂದು ಹೇಳಿದರು. ಜಾತ್ರಾ ಮಹೋತ್ಸವ ಮುಗಿದ ನಂತರ ದೇವಾಲಯದ ರಾಜಗೋಪುರ ನಿರ್ಮಾಣ ಕಾರ್ಯ ನಡೆಯಲಿದೆ. ಇದಕ್ಕೆ 4ರಿಂದ 5 ಕೋಟಿ ರೂ.ಗಳ ಹಣದ ಅವಶ್ಯಕತೆಯಿದ್ದು, ಭಕ್ತರು ದೇಣಿಗೆ ನೀಡುವಂತೆ ಇದೇ ವೇಳೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ಎಸ್. ಕೆಂಪೇಗೌಡ, ಕಾರ್ಯದರ್ಶಿ ಕೆಂಪಸಿದ್ದೇಗೌಡ, ಜಂಟಿ ಕಾರ್ಯದರ್ಶಿ ಬಸವರಾಜು, ಖಜಾಂಚಿ ಕೆ.ಟಿ.ಜಗದೀಶ್ ಅಶೋಕ್, ಮೋಹನ್ ಇದ್ದರು.

# ಕೆಂಗಲ್ ಕರ್ನಾಟಕ ಏಕೀಕರಣದ ರೂವಾರಿ

## ಸಿ.ಎಂ.ಲಿಂಗಪ್ಪ ಅಭಿಮತ । ಕೆಂಗಲ್ ಹನುಮಂತಯ್ಯ ನೆನಪು ಕಾರ್ಯಕ್ರಮ



ರಾಮನಗರ: ರಾಮನಗರ ತಾಲ್ಲೂಕಿನಲ್ಲಿ ಜನಿಸಿ ರಾಜ್ಯದ ಮೊದಲ ಚುನಾಯಿತ ಮುಖ್ಯಮಂತ್ರಿಯಾಗಿದ್ದ, ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ನೆನಪು ಕಾರ್ಯಕ್ರಮ ಯಶಸ್ವಿಯಾಯಿತು.

ಜನ ಜಾಗೃತಿ ವೇದಿಕೆ ಹಾಗೂ ನಮ್ಮವರು ಸಂಘಟನೆಗಳು ಸಂಯುಕ್ತವಾಗಿ ನಗರದ ಡಾ. ಬಿ.ಅರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆಂಗಲ್ ಹನುಮಂತಯ್ಯ ಅವರ ಜೀವನ, ವ್ಯಕ್ತಿತ್ವ, ರಾಜಕೀಯ ಮುಂತಾದ ವಿಚಾರಗಳ ಬಗ್ಗೆ ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಸೇರಿದಂತೆ ಗಣ್ಯರ ಭಾಷಣ, ಕೆಂಗಲ್ ಹನುಮಂತಯ್ಯ ಅವರ ಬಗ್ಗೆ ಜನರಿಗಿದ್ದ ಅಭಿಮಾನ ಹಲವು ಪಟ್ಟು ಹೆಚ್ಚಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಮಾತನಾಡಿ, ಕೆಂಗಲ್ ಹನುಮಂತಯ್ಯ ಅವರು ಕರ್ನಾಟಕದ ನಿಜವಾದ ಶಿಲ್ಪಿ. ಕರ್ನಾಟಕ ಏಕೀಕರಣಕ್ಕೆ ಮುಂದಡಿ ಇಟ್ಟು ಅದರ ರೂವಾರಿಯಾದರು. ಅದೇ ಕಾರಣಕ್ಕೆ ಅಧಿಕಾರ ಕಳೆದುಕೊಂಡರು ಎಂದು ಹೇಳಿದರುಕೆಂಗಲ್ ಹನುಮಂತಯ್ಯ ಅವರು, ಕಡು ಪ್ರಾಮಾಣಿಕರಾಗಿದ್ದರು. ಮಾದರಿ ರಾಜಕಾರಣಕ್ಕೆ ಮೇಲ್ಪಂಕ್ತಿ ಹಾಕಿದ ಮುತ್ಸದ್ದಿ ರಾಜಕಾರಣಿಯಾಗಿದ್ದರು ಎಂದರು.

1972ರಲ್ಲಿ ನನಗೆ ರಾಮನಗರದಿಂದ ಕಾಂಗ್ರೆಸ್ ಟಿಕೆಟ್ ಕೊಡಿಸಲು ಕೆಂಗಲ್ ಮುಂದಾಗಿದ್ದರು. ಆದರೆ, 1978ರ ಹೊತ್ತಿಗೆ ಕಾಂಗ್ರೆಸ್ ತೊರೆದು ಸ್ವರಾಜ್ಯ ಪಕ್ಷ ಸ್ಥಾಪಿಸಿದ್ದ ಅವರ ಮತ್ತು ನನ್ನ ನಡುವೆ, ರಾಮನಗರದಲ್ಲಿ ಸ್ಪರ್ಧೆ ವಿಷಯಕ್ಕೆ ಬಿರುಕುಂಟಾಯಿತು. ಕಾಂಗ್ರೆಸ್ ಕಟ್ಟಾಳಾಗಿದ್ದ ನಾನು ಅವರನ್ನು ಬೆಂಬಲಿಸಲಿಲ್ಲವೆಂಬ ಕೋಪ ಅವರಿಗಿತ್ತು ಎಂದು ತಮ್ಮ ನೆನಪಿನ ಸುರುಳಿ ಬಿಚ್ಚಿಟ್ಟರು.

ಖ್ಯಾತ ವಕೀಲರಾಗಿದ್ದ ಕೆಂಗಲ್ ಅವರಿಗೆ ಕಕ್ಷಿದಾರರು ಕ್ಯೂ ನಿಲ್ಲುತ್ತಿದ್ದರು. ಜನಸಂದಣಿ ತಗ್ಗಿಸಲು ₹1000 ಸಾವಿರಕ್ಕಿಂತ ಕಡಿಮೆ ಶುಲ್ಕ ಪಡೆಯು ವುದಿಲ್ಲ ಎಂದು ಹೇಳಿದರು ಜನ ಅವರ ಬಳಿ ಬರುತ್ತಿದ್ದರು. ನಂತರ ಅವರು ವಕೀಲ ವೃತ್ತಿ ತ್ಯಜಿಸಿ ದೇಶಸೇವೆಗೆ ತೊಡಗಿಸಿಕೊಂಡರು ಕಿರಿಯ ವಯ ಸ್ಸಿನಲ್ಲೇ ಮುಖ್ಯಮಂತ್ರಿ ಹುದ್ದೆಗೇರಿದರು ಎಂದರು.

### ಕಡು ಸ್ವಾಭಿಮಾನಿಯಾಗಿದ್ದ ಹನುಮಂತಯ್ಯ – ಕೆ.ಶೇಷಾದ್ರಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಹಿಸಿದ್ದ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಮಾತನಾಡಿ, ಕೆಂಗಲ್ ಹನುಮಂತಯ್ಯ ಅವರು ಕಡು ಸ್ವಾಭಿಮಾನಿಯಾಗಿದ್ದರು. ಅವರ ಹಾದಿಯಲ್ಲೇ ರಾಜಕಾರಣ ಮಾಡಿ ಆದರ್ಶದ ಹಾದಿ ತೋರಿದವರು ಸಿ.ಎಂ. ಲಿಂಗಪ್ಪ. ಅವರ ಕೊಡುಗೆ ನೆನೆಯದಿದ್ದರೆ ಆತ್ಮವಂಚನೆಯಾಗುತ್ತದೆ. ಕೆಂಗಲ್‌ನಲ್ಲಿರುವ ಹನುಮಂತಯ್ಯ ಅವರ ಸ್ಮಾರಕ ಜೀರ್ಣೋದ್ಧಾರ ಮಾಡುವಂತೆ ಮುಖ್ಯಮಂತ್ರಿಗಳ ಗಮನಕ್ಕೆ ತರವುದಾಗಿ ತಿಳಿಸಿದರು.

ರೈತ ಹೋರಾಟಗಾರ್ತಿ ಅನಸೂಯಮ್ಮ ಮಾತನಾಡಿ, ಈ ಕಾರ್ಯಕ್ರಮವು ವಿಧಾನಸೌಧದ ಹಿಂಭಾಗ ಇರುವ ಕೆಂಗಲ್ ಅವರ ಪ್ರತಿಮೆಯನ್ನು ವಿಧಾನಸೌಧದ ಮುಂಭಾಗಕ್ಕೆ ಸ್ಥಳಾಂತರ ಮಾಡುವ ಹೋರಾಟಕ್ಕೆ ಮುನ್ನುಡಿ ಬರೆಯಬೇಕು ಎಂದು ಹೇಳಿದರು.

### ಏಕೀಕರಣಕ್ಕಾಗಿ ಅಧಿಕಾರ ಕಳೆದುಕೊಂಡರು – ಡಾ.ತಲಕಾಡು ಚಿಕ್ಕರಂಗೇಗೌಡ

ಇತಿಹಾಸಕಾರ ಡಾ.ತಲಕಾಡು ಚಿಕ್ಕರಂಗೇಗೌಡ ಮಾತನಾಡಿ, ಏಕೀಕರಣಕ್ಕೆ ಕೈ ಹಾಕಿದರೆ ಅಧಿಕಾರ ಹೋಗುತ್ತದೆ ಎಂದು ಗೊತ್ತಿದ್ದರೂ, ಕೆಂಗಲ್ ಅವರು ಅಖಂಡ ಕರ್ನಾಟಕದ ದೃಷ್ಟಿಯಿಂದ ಏಕೀಕರಣಕ್ಕೆ ಮುಂದಾಗಿ ಅಧಿಕಾರ ಕಳೆದುಕೊಂಡರು. ತಮಗೋಸ್ಕರ ದುಡಿದವರಿಗೆ ಈ ಮಣ್ಣು ಏನನ್ನೂ ಕೊಟ್ಟಿಲ್ಲ ಎಂಬುದು ಕೆಂಗಲ್ ಅವರ ವಿಷಯದಲ್ಲಿ ನಿಜವಾಯಿತು. ವಿಧಾನಸೌಧ ನಿರ್ಮಾತೃವಾದ ಕೆಂಗಲ್ ಪ್ರತಿಮೆಯನ್ನು ವಿಧಾನಸೌಧದ ಮುಂಭಾಗ ಇಡಬೇಕು ಎಂದು ನಾವು ಹೋರಾಟ ಮಾಡಿದೆವು. ಆಗಲೂ ಪಿತೂರಿ ಮಾಡಿ ಅವರ ಪ್ರತಿಮೆಯನ್ನು ವಿಧಾನಸೌಧದ ಹಿಂದೆ ಇಟ್ಟು ಅವಮಾನ ಮಾಡಿದ್ದಾರೆ. ಈಗಲಾದರೂ ಅದು ಮುಂದೆ ಬರಬೇಕಿದೆ. ಈ ನಿಟ್ಟಿನಲ್ಲಿ ಹೋರಾಟ ಶುರುವಾಗಬೇಕಿದೆ ಎಂದರು.

### ಸುಂದರಗೊಂಡ ಹನುಮಂತಯ್ಯ ವೃತ್ತ



ಹಳೇ ಬಸ್ ನಿಲ್ದಾಣದ ಬಳಿ ಇರುವ ವೃತ್ತದಲ್ಲಿ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಮತ್ತು ಮಂಟಪ ನಿರ್ಮಾಣವಾಗಿದೆ. ಕೆ.ಶೇಷಾದ್ರಿ ಅಧ್ಯಕ್ಷತೆಯಲ್ಲಿರುವ ನಗರಸಭೆವತಿಯಿಂದ ಮಂಟಪದ ಸ್ಥಳವನ್ನು ಹುಲ್ಲಿನ ಹಾಸು ಹಾಸಿ ಸುಂದರಗೊಳಿಸಲಾಗಿದೆ. ಪ್ರತಿಮೆಗೆ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ವೃತ್ತದ ಸುತ್ತಲು ದೀಪಗಳನ್ನು ಅಳವಡಿಸಿ ಒಟ್ಟಾರೆ ಮಂಟಪದ ಸೌಂದರ್ಯವನ್ನು ಹೆಚ್ಚಿಸಲಾಗಿದೆ.

### ಪ್ರಜಾಪ್ರಭುತ್ವದ ಅಡಿಗಲ್ಲು ಭದ್ರಪಡಿಸಿದ ಹನುಮಂತಯ್ಯ – ಡಾ.ಬಂಜಗೆರೆ ಜಯಪ್ರಕಾಶ್

ಕೆಂಗಲ್ ಅವರ ಕಾಲದ್ದು ಕಟ್ಟುವ ಕಾಲದ ರಾಜಕಾರಣವಾದರೆ, ಈಗಿನದ್ದು ತಿನ್ನುವ ಮತ್ತು ಕೆಡಗುವ ರಾಜಕಾರಣ. ದೇಶ ಸ್ವಾತಂತ್ರ್ಯ ಪಡೆದಾಗ ಉಸ್ತುವಾರಿ ಮುಖ್ಯಮಂತ್ರಿಯಾಗಿ ಕೆ.ಸಿ. ರೆಡ್ಡಿ ಇದ್ದರು. ಆದರೆ, ಮೊದಲ ಚುನಾಯಿತ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಕೆಂಗಲ್ ಅವರು ರಾಜ್ಯದಲ್ಲಿ ಪ್ರಜಾಪ್ರಭುತ್ವದ ಕಲ್ಲನ್ನು ಭದ್ರವಾಗಿ ನೆಟ್ಟರು. ಜನರ ಕೆಲಸವನ್ನು ದೇವರ ಕೆಲಸ ಎಂದು ಪರಿಭಾವಿಸಿ, ವಿಧಾನಸೌಧದಲ್ಲಿ ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಯಿಸಿದರು. ಏಕೀಕರಣ ಎಂಬುದು ಕನ್ನಡಿಗರ ಅಸ್ಮಿತೆಯ ಪ್ರಶ್ನೆ ಎಂದು ಪರಿಗಣಿಸಿ, ಅಧಿಕಾರ ಲೆಕ್ಕಿಸದೆ ಏಕೀಕರಣಕ್ಕೆ ಕೊಡುಗೆ ನೀಡಿದರು ಎಂದರು.

### ಸಮಾಧಿ ಸ್ಥಳ ಅಭಿವೃದ್ಧಿಯಾಗಬೇಕು – ಪಿ.ನಾಗರಾಜ್

ಬಮೂಲ್ ನಿರ್ದೇಶಕ ಪಿ.ನಾಗರಾಜ್ ಮಾತನಾಡಿ, ಕೆಂಗಲ್‌ನಲ್ಲಿ ನನೆಗುದಿಗೆ ಬಿದ್ದಿರುವ ಹನುಮಂತಯ್ಯ ಅವರ ಸಮಾಧಿ ಸ್ಥಳ ಹಾಗೂ ಅತಿಥಿ ಗೃಹದ ಅಭಿವೃದ್ಧಿ ಜೊತೆಗೆ ಅವರ ಹೆಸರಿನಲ್ಲಿ ಸ್ಮಾರಕ ನಿರ್ಮಾಣವಾಗಬೇಕಿದೆ. ಅದಕ್ಕಾಗಿ, ಸಿಎಂ ಮತ್ತು ಡಿಸಿಎಂ ಭೇಟಿ ಮಾಡಿ ಮನವಿ ಸಲ್ಲಿಸೋಣ ಎಂದು ಸಭೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಹಾಗೂ ಸಾರ್ವಜನಿಕರ ಗಮನ ಸೆಳೆದರು. ಲೇಖಕ ಡಾ. ದೊಡ್ಡಬೋರಯ್ಯ ಮಾತನಾಡಿ, ಈ ನಾಡು ಮತ್ತು ದೇಶಕ್ಕೆ ಅಮೂಲ್ಯವಾದ ಕೊಡುಗೆಗಳನ್ನು ನೀಡಿದ ಈ ನೆಲದ ಹೆಮ್ಮೆಯ ರಾಜಕಾರಣಿಯಾದ ಕೆಂಗಲ್ ಹನುಮಂತಯ್ಯ ಅವರ ಕೊಡುಗೆಗಳನ್ನು ಮುಂದಿನ ತಲೆಮಾರಿಗೆ ತಿಳಿಸುವ ಕೆಲಸ ನಿರಂತರವಾಗಿ ನಡೆಯಬೇಕು ಎಂದರು.

### ಶೇಷಾದ್ರಿ ಅವರ ಬಗ್ಗೆಯೂ ಗಣ್ಯರ ಮೆಚ್ಚುಗೆ

ಸಾಹಿತಿ ಡಾ.ರವಿಕುಮಾರ್ ಕೆಂಗಲ್ ಹನುಮಂತಯ್ಯ ಅವರ ಬಗ್ಗೆ ಮಾತನಾಡಿದರು. ಕಾರ್ಯಕ್ರಮದ ರೂವಾರಿ ಕೆ.ಶೇಷಾದ್ರಿ ಅವರನ್ನು ಶ್ಲಾಘಿಸಿದ ಅವರು ಹಣ ಪ್ರಧಾನವಾದ ಈಗಿನ ರಾಜಕಾರಣದ ಸಂದರ್ಭದಲ್ಲಿ ಶೇಷಾದ್ರಿ ಶಶಿ ಅವರಂತಹ ಸಾಮಾಜಿಕ ಬದ್ಧತೆ ಇರುವ ರಾಜಕಾರಣಿ ನಗರಸಭೆಗೆ ಸೀಮಿತವಾಗದೆ, ಮುಖ್ಯವಾಹಿನಿ ರಾಜಕಾರಣಕ್ಕೆ ಬರಬೇಕು. ಇಂತವರನ್ನು ವಿಧಾನಸೌಧದಕ್ಕೆ ಆರಿಸಿ ಕಳಿಸಬೇಕು ಎಂದು ಕರೆ ನೀಡಿದರು.

ಜಯ ಕರ್ನಾಟಕ ಜನಪರ ವೇದಿಕೆಯ ಕುಮಾರಸ್ವಾಮಿ ಮಾತನಾಡಿ, ಶೇಷಾದ್ರಿ ಶಶಿ ಅವರು ಇತ್ತೀಚೆಗೆ ಮಂಡಿಸಿರುವ ನಗರಸಭೆ ಬಜೆಟ್‌ನಲ್ಲಿ ಎಲ್ಲರನ್ನೂ ಒಳಗೊಳ್ಳುವ ಸಾಮಾಜಿಕ ನ್ಯಾಯದ ತತ್ವ ಎದ್ದು ಕಾಣುತ್ತದೆ. ಇಂತಹ ಸ್ಥಳೀಯ ಜನಪರ ನಾಯಕರು ಶಾಸಕರಾಗಬೇಕು. ಅದಕ್ಕಾಗಿ ರಾಮನಗರದ ಜನ ಮನಸ್ಸು ಮಾಡಬೇಕು' ಎಂದು ಹೇಳಿದರು. ಪ್ರಾಸ್ತಾವಿಕ ಭಾಷಣ ನೆರವೇರಿಸಿದ ಪ್ರಾಂಶು ಪಾಲ ಜಿ.ಶಿವಣ್ಣ ಕೊತ್ತಿಪುರ ಮಾತನಾಡಿ, ರಾಮ ನಗರದವರು ತಮ್ಮನ್ನು ತಾವು ಆಳ್ವಿಕೆ ಮಾಡಿಕೊ ಳ್ಳಬೇಕು. ಹೊರಗಿನವರಿಗೆ ಅವಕಾಶ ಕೊಡಬಾರದು. ಇದಕ್ಕೆ ಕೆಂಗಲ್ ಹನುಮಂತಯ್ಯ ಅವರ ಸ್ವಾಭಿ ಮಾನ ನಮಗೆ ಪ್ರೇರಣೆಯಾಗಬೇಕು. ಈ ನೆಲದ ಮಕ್ಕಳೇ ವಿಧಾನಸೌಧಕ್ಕೆ ನಮ್ಮ ಪ್ರತಿನಿಧಿಗಳಾಗಿ ಕೂರಬೇಕು. ಆ ಶಕ್ತಿ ಶೇಷಾದ್ರಿ ಅವರಿಗಿದೆ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ನಗರಸಭೆ ಸದಸ್ಯರು, ವಿವಿಧ ಸಂಘ, ಸಂಸ್ಥೆ, ಸಮುದಾಯ, ಸಂಘಟನೆಗಳ ಪದಾಧಿಕಾರಿಗಳು, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮುಖಂಡರು, ಕನ್ನಡಪರ, ರೈತಪರ, ದಲಿತಪರ ಸಂಘಟನೆಗಳ ಮುಖಂಡರು ಇದ್ದರು.

ವೇದಿಕೆ ಕಾರ್ಯಕ್ರಮಕ್ಕೆ ಮುನ ಅಭಿವೃದ್ದಿಗೊಂಡಿರುವ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ–ಮಂಟಪವನ್ನು ಸಿ.ಎಂ.ಲಿಂಗಪ್ಪ ಸೇರಿದಂತೆ ಗಣ್ಯರು ಅನಾವರಣಗೊಳಿಸಿ, ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

### ಅಂಬೇಡ್ಕರ್ ಮೆಚ್ಚಿದ್ದ ಕೆಂಗಲ್!

ಸಂವಿಧಾನ ರಚನೆ ಸಲಹಾ ಸಮಿತಿಯ ಚುನಾಯಿತ ಸದಸ್ಯರಾಗಿದ್ದ ಕೆಂಗಲ್ ಅವರನ್ನು ಅಂಬೇಡ್ಕರ್ ಮೆಚ್ಚಿಕೊಂಡಿದ್ದರು. ಒಮ್ಮೆ ಅಂಬೇಡ್ಕರ್ ಅವರು, ನೀವು ನನ್ನ ಸಂಗ ಮಾಡುವುದು ನಿಮ್ಮ ಕಾಂಗ್ರೆಸ್‌ನವರಿಗೆ ಇಷ್ಟವಿಲ್ಲ ಎಂದಿದ್ದರು. ಅದಕ್ಕೆ ಕೆಂಗಲ್, ನಾನು ನನ್ನ ಪಕ್ಷ ಬಿಡುವೆ. ನಿಮ್ಮ ಸಂಗವನ್ನಲ್ಲ ಎಂದಿದ್ದರು ಎಂದು ನೆನೆದರು. ಕೇಂದ್ರ ರೈಲ್ವೆ ಸಚಿವರಾಗಿದ್ದ ಕೆಂಗಲ್ ಅವರಿಗೆ ಇಂದಿರಾ ಗಾಂಧಿ ಅವರು ಚೀಟಿ ಕೊಟ್ಟು ಪಕ್ಷಕ್ಕೆ ಹಣ ಕೇಳಿದ್ದ ಪ್ರಸಂಗವನ್ನು ಸ್ಮರಿಸಿದ ಸಿ.ಎಂ. ಲಿಂಗಪ್ಪ ಅವರು, ಹಣ ಸಂಗ್ರಹಕ್ಕೆ ಕೆಂಗಲ್ ನಿರಾಕರಿಸಿದ್ದರು. ತಾವು ಬೇರೆಯವರಿಂದ ಹಣ ಸಂಗ್ರಹಿಸಿದರೆ ಆಡಳಿತದಲ್ಲಿ ಬಿಗಿ ಹೋಗುತ್ತದೆ. ಬೇಕಿದ್ದರೆ ರಾಜೀನಾಮೆ ಕೊಡುವೆ ಎಂದಿದ್ದರು. ಆ ಬೆಳವಣಿಗೆ ಬೆನ್ನಲ್ಲೇ ಅವರು ರಾಜೀನಾಮೆ ಕೊಟ್ಟರು. ನಂತರ, ರಾಜ್ಯಪಾಲ ಸೇರಿದಂತೆ ಇತರ ಹುದ್ದೆಗಳು ಹುಡುಕಿಕೊಂಡು ಬಂದರೂ ನಯವಾಗಿಯೇ ತಿರಸ್ಕರಿಸಿ ಸ್ವಾಭಿಮಾನ ಮೆರೆದಿದ್ದರು ಎಂದರು. ತನ್ನ ಬಗ್ಗೆ ವಸ್ತುನಿ?ವಾಗಿ ಬರೆಯಬೇಕು ಎಂದು ಪ್ರೊ.ಕೆ.ಎಸ್. ಭಗವಾನ್ ಅವರಿಗೆ ಸೂಚಿಸಿದ್ದ ಕೆಂಗಲ್, ಅವರು ಹೆಣ್ಣು ಮಕ್ಕಳ ವಿ?ಯದಲ್ಲಿ ತನ್ನಿಂದ ತಪ್ಪಾಗಿದೆ ಎಂದು ಹೇಳಿಕೊಂಡಿದ್ದ ಪ್ರಾಮಾಣಿಕ ವ್ಯಕ್ತಿ ಎಂದರು.

# ಲಿಂಗ ತಾರತಮ್ಯ ವಿರೋಧಿಸಿ ಪ್ರತಿಭಟನೆ



ಮೈಸೂರು: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಗಣತಂತ್ರ ಉಳಿಸಿ ಸಾರ್ವಭೌಮತೆಯನ್ನು ರಕ್ಷಿಸಿ ಸಮಾನತೆಗಾಗಿ ಹೋರಾಡಿ ಲಿಂಗ ತಾರತಮ್ಯ ವಿರೋಧಿಸಿ ನಗರದಲ್ಲಿ ಪ್ರತಿಭಟನೆ ನಡೆಸಿದರು.


ಜಿಲ್ಲಾಧಿಕಾರಿಗಳ ಕಚೇರಿ ಬಳಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ( ಸಿಐಟಿಯು) ಪ್ರಧಾನ ಕಾರ್ಯದರ್ಶಿ ಬಾಲಾಜಿ ರಾವ್ ಹಾಗೂ ಅಧ್ಯಕ್ಷ ಅಣ್ಣಪ್ಪ ರವರ ನೇತೃತ್ವದಲ್ಲಿ 118ನೇ ಮಹಿಳಾ ದಿನವನ್ನು ಪ್ರತಿಭಟನಾ ದಿನವನ್ನಾಗಿ ಆಚರಿಸಲಾಯಿತು.

ಎಲ್ಲರಿಗೂ ಉದ್ಯೋಗ ಸೃಷ್ಟಿಯಾಗಬೇಕು. ಎಲ್ಲ ಮಹಿಳಾ ಉದ್ಯೋಗಿಗಳಿಗೆ ಕನಿಷ್ಠ ವೇತನ ಮತ್ತು ಸಮಾನ ವೇತನ ಜಾರಿ ಆಗಬೇಕು. ಮಹಿಳೆಯರ ವೇತನ ರಹಿತ ಕೆಲಸಗಳನ್ನು ಗುರುತಿಸುವುದು, ವೇತನ ನಿಗದಿಗಾಗಿ, ಸಮಾನ ಕೆಲಸಕ್ಕೆ ಸಮಾನ ವೇತನ ಕಡ್ಡಾಯವಾಗಿ ನಿಡಬೇಕು. ಎಲ್ಲ ಯೋಜನಾ ಕೆಲಸಗಾರರನ್ನು ಉದ್ಯೋಗಿಗಳೆಂದು ಗುರುತಿಸಬೇಕು. ದುಡಿಯುವ ಮಹಿಳಾ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು. ಎಲ್ಲ ಮಹಿಳಾ ಉದ್ಯೋಗಿಗಳಿಗೆ ಆರು ತಿಂಗಳಿಗೆ ಮಾತೃತ್ವ ರಜೆ ಹಾಗೂ ಆರೈಕೆ ಕೊಠಡಿಗಳ ಸೌಲಭ್ಯವನ್ನು ಒದಗಿಸಬೇಕೆಂದರು.

ಮಹಿಳೆಯರಿಗೆ ತಿಂಗಳಲ್ಲಿ ಎರಡು ದಿನ ಮುಟ್ಟಿನ ರಜೆ ಪ್ರತ್ಯೇಕ ವಿರಾಮ ಕೊಠಡಿಗಳು ಮತ್ತು ಶೌಚಾಲಯಗಳ ವ್ಯವಸ್ಥೆ ಮಾಡಬೇಕು. ಪಾಷ್ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು ಮತ್ತು ಆಂತರಿಕ ಹಾಗೂ ಸ್ಥಳೀಯ ಸಮಿತಿಗಳನ್ನು ರಚಿಸಬೇಕು. ಮಹಿಳೆಯರ ಮತ್ತು ಮಕ್ಕಳನ್ನು ರಾತ್ರಿ ವೇಳೆ ಮತ್ತು ಅಪಾಯಕಾರಿ ಕೆಲಸಗಳಲ್ಲಿ ದುಡಿಸುವುದನ್ನು ನಿಷೇಧಿಸಬೇಕು. ಮಹಿಳೆಯರ ಮತ್ತು ಮಕ್ಕಳ ವಿರುದ್ಧ ದೌರ್ಜನ್ಯಗಳನ್ನು ತಡೆಗಟ್ಟುವ ಕ್ರಮಗಳು ಮತ್ತು ಕಠಿಣ ಶಿಕ್ಷೆಗಳನ್ನು ತ್ವರಿತವಾಗಿ ಜಾರಿಗೊಳಿಸುವುದು, ನ್ಯಾಯಮೂರ್ತಿ ವರ್ಮಾ ಸಮಿತಿಯ ಜಾರಿಗೊಳಿಸಬೇಕೆಂಬುದು ಸೇರಿ ತಮ್ಮ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು.

## ಮುನಿಗೋಪಾಲ ರಾಜು ಹೇಳಿಕೆ

# ಜನರ ಸಮಸ್ಯೆಗಳಿಗೆ ಸ್ಪಂದಿಸಿದರೆ ವಿಶ್ವಾಸ ಹೆಚ್ಚಳ



ಮೈಸೂರು: ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಅವರ ತೊಂದರೆಗಳನ್ನು ನಿವಾರಿಸುವುದರಿಂದ ಸರ್ಕಾರಿ ಇಲಾಖೆಗಳ ಮೇಲೆ ಜನರಲ್ಲಿ ನಂಬಿಕೆ ಮತ್ತು ವಿಶ್ವಾಸ ಹೆಚ್ಚುತ್ತದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಹೇಳಿದರು.

ರಾಜಾಜಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸೋಮವಾರ ಬಡಾವಣೆಯಲ್ಲಿ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, "ಜನರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ನಿಗಮವೂ ಸದಾ ಕಾರ್ಯಪ್ರವೃತ್ತವಾಗಿದೆ. ಕೆಲವೊಮ್ಮೆ ಕಾನೂನು ತೊಡಕುಗಳು ಎದುರಾದರೂ ಜನರ ಕಷ್ಟಗಳಿಗೆ ಸ್ಪಂದಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಜನರಿಗೆ ಸಮಸ್ಯೆಗಳು ಉಂಟಾದ ಸಂದರ್ಭದಲ್ಲಿ ಪ್ರಾಮಾಣಿಕ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಿಸುವುದರ ಮೂಲಕ ಸಮಸ್ಯೆಗಳನ್ನು ನಿವಾರಿಸುವುದು ಅಗತ್ಯವಾಗಿದೆ" ಎಂದರು.

"ಇದರಿಂದ ಬಹುತೇಕ ಸಂದರ್ಭಗಳಲ್ಲಿ ವಿದ್ಯುತ್ ಅವಘಡಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ ಮತ್ತು ಜನರು ನೆಮ್ಮದಿಯಿಂದ ಜೀವನ ನಡೆಸಲು ಸಹಾಯಕವಾಗುತ್ತದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಸಾರ್ವಜನಿಕರಿಗೆ ಸರ್ಕಾರಿ ಇಲಾಖೆಗಳ ಮೇಲೆ ಜನರಲ್ಲಿ ನಂಬಿಕೆ ಮತ್ತು ವಿಶ್ವಾಸ ಹೆಚ್ಚುತ್ತದೆ" ಎಂದರು.

ಇದೇ ವೇಳೆ ರಾಜಾಜಿನಗರ ನಿವಾಸಿಗಳು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು, ಅಧೀಕ್ಷಕ ಇಂಜಿನಿಯರ್(ಮೈಸೂರು ವೃತ್ತ) ಸುನೀಲ್ ಕುಮಾರ್‌ರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸೆಸ್ಕ್ ರಾಮಕೃಷ್ಣನಗರ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಅಶೋಕ್, ಸೆಸ್ಕ್ ಸಹಾಯಕ ಇಂಜಿನಿಯರ್ ರಕ್ಷಕ್, ರಾಜಾಜಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಚಿನ್ನಸ್ವಾಮಿ ಆಚಾರ್, ಸಿ.ಕೆ.ಮಹೇಂದ್ರ ಇತರರು ಇದ್ದರು.

# ಶೀಘ್ರವೇ ಶ್ರೀರಾಮ ಸಕ್ಕರೆ ಕಾರ್ಖಾನೆ ಸಮಸ್ಯೆ, ಪ್ರಾರಂಭದ ಬಗ್ಗೆ ಸಭೆ



ಕೆ.ಆರ್ .ನಗರ : ಶೀಘ್ರದಲ್ಲೇ ಸಕ್ಕರೆ ಸಚಿವರು ಮತ್ತು ಕಾರ್ಖಾನೆ ಗುತ್ತಿಗೆದಾರ ಮುರುಗೇಶ್ ನಿರಾಣಿ ಹಾಗೂ ರೈತರೊಂದಿಗೆ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ಸಮಸ್ಯೆ ಮತ್ತು ಪ್ರಾರಂಭದ ಬಗ್ಗೆ ಸಭೆ ನಡೆಸಲಾಗುವುದು ಎಂದು ಶಾಸಕ ಡಿ ರವಿಶಂಕರ್ ತಿಳಿಸಿದರು. ಅವರು ಮಿರ್ಲೆ ಗ್ರಾಮದಲ್ಲಿ ಒಂದು ಕೋಟಿ ವೆಚ್ಚದ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಕಾಮಗಾರಿ ಕೆಲಸಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಇವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಪ್ರತಿ ಶಾಸಕರಿಗೆ ಮೊದಲ ಹಂತದಲ್ಲಿ 25 ಕೋಟಿ ಅನುದಾನವನ್ನು ಕೊಟ್ಟಿದ್ದರು.ಆ ಅನುದಾನದಲ್ಲಿ ಪ್ರತಿ ಗ್ರಾಮಗಳಿಗೂ ಅನುದಾನ ಕೊಟ್ಟಂತೆ ಮಿರ್ಲೆಗೂ ಪಂಚಾಯಿತ್ ರಾಜ್ ಇಲಾಖೆ ಯಡಿ ಒಂದು ಕೋಟಿ ಅನುದಾನವನ್ನ ನೀಡಿದ್ದೇನೆ. ಜನರಿಗೆ ತುಂಬಾ ತೊಂದರೆ ಆಗುತ್ತಿರುವ ರಸ್ತೆ ಇದಾಗಿದ್ದು ಈ ರಸ್ತೆಗೆ ಅನುದಾನ ನೀಡಿ ಕಾಮಗಾರಿಗೆ ಇಂದು ಚಾಲನೆ ನೀಡುತ್ತಿದ್ದೇವೆ ನಿಮ್ಮೆಲ್ಲರ ಪ್ರೀತಿ ವಿಶ್ವಾಸ ಮತ್ತು ಕೃತಜ್ಞತೆ ಎಲ್ಲವೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಹಾಗೂ ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಸಚಿವರಿಗೆ ಸಲ್ಲುತ್ತದೆ ಎಂದರು.

ಗ್ರಾಮದ ಹೃದಯ ಭಾಗವಾಗಿರುವ ಕೆಂಪೇಗೌಡರ ಮನೆಯಿಂದ ಕಾಲೇಜುವರೆಗೆ ಸುಮಾರು 600ಕ್ಕೂ ಹೆಚ್ಚು ಮೀಟರ್ ಉದ್ದದ ರಸ್ತೆ ಮತ್ತು ಚರಂಡಿ ಕಾಮಗಾರಿ ನಿರ್ಮಾಣವಾಗುತ್ತಿದ್ದು ಇದರ ಗುಣಮಟ್ಟದ ಕೆಲಸವನ್ನು ಇಲ್ಲಿಯ ಗ್ರಾಮಸ್ಥರು ಅಚ್ಚುಕಟ್ಟಾಗಿ ಮಾಡಿಸಿಕೊಳ್ಳಬೇಕಾಗಿದೆ. ಜೊತೆಗೆ ಸುರಕ್ಷಿತ ರಸ್ತೆ ನಿರ್ಮಾಣವಾಗಲು ರಸ್ತೆಯ ಪಕ್ಕದಲ್ಲಿ ಬರುವ ಮನೆಯ ಮಾಲೀಕರು ಹೆಚ್ಚಿನ ಸಹಕಾರ ನೀಡುವ ಮೂಲಕ ಗುಣಮಟ್ಟದ ರಸ್ತೆಯನ್ನು ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಈಗಾಗಲೇ ಗ್ರಾಮ ದೇವತೆ ಹುಣಸಮ್ಮ ದೇವಸ್ಥಾನ ಸುತ್ತ ಜಾತ್ರೆಯಲ್ಲಿ ಸಿಡಿ ಮತ್ತು ಧೇರುಗಳು ಹರಿದುಬರಲು ಅನುಕೂಲವಾಗಲಿ ಎಂದು 30ಲಕ್ಷ ಅನುದಾನ ನೀಡಿದ್ದೇನೆ.ಜೋತೆಗೆ ಕೋದಂಡರಾಮ ದೇವಸ್ಥಾನ,ವಿರುಪಕ್ಷಸ್ವಾಮಿ,ಸಣ್ಣಮಠ ಅಭಿವೃದ್ಧಿ ಮಾಡಿಸುವಂತೆ ಬೇಡಿಕೆ ಇಟ್ಟಿದ್ದಿರಿ ಅತಿ ಶೀಘ್ರದಲ್ಲೇ ಅವುಗಳಿಗೆ ಅನುದಾನ ಬಿಡುಗಡೆ ಮಾಡುತ್ತೇನೆ ಎಂದು ತಿಳಿಸಿದರು.

ಕಾಂಗ್ರೆಸ್ ಹಿರಿಯ ಕಾರ್ಯದರ್ಶಿ ಮಿರ್ಲೆ ನಂದೀಶ್ ಮಾತನಾಡಿ ತಾಲೂಕಿನಲ್ಲೇ ಮಿರ್ಲೆ ಗ್ರಾಮದಲ್ಲಿ ಕೃಷಿ ಅವಲಂಬಿತ ರೈತರು ಹೆಚ್ಚಾಗಿ ಇದ್ದಾರೆ 9 ನಾಲೆ ಏರಿಗಳು ಇದ್ದು. 15 ವರ್ಷಗಳಿಂದ ಅಭಿವೃದ್ಧಿ ಕಾಣದೆ. ರೈತರು ಹೊಡಾಡಲಾಗದಾಗಿದೆ. ರಸ್ತೆ ಗಳು ಗುಂಡಿ ಬಿದ್ದಿವೆ. ಇವುಗಳನ್ನು ಅಭಿವೃದ್ಧಿ ಮಾಡಿಸಿಕೊಡಬೇಕು.ಜತೆಗೆ. ಸಬ್ ರಿಜಿಸ್ಟ್ರಾರ್ ಕಛೇರಿಯನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಚುನಾವಣಾ ಸಂದರ್ಭದಲ್ಲಿ ಮಾಜಿ ಶಾಸಕರು ಹೆಸರಿಗೆ ಮಾತ್ರ ಗುದ್ದಲಿ ಪೂಜೆ ಮಾಡಿದ್ದರು.ಆದರೆ ಅಭಿವೃದ್ಧಿ ಆಗಿಲ್ಲ.ನೀವು ಅದಕ್ಕೆ ಹೆಚ್ಚಿನ ಅನುದಾನ ನೀಡಿ ಕಛೇರಿ ಕಾಮಗಾರಿ ಪೂರ್ಣಗೊಳಿಸಿ ಉದ್ಘಾಟನೆ ಮಾಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ ಎಸ್ ಮಹದೇವ್,ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಭಾಕರ್, ರಮೇಶ್,ವಕ್ತಾರ ಸೈಯದ್ ಜಾಬೀರ್, ಕಾಂಗ್ರೆಸ್ ಜಿಲ್ಲಾ ಹಿರಿಯ ಕಾರ್ಯದರ್ಶಿ ನಂದೀಶ್, ತಾಪಂ ಮಾಜಿ ಅಧ್ಯಕ್ಷ ಚಂದು, ಸಣ್ಣರಾಮೇಗೌಡ, ನಿವೃತ್ತ ಶಿಕ್ಷಕ ವಿಶ್ವನಾಥ್, ಮಾಜಿ ಗ್ರಾಪಂ ಸದಸ್ಯ ಹರೀಶ್, ಹೇಮಂತ್,ಬಿಇಒ ಕೃಷ್ಣಪ್ಪ,ಉಪತಹಶೀಲ್ದಾರ್ ಮಹೇಶ್. ಪಂಚಾಯತ್ ರಾಜ್ ಇಲಾಖೆ ಕಾರ್ಯಪಾಲಕ ಅಭಿಯಂತರರು ಎಇಇ ಆನಂದ್, ಸಹಯಕ ಇಂಜ್ಯೂನಿಯರ್ ಕೃಷ್ಣಮೂರ್ತಿ, ಹೇಮಂತ್,ಕೃಷ್ಣಶೆಟ್ಟಿ, ಕಾಂತರಾಜ್, ರಘು, ಚಂದ್ರಹಾಸ,ಶಾಕುಂತಲ, ದಿನೇಶ್, ದೀಪಕ್, ಚೈತ್ರ,ಜಯರಾಮಶೆಟ್ಟಿ, ಕೊತ್ವಾಲ್ ಮಂಜು, ನಟರಾಜ್, ಪ್ರಜ್ವಲ್, ಪಾಪಣೆ. ಶಾಸಕರ ಆಪ್ತ ಕಾರ್ಯದರ್ಶಿ ನವೀನ್, ಮೇಲೂರು ಮಧು, ಪುನೀತ್, ಬೈರೇಶ್, ಗಂಧನಹಳ್ಳಿ ಯಶ್ವಂತ್, ಗುತ್ತಿಗೆದಾರ ರಾಜಯ್ಯ, ಬಲರಾಮ್ ಇತರರು.

### ಸೇಬಿನ ಹಾರ

**ಶಾಸಕ ಡಿ ರವಿಶಂಕರ್ ಅವರಿಗೆ ಮಿರ್ಲೆ ಗ್ರಾಮದಲ್ಲಿ ಒಂದು ಕೋಟಿ ಅನುದಾನದಲ್ಲಿ ಭೂಮಿ ಪೂಜೆಗೆ ಆಗಮಿಸಿದ ಶಾಸಕರಿಗೆ ಮಿರ್ಲೆ ನಂದೀಶ್ ಕ್ರೇನ್ ಮೂಲಕ ಸೇಡಿನ ಹಾರ ಹಾಕಿ ಪಟಾಕಿ ಸಿಡಿಸಿ ಸ್ವಾಗತಿಸಿದರು.ಕಾಂಗ್ರೇಸ್ ಕಾರ್ಯಕರ್ತರು ಮುಂದಿನ ಸಚಿವರು ರವಿಶಂಕರ್ ಅವರು ಎಂದು ಜೈಕಾರ ಕೂಗಿದರು.**

# ಯುವಜನತೆಗೆ ಕೌಶಲ್ಯ ತರಬೇತಿ ನೀಡಿ

## ಜಿಲ್ಲಾಧಿಕಾರಿ ಡಾ ಕುಮಾರ ಸೂಚನೆ । ಪ್ರಗತಿ ಪರಿಶೀಲನಾ ಸಭೆ



ಮಂಡ್ಯ : ಯುವಕ-ಯುವತಿಯರಿಗೆ ಆಸಕ್ತಿಯ ಕ್ಷೇತ್ರದಲ್ಲಿ ಉದ್ಯೋಗ ಮಾಡಲು ಉಚಿತ ಕೌಶಲ್ಯ ತರಬೇತಿ ಹಾಗೂ ಸ್ವ ಉದ್ಯೋಗ ನೀಡಲು ಮಾರ್ಗ ದರ್ಶನ ನೀಡಲು ಅಗತ್ಯ ಕ್ರಮ ಕ?ಗೊಳ್ಳುವಂತೆ ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಕೌಶಲ್ಯ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೌಶಲ್ಯ ಅಭಿವೃದ್ಧಿ ತರಬೇತಿಗಳು ಇಂದಿನ ಯುವಜನತೆಗೆ ಅಗತ್ಯವಾಗಿದ್ದು, ಪ್ರಸಕ್ತ ಕೈಗಾರಿಕೆ ಹಾಗೂ ಉದ್ಯೋಗ ಮಾರುಕಟ್ಟೆಗೆ ಅವಶ್ಯಕವಾಗಿರುವ ತರಬೇತಿಗಳನ್ನು ನೀಡಲು ಕ್ರಮ ವಹಿಸುವಂತೆ ಹಾಗೂ ಕೈಗಾರಿಕೆಗಳ ಸಹಯೋಗದೊಂದಿಗೆ ತರಬೇತಿ ಯೋಜನೆಗಳನ್ನು ರೂಪಿಸುವಂತೆ ತಿಳಿಸಿದರು. ಯುವನಿಧಿ, ಯುವನಿಧಿ ಪ್ಲಸ್ ಯೋಜನೆಯಡಿ ತಾಂತ್ರಿಕ ಹಾಗೂ ಕೈಗಾರಿಕಾ ಕೌಶಲವನ್ನು ಯುವಕರಿಗೆ ಕಲಿಸಿ ಅವರಿಗೆ ಉದ್ಯೋಗಾವಕಾಶ ಕಲ್ಪಿಸುವಂತೆ ತಿಳಿಸಿದರು.

ಜಿಲ್ಲೆಯ ಯುವಕರಿಗೆ ಉದ್ಯೋಗ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಬೇರೆ ಬೇರೆ ಸಂಸ್ಥೆಗಳಿಂದ ಸ್ಪೋಕನ್ ಇಂಗ್ಲಿಷ್ ತರಬೇತಿಯನ್ನು ನೀಡುವಂತೆ ಮತ್ತು ವಿಶೇಷ ಚೇತನರಿಗೆ ವಿಶೇಷ ತರಬೇತಿ ಕಾರ್ಯಕ್ರಮವನ್ನು ನೀಡುವಂತೆ ಸೂಚಿಸಿದರು.

ಸ್ವನಿಧಿ ಯೋಜನೆಯಡಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಕೈಗೊಂಡು ಕೇಂದ್ರ ಸರ್ಕಾರದ 8 ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಯೋಜನೆಗಳ ಸಂಪರ್ಕ ಕಲ್ಪಿಸಬೇಕು ಹಾಗೂ ಸದರಿ ಯೋಜನೆಯಡಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಡಿಜಿಟಲ್ ಸಾಕ್ಷರತೆಯ ಬಗ್ಗೆ ಅರಿವು ಮೂಡಿಸುಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗನಂದ, ಡಿಹೆಚ್ ಓ ಡಾ ಮೋಹನ್ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಓದುಗರ ಬೇಡಿಕೆ-ಆಸಕ್ತಿ ಅರಿತು ಪುಸ್ತಕ ಖರೀದಿ ಮಾಡಿ- ಡಾ.ಕುಮಾರ



ಮಂಡ್ಯ: ಓದುಗರ ಆಸಕ್ತಿ ಮತ್ತು ಬೇಡಿಕೆಗೆ ಅನುಗುಣವಾಗಿ ಪುಸ್ತಕಗಳನ್ನು ಆಯ್ಕೆ ಮಾಡುವುದು ಒಂದು ಉತ್ತಮ ನಿರ್ಧಾರ. ಗ್ರಂಥಾಲಯದಲ್ಲಿ ಈ ರೀತಿಯ ಪುಸ್ತಕ ಖರೀದಿ ಮಾಡಿ ಸಂಗ್ರಹವನ್ನು ಉತ್ತಮಪಡಿಸಿ ಎಂದು ಜಿಲ್ಲಾಧಿಕಾರಿ ಡಾಕುಮಾರ ತಿಳಿಸಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಗ್ರಂಥಾಲಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. 587 ಪುಸ್ತಕ ಖರೀದಿ ಮಾಡಲು ಸಮಿತಿಯಿಂದ ತಿರ್ಮಾನ ಮಾಡಲಾಗಿದ್ದು ಉತ್ತಮ ಅಭಿರುಚಿವುಳ್ಳ ಪುಸ್ತಕ ಖರೀದಿ ಮಾಡಿ ಎಂದು ಸಭೆಯಲ್ಲಿ ತಿಳಿಸಿದರು. ಗ್ರಂಥಾಲಯದಲ್ಲಿ ಓದುಗರ ನೋಂದಣಿಯನ್ನು ಹೆಚ್ಚಿಸಿ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಪ್ರಸ್ತುತ ಹೆಚ್ಚು ಮಾರಾಟವಾಗುತ್ತಿರುವ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿಗಳ ಪುಸ್ತಕ, ಆಸಕ್ತಿದಾಯಕ ಬರಹಗಳಿಗೆ ಆದ್ಯತೆ ನೀಡಿ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಓದುಗರಿಗೆ ಆಕರ್ಷಕವಾದ ಮತ್ತು ಸುಸಜ್ಜಿತವಾದ ಅಧ್ಯಯನ ಕೊಠಡಿಗಳು, ಕುಡಿಯುವ ನೀರು ಮತ್ತು ಶೌಚಾಲಯದಂತಹ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮವಹಿಸಿ ಎಂದು ತಿಳಿಸಿದರು. ಸಭೆಯಲ್ಲಿ ಮುಖ್ಯ ಗ್ರಂಥಾಲಯ ಅಧಿಕಾರಿ ನಾರಾಯಣ ಮೂರ್ತಿ, ಸಮಿತಿಯ ಸದಸ್ಯರು ಹಾಗೂ ಸಾಹಿತಿಗಳಾದ ತೈಲೂರು ವೆಂಕಟಕೃಷ್ಣ, ರಾಜು ಹಾಗೂ ಇತರರು ಉಪಸ್ಥಿತರಿದ್ದರು.

## ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 12,764 ಪ್ರಕರಣ ಇತ್ಯರ್ಥ

ಮೈಸೂರು: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ನವದೆಹಲಿ ಮತ್ತು ಬೆಂಗಳೂರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದಂತೆ ಮೈಸೂರು ಜಿಲ್ಲೆಯನ್ನೊಳಗೊಂಡಂತೆ ರಾಜ್ಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ರಾಜಿಯಾಗಬಹುದಾದ ಪ್ರಕರಣಗಳನ್ನು ಮತ್ತು ವಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಲೋಕ್ ಅದಾಲತ್‌ನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ನಗರ ಮತ್ತು ತಾಲ್ಲೂಕುಗಳಲ್ಲಿನ ನ್ಯಾಯಾಲಯಗಳಲ್ಲಿ ಒಟ್ಟು 1,31,411 ಪ್ರಕರಣಗಳು ವಿಚಾರಣೆಗೆ ಬಾಕಿಯಿದ್ದು, ಅವುಗಳ ಪೈಕಿ 65,475 ಸಿವಿಲ್ ಪ್ರಕರಣಗಳು ಹಾಗೂ 65,936 ಕ್ರಿಮಿನಲ್ ಪ್ರಕರಣಗಳಿದ್ದು, ಪ್ರಸ್ತುತ ಸದರಿ ಪ್ರಕರಣಗಳಲ್ಲಿ 44,746 ಪ್ರಕರಣಗಳನ್ನು ರಾಜಿಯಾಗಬಹುದಾದ ಪ್ರಕರಣಗಳಿದ್ದು, ಅವುಗಳ ಪೈಕಿ 22,064 ರಾಜಿ ಸಂಧಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು. ರಾಜಿ ಸಂಧಾನಕ್ಕಾಗಿ ತೆಗೆದುಕೊಂಡ ಪ್ರಕರಣಗಳಲ್ಲಿ (ನ್ಯಾಯಾಲಯದಲ್ಲಿ ಬಾಕಿ ಇರುವ) 12,764 ಪ್ರಕರಣಗಳನ್ನು ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿರುತ್ತದೆ. ಕೌಟುಂಬಿಕ ವಿವಾದದ ಪ್ರಕರಣಗಳಲ್ಲಿ ಮೈಸೂರು ನಗರ ಹಾಗೂ ಮೈಸೂರು ತಾಲ್ಲೂಕು ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಒಟ್ಟು 40 ದಂಪತಿಗಳು ತಮ್ಮ ಮಧ್ಯದ ವಾಜ್ಯಗಳನ್ನು ಬಗೆಹರಿಸಿಕೊಂಡು ಒಂದಾಗಿರುತ್ತಾರೆ. ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಒಟ್ಟಾರೆಯಾಗಿ 12,764 ನ್ಯಾಯಾಲಯದಲ್ಲಿ ಬಾಕಿಯಿದ್ದ ಪ್ರಕರಣಗಳು ತೀರ್ಮಾನವಾಗಿರುತ್ತದೆ. ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜಿ ಸಂಧಾನ ಮೂಲಕ ಒಟ್ಟು 74,66,67,115ರೂ. ಮೊತ್ತಗಳು ಇತ್ಯರ್ಥವಾಗಿರುತ್ತದೆ. ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ತಿ.ಉಷಾರಾಣಿ ಅಭಿನಂದಿಸಿದ್ದಾರೆ. ಹಿರಿಯ ಸಿವಿಲ್ ನ್ಯಾಯಾಧೀಶ ಕೆ.ಕೆ.ಅಮರ್‌ನಾಥ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್ ಮತ್ತು ಕಾರ್ಯದರ್ಶಿ ಎ.ಜಿ.ಸುಧೀರ್ ಹಾಜರಿದ್ದರು.



## ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಕಲ ಸಿದ್ಧತೆ : ಜಿಲ್ಲಾಧಿಕಾರಿ ಶ್ರೀರೂಪ

ಚಾಮರಾಜನಗರ, .ಎಸ್.ಎಲ್.ಸಿ ಪರೀಕ್ಷೆಯು ಇದೇ ಮಾರ್ಚ್ 18ರಿಂದ ಏಪ್ರಿಲ್ 2ರವರೆಗೆ ನಡೆಯಲಿದ್ದು, ಪಾರದರ್ಶಕ ಪರೀಕ್ಷಾ ಪ್ರಕ್ರಿಯೆಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಜಿಲ್ಲಾಧಿಕಾರಿಯವರು ಜಿಲ್ಲೆಯಲ್ಲಿ 6170 ಬಾಲಕರು, 5958 ಬಾಲಕಿಯರು ಸೇರಿದಂತೆ ಒಟ್ಟು 12128 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಶಾಲಾ ವಿದ್ಯಾರ್ಥಿಗಳು 11249, ಖಾಸಗಿ ಅಭ್ಯರ್ಥಿಗಳು 288, ಪುನರಾವರ್ತಿತ ವಿದ್ಯಾರ್ಥಿಗಳು



566, ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು 25 ಮಂದಿ ಪರೀಕ್ಷೆಗೆ ಹಾಜರಾಗಲಿದ್ದಾರೆ. ಅಲ್ಲದೆ ವಿಶೇಷ ಅಗತ್ಯವುಳ್ಳ 68 ಬಾಲಕರು, 31 ಬಾಲಕಿಯರು ಸಹ ಪರೀಕ್ಷೆ ಬರೆಯಲಿದ್ದಾರೆ ಎಂದರು.

ಚಾಮರಾಜನಗರ ತಾಲೂಕಿನಲ್ಲಿ 15, ಗುಂಡ್ಲುಪೇಟೆ 10, ಹನೂರು 9, ಕೊಳ್ಳೇಗಾಲ 9, ಯಳಂದೂರು 4 ಸೇರಿದಂತೆ 47 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳು ಮತ್ತು ವೆಬ್ ಕಾಸ್ಟಿಂಗ್ ಗೆ ಪೂರ್ವ ಸಿದ್ಧತೆ ಕೈಗೊಂಡಿದು, ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ವೆಬ್ ಕಾಸ್ಟ್ ಸಂಬಂಧ ಜಿಲ್ಲಾ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು. ಪ್ರಶ್ನೆ ಪತ್ರಿಕೆಗಳನ್ನು ಪ್ರತಿದಿನ ವೇಳಾ ಪಟ್ಟಿಯಂತೆ 19 ನಿಗದಿತ ಮಾರ್ಗದಲ್ಲಿ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಬೆಂಗಾವಲಿನಲ್ಲಿ ಸರಬರಾಜು ಮಾಡಲಾಗುತ್ತದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಆಸುಪಾಸಿನ ಜೆರಾಕ್ಸ್ ಮತ್ತು ಸೈಬರ್ ಸೆಂಟರ್ ಗಳನ್ನು ಮುಚ್ಚಿಸಲು ಆದೇಶಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಪ್ರದೇಶಗಳ ವ್ಯಾಪ್ತಿಯಲ್ಲಿ ನಿರಂತರ ವಿದ್ಯುತ್ ಸರಬರಾಜಿಗೆ ಸೆಸ್ಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು. ಪರೀಕ್ಷಾ ದಿನಗಳಂದು ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್ಟಿಸಿ) ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಸಲು ಅವಕಾಶ ನೀಡಲು ನಿಗಮಕ್ಕೆ ಸೂಚಿಸಲಾಗಿದೆ. ಹೆಚ್ಚುವರಿ ಮಾರ್ಗಗಳಿಗೆ ಅಗತ್ಯ ಪ್ರಮಾಣದಲ್ಲಿ ಬಸ್ಸುಗಳನ್ನು ಒದಗಿಸಲು ಸಹ ತಿಳಿಸಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಇಲಾಖೆಯಿಂದ ಶುಶ್ರೂಷಕಿಯರನ್ನು ಔಷದೋಪಚಾರಗಳಿಗೆ ನೇಮಕ ಮಾಡಲು ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಪರೀಕ್ಷಾ ಕೇಂದ್ರದಲ್ಲಿ ಮೊಬೈಲ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ವಿದ್ಯಾರ್ಥಿಗಳಿಗಾಗಿ ತೆರೆಯಲಾಗಿದ್ದ ಸಹಾಯವಾಣಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೊರ ಜಿಲ್ಲೆಯಿಂದಲೂ ವಿದ್ಯಾರ್ಥಿಗಳು ಶಿಕ್ಷಕರನ್ನು ಸಹಾಯವಾಣಿ ಮೂಲಕ ಸಂಪರ್ಕಿಸಿದ್ದಾರೆ. 2025-26ನೇ ಸಾಲಿನಲ್ಲಿ ಎರಡು ಪರೀಕ್ಷೆಗಳನ್ನು ನಡೆಸಲಾಗುವುದು. ವಿದ್ಯಾರ್ಥಿಗಳು ಇಚ್ಚಿಸಿದ್ದಲ್ಲಿ ಎರಡನೇ ಪರೀಕ್ಷೆಗೂ ಹಾಜರಾಗಬಹುದು. ಉತ್ತಮ ಸಾಧನೆ ಮಾಡಿದ ಅಂಕವನ್ನು ಪರಿಗಣ ಸಿ ಫಲಿತಾಂಶ ಘೋಷಿಸಲಾಗುವುದು ಎಂದರು. ವಿದ್ಯಾರ್ಥಿಗಳು ಯಾವುದೇ ಗೊಂದಲ ಆತಂಕಕ್ಕೆ ಒಳಗಾಗದೆ ನಿರ್ಭೀತಿಯಿಂದ ಪರೀಕ್ಷೆಗೆ ಹಾಜರಾಗಬೇಕು. ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಪುನರಾವರ್ತನೆ, ಪುನರ್ ಅಭ್ಯಾಸ ಮಾಡಿಕೊಂಡು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು. ಪೋಷಕರು ಸಹ ಮಕ್ಕಳಿಗೆ ಉತ್ತೇಜನ ನೀಡಿ ಪರೀಕ್ಷೆಯನ್ನು ಒತ್ತಡರಹಿತವಾಗಿ ಬರೆಯಲು ಪೂರಕವಾದ ವಾತಾವರಣ ಕಲ್ಪಿಸಬೇಕು. ಪರೀಕ್ಷಾ ಪಾವಿತ್ರ್ಯತೆ ಹಾಗೂ ಗೌಪ್ಯತೆ ಕಾಪಾಡಲು ಜಿಲ್ಲಾಡಳಿತ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಎಸ್.ಎಸ್.ಎಲ್.ಸಿ ಪೂರ್ವಭಾವಿ ಪರೀಕ್ಷೆ ಫಲಿತಾಂಶದ ಮೊದಲ ಐದು ಅಗ್ರ ಸ್ಥಾನಗಳಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಇದ್ದಾರೆ. ಹೀಗಾಗಿ ಈ ಬಾರಿ ಮುಖ್ಯ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ. ಹಾಡಿ ಗಿರಿಜನ ಪ್ರದೇಶಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಸಜ್ಜಾಗಲು ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಪಾಟಿಲ್, ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

## ಗುಂಡ್ಲುಪೇಟೆ: ಎಚ್.ಪಿ.ವಿ ಲಸಿಕಾ ಅಭಿಯಾನ



ಗುಂಡ್ಲುಪೇಟೆ:-ಹೆಣ್ಣು ಮಕ್ಕಳ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಎಚ್.ಪಿ.ವಿ ಲಸಿಕಾ ಅಭಿಯಾನ ಕಾರ್ಯಕ್ರಮವನ್ನು ತೆರಕಣಾಂಬಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ ಅಲಿಂ ಪಾಷ, ಹೆಣ್ಣು ಮಕ್ಕಳ ಭವಿಷ್ಯದ ಆರೋಗ್ಯದ ದೃಷ್ಟಿಯಿಂದ ಈ ಅಭಿಯಾನ ಅತ್ಯಂತ ನಿರ್ಣಾಯಕ. ಗರ್ಭಕಂಠದ ಕ್ಯಾನ್ಸರ್ ಇಂದು ಮಹಿಳೆಯರನ್ನು ಕಾಡುತ್ತಿರುವ ದೊಡ್ಡ ಪಿಡುಗು. ಇದನ್ನು ಆರಂಭಿಕ ಹಂತದಲ್ಲಿ ತಡೆಗಟ್ಟಲು 14 -15 ವರ್ಷದ ಹೆಣ್ಣು ಮಕ್ಕಳಿಗೆ (2011ರಲ್ಲಿ ಜನನವಾದ ) ಈ ಲಸಿಕೆ ನೀಡಲಾಗುತ್ತಿದೆ. ಈ ವಯಸ್ಸಿನಲ್ಲಿ ನೀಡುವ ಲಸಿಕೆಯು ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿ, ಕ್ಯಾನ್ಸರ್ ಬರದಂತೆ ರಕ್ಷಣೆ ನೀಡುತ್ತದೆ' ಎಂದು ಹೇಳಿದರು.

'ಸರ್ಕಾರವು ಉಚಿತವಾಗಿ ನೀಡುವ ಈ ಲಸಿಕೆ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸಬೇಕು. ಯಾವುದೇ ರೀತಿಯ ಅಡ್ಡಪರಿಣಾಮಗಳ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ತಾಲ್ಲೂಕಿನ ಎಲ್ಲ ಅರ್ಹ ಹೆಣ್ಣು ಮಕ್ಕಳು ಈ ಲಸಿಕೆಯ ಸದುಪಯೋಗ ಪಡಿಸಿಕೊಳ್ಳಬೇಕು. ಎಂದು ಮಾಹಿತಿ ನೀಡಿದರು ನಮ್ಮ ಗುಂಡ್ಲುಪೇಟೆ ತಾಲೂಕಿನಲ್ಲಿ 1400 ಹೆಣ್ಣು ಮಕ್ಕಳು ಅರ್ಹ ಫಲಾನುಭವಿಗಳಾಗಿದ್ದು ತೆರಕಣಾಂಬಿ ವ್ಯಾಪ್ತಿಯಲ್ಲಿ 64 ಮಕ್ಕಳು ಲಸಿಕ ಫಲಾನುಭವಿ ಮಕ್ಕಳಾಗಿರುತ್ತಾರೆ. ಅದರಂತೆ ಈ ದಿನ 40 ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದೆ ಎಂದು ತಿಳಿಸಿದರು. ತಾಲೂಕು ಅರೋಗ್ಯ ಅಧಿಕಾರಿಗಳು. ವೈದ್ಯಾಧಿಕಾರಿಗಳು ಹಿರಿಯ ಅರೋಗ್ಯ ನೀರಿಕ್ಷಣಾಧಿಕಾರಿಗಳು, ಹಿರಿಯ ಸುರಕ್ಷಣಾಧಿಕಾರಿಗಳು, ಅರೋಗ್ಯ ಸಿಬ್ಬಂದಿಗಳು ಫಲಾನುಭವಿ ಮಕ್ಕಳ ಪೋಷಕರು ಬಾಗವಹಿಸಿದ್ದರು

## ಮುಸ್ಲಿಂ ಧರ್ಮಗುರುಗಳಿಗೆ ಶಾಸಕರಿಂದ ಸನ್ಮಾನ



ಚಾಮರಾಜನಗರ, ಭಾನುವಾರ- ರಂಜಾನ್ ಹಬ್ಬದ ಹಿನ್ನೆಲೆ ನಗರದ ಮೌಲಾನಾ ಆಜಾದ್ ಕಮ್ಯೂನಿಟಿ ಹಾಲ್ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಶಾಸಕ ಸಿ,ಪುಟ್ಟರಂಗಶೆಟ್ಟಿ ಅವರು ವಿವಿಧ ಮಸೀದಿಗಳ ಧರ್ಮ ಗುರುಗಳನ್ನು ಸನ್ಮಾನಿಸಿ ಸಿಹಿ ಹಂಚಿದರು

ಇದೇ ವೇಳೆ ಶಾಸಕ ಸಿ,ಪುಟ್ಟರಂಗಶೆಟ್ಟಿ ಅವರು ಮಾತನಾಡಿ ದೇಶದ್ಯಾಂತ ರಂಜಾನ್ ಹಬ್ಬವನ್ನು ಮುಸ್ಲಿಂಭಾಂದವರು ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ಎಲ್ಲರಿಗೂ ಒಳಿತನ್ನು ಬಯಸುವುದು ಸರ್ವಧರ್ಮದ ಆಶಯವಾಗಿದೆ. ರಂಜಾನ್ ಹಬ್ಬವನ್ನು ಮುಸ್ಲಿಂಭಾಂದವರು ಸಂಭ್ರಮದಿಂದ ಆಚರಿಸಿ ಎಂದರು. ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಮಾಜಿ ಅಧ್ಯಕ್ಷರಾದ ಸಯ್ಯದ್‌ರಫಿ, ಸುಹೇಲ್ ಅಲಿಖಾನ್, ಮುಖಂಡರಾದ ಆಯುಬ್ ಖಾನ್, ನಯಾಜ್ ಪಾ?ಾ,ಇಬ್ರಾನ್‌ಅಹಮದ್,ಅಪ್ಸರಹಮದ್,ಪರ್ವೇಜ್ ಸೈಯದ್ ಇರ್ಷದ್, ನಗರಸಭಾ ನಾಮನಿರ್ದೇಕ ಸ್ವಾಮಿ ರಾಜು, ಸೇರಿದಂತೆ ಮುಸ್ಲಿಂಭಾಂದವರು ಹಾಜರಿದ್ದರು

# ಸಮ ಸಮಾಜ ನಿರ್ಮಾಣದ ಕರ್ತೃ ಕ್ಯಾನಿರಾಂ



ಚಾಮರಾಜನಗರ: ಬಹುಜನ ಸಮಾಜ ಪಕ್ಷದ ಸಂಸ್ಥಾಪಕರಾದ ಕಾನ್ಶಿರಾಮ್ ಅವರು ಸಮ ಸಮಾಜ ನಿರ್ಮಾಣದ ಕರ್ತೃವಾಗಿದ್ದು, ದಲಿತರು, ಹಿಂದುಳಿದ ವರ್ಗಗಳು ಹಾಗೂ ಅಲ್ಪ ಸಂಖ್ಯಾತರ ಹಕ್ಕುಗಳಿಗಾಗಿ ಹೋರಾಟ ಮಾಡಿದ ಮಹಾಪುರುಷ ಎಂದು ಬಿಎಸ್ಪಿ ಮುಖಂಡ ವಾಸು ಹೊಂಡರಬಾಳು ಬಣಸಿದರು.

ನಗರದ ಪ್ರವಾಸಿಮಂದಿರದಲ್ಲಿ ಬಹುಜನ ಸಮಾಜ ಪಕ್ಷದಿಂದ ಕ್ಯಾನಿರಾಂ ಅವರ 92ನೇ ಜಯಂತಿಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಕಾನ್ಶಿರಾಂ ಅವರು ಸಂಘಟನೆಯ ಮೂಲಕ ಜನ ಜಾಗೃತಿ ಮೂಡಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 1971ರಲ್ಲಿ ಬ್ಯಾಮ್‌ಸೆಟ್ ಮತ್ತು 1981ರಲ್ಲಿ ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿ ಸ್ಥಾಪಿಸಿಸುವ ಮೂಲಕ ಅಹಿಂದ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಡಾ.ಬಿ.ಆರ್. ಅಂಭೇಡ್ಕರ್ ಅವರ ಸಿದ್ಧಾಂತಗಳಿಂದ ಪ್ರೇರಿತರಾಗಿ ಶೋಷಿತ ಸಮುದಾಯಗಳನ್ನು ಸಮಾಜದ ಮುಖ್ಯಾಹಿನಿ ತರಲು ಪ್ರಯತ್ನಿಸುತ್ತಾ. ರಾಜಕೀಯ ಅಧಿಕಾರ ಬೇಕೆಂಬ ಉದ್ದೇಶವನ್ನು ಹೊಂದಿ 1984ರಲ್ಲಿ ಬಹುಜನ ಸಮಾಜ ಪಕ್ಷವನ್ನು ಸ್ಥಾಪನೆ ಮಾಡಿ ಉತ್ತರ ಪ್ರದೇಶದಲ್ಲಿ ಬಿಎಸ್ಪಿಯನ್ನು ಪ್ರಬಲವಾಗಿ ಸಂಘಟನೆ ಮಾಡಿದ್ದರು. ಇದರ ಫಲವಾಗಿ ಅಕ್ಕ ಮಾಯವತಿ ಅವರು ಉತ್ತರ ಪ್ರದೇಶದಲ್ಲಿ ನಾಲ್ಕು ಬಾರಿ ಮುಖ್ಯಮಂತ್ರಿಯಾದರು. ಅವರ ಸಂಘಟನೆ ಶಕ್ತಿ ಮತ್ತು ಹೋರಾಟಕ್ಕೆ ಸಾಕ್ಷಿಯಾಗಿದೆ. ಕಾನ್ಶಿರಾಮ್ ಅವರು ತತ್ವ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಂಡು ಅವರ ಹಾದಿಯಲ್ಲಿಯೇ ಸಾಗೋಣ. ಕರ್ನಾಟಕದಲ್ಲಿಯೂ ಸಹ ಬಿಎಸ್ಪಿಯನ್ನು ಪ್ರಬಲವಾಗಿ ಸಂಘಟಿಸುವ ರಾಜಕೀಯ ಅಧಿಕಾರನ್ನು ಪಡೆದುಕೊಳ್ಳುವ ಮೂಲಕ ಕಾನ್ಶಿರಾಂ ಅವರ ಕನಸು ನನಸು ಮಾಡುವ ದಿಕ್ಕಿನಲ್ಲಿ ಎಲ್ಲರು ಬಹುಜನ ಚಳವಳಿಯನ್ನು ಮುಂದುವರಿಸೋಣ ಎಂದರು. ಕಾರ್ಯಕ್ರಮದಲ್ಲಿ ಮುಖಂಡರಾದ ಸಿದ್ದಯ್ಯನಪುರ ಎಸ್. ಪಿ. ಮಹೇಶ್, ದೇವಲಾಪುರ ಶಿವಣ್ಣ, ಟೌನ್ ಅಧ್ಯಕ್ಷ ಗಾಳಿಪುರ ರಂಗಸ್ವಾಮಿ, ಬಾಬು ರಾಮಸಮುದ್ರ, ಅಮಚವಾಡಿ ಕಾಂತರಾಜು, ಸಿದ್ದರಾಜು, ಛಲವಾದಿ ಮಹಾಸಭಾ ಮಾಜಿ ಅಧ್ಯಕ್ಷ ರಮೇಶ್, ಅಶೀತ್ ರಾಮಸಮುದ್ರ , ಮಧು ಮಹೇಶ, ಶಿವಣ್ಣ ಹಾಜರಿದ್ದರು.

**ದೋಷರಹಿತವಾಗಿ ನಿರ್ವಹಿಸಲು ತಾಂತ್ರಿಕ ಸಿಬ್ಬಂದಿಗೆ ಡಿಸಿ ಸೂಚನೆ**

# ಡಿಜಿಟಲ್ ಮಾದರಿಯಲ್ಲಿ ಜನಗಣತಿ




ಮಂಡ್ಯ: 2027ರ ಜನಗಣತಿಯು ಸಂಪೂರ್ಣವಾಗಿ ಡಿಜಿಟಲ್ ಮಾದರಿಯಲ್ಲಿ ನಡೆಯುತ್ತಿರುವುದರಿಂದ, ಕಾರ್ಯಾಚರಣೆಯನ್ನು ದೋಷರಹಿತವಾಗಿ ನಿರ್ವಹಿಸಲು ತಾಂತ್ರಿಕ ಪರಿಣಿತರು ಮತ್ತು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜನ ಗಣತಿ 2027ರ 1 ಹಂತದ ಕಾರ್ಯಚರಣೆ ಸಂಬಂಧ ನಿಯೋಜನೆಗೊಂಡಿರುವ ತಾಂತ್ರಿಕ ಸಿಬ್ಬಂದಿಗಳಿಗೆ ತರಬೇತಿಯಲ್ಲಿ ಮಾತನಾಡಿದರು.

2011ರಲ್ಲಿ ಜನಗಣತಿಯು ಹಳೆಯ ಮ್ಯಾನುವೆಲ್ ಪದ್ಧತಿಯಲ್ಲಿ ನಡೆದಿತ್ತು. ಆದರೆ, 2027ರ ಜನಗಣತಿಯು ಸಂಪೂರ್ಣವಾಗಿ ಮೊಬೈಲ್ ಆಪ್ ಮೂಲಕ ನಡೆಯಲಿದೆ. ದತ್ತಾಂಶ ನಿಖರತೆ ಮತ್ತು ಪಾರದರ್ಶಕತೆ ಹೆಚ್ಚಲಿದ್ದು, ಸರ್ಕಾರದ ಸೌಲಭ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಸಹಕಾರಿ ಎಂದು ತಿಳಿದರು.

2027ರ ಜನಗಣತಿಯು ಸಂಪೂರ್ಣ ಡಿಜಿಟಲ್ ಆಗಿರುವುದರಿಂದ, ಮೊಬೈಲ್ ಆ?ಪ್ ಬಳಕೆ, ಡಿಜಿಟಲ್ ದತ್ತಾಂಶ ನಮೂದು ಮತ್ತು ಮನೆ ಪಟ್ಟಿ ನಕ್ಷೆ ತಯಾರು (ಊಐಃ) ಮಾಡುವ ಬಗ್ಗೆ ತಾಂತ್ರಿಕ ಸಿಬ್ಬಂದಿಗಳು ಹೆಚ್ಚು ಗಮನಹರಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

2027ರ ಜನಗಣತಿಯು ಸಂಪೂರ್ಣ ಡಿಜಿಟಲ್ ಆಗಿದ್ದು, 'ಜನಗಣತಿ ನಿರ್ವಹಣೆ ಮತ್ತು ಮೇಲ್ವಿಚಾರಣೆ ವ್ಯವಸ್ಥೆ' (ಅಒಒಖ) ಪೋರ್ಟಲ್ ಮೂಲಕ ಲೈವ್ ಮಾನಿಟರಿಂಗ್, ಮನೆ-ಪಟ್ಟಿ ಮತ್ತು ದತ್ತಾಂಶ ನಿರ್ವಹಣೆಯ ವಿಷಯಗಳ ಬಗ್ಗೆ ತಾಂತ್ರಿಕ ಸಿಬ್ಬಂದಿಗಳು ತಿಳಿದು ಕೆಲಸ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜನಗಣತಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕಿ ಶ್ರೀಮತಿ ಧನ್ಯ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಕೇಶವಮೂರ್ತಿ, ಜಿಲ್ಲಾಧಿಕಾರಿಗಳ ಕಚೇರಿಯ ಸಹಾಯಕ ನಿರ್ದೇಶಕ ಚೇತನ್ ಎಸ್ ಹಾಜರಿದ್ದರು.

# ಗುಪ್ತ ಭಕ್ತಿಯ ನಿಜಶರಣೆ ಬೊಂತಾದೇವಿ

## ಉಪೇಕ್ಷಿತ ವಚನಕಾರರು



| ವೀಣಾ ಹೇಮಂತ್‌ಗೌಡ ಪಾಟೀಲ್

ಕೇವಲ ಎರಡು ಮೂರು ದಶಕಗಳ ಕಾಲ ಕಲ್ಯಾಣದ ಅನುಭವ ಮಂಟಪದ ಅನುಭಾವಿಗಳ ಬದುಕು ಇಡೀ ವಿಶ್ವವನ್ನೇ ತನ್ನತ್ತ ತಿರುಗಿಸಿತ್ತು ಎಂದರೆ ತಪ್ಪಲ್ಲ. ನುಡಿದಂತೆ ನಡೆದ ನಡೆದಂತೆ ನುಡಿದ ಶರಣರು ಕಾಯಕ, ದಾಸೋಹ ಹಾಗೂ ಲಿಂಗ ಪೂಜೆಗಳನ್ನು ತಮ್ಮ ಬದುಕಿನ ಭಾಗವನ್ನಾಗಿಸಿಕೊಂಡರು.ಬಸವಾದಿ ಶಿವಶರಣರ ಖ್ಯಾತಿ ಜಗದಗಲ ಮುಗಿಲಗಲ ಮಿಗೆ ಯಗಲ ಎಂಬಂತೆ ಎಲ್ಲೆಡೆ ಹಬ್ಬಿತ್ತು. ಆಯಸ್ಕಾಂತದಂತೆ ಹಬ್ಬಿದ ಅವರ ಆಕರ್ಷಣೆಗೆ ಒಳಗಾಗಿ ಕಲ್ಯಾಣಕ್ಕೆ ಆಗಮಿಸಿ ಅಲ್ಲಿಯೇ ನೆಲೆಸಿದ ಶಿವಶರಣರಲ್ಲಿ ಕಾಶ್ಮೀರ ರಾಜ್ಯದ ಮಾಂಡವ್ಯಪುರದ ರಾಜಕುಮಾರಿ

**ನಿಜ ದೇವಿಯೂ ಒಬ್ಬಳು... ಆಕೆಯೇ ಬೊಂತಾದೇವಿ.**

ಕಾಶ್ಮೀರ ದೇಶದ ಮಾಂಡವ್ಯಪುರವನ್ನು ಆಳುತ್ತಿದ್ದ ಮಹಾದೇವ ಭೂಪಾಲ ಮಹಾರಾಜನ ಸಹೋದರಿ ಆಕೆ. ಮುಂದೆ ಮಹಾದೇವ ಭೂಪಾಲರು ತಮ್ಮ ಪತ್ನಿಯೊಂದಿಗೆ ಕಲ್ಯಾಣ ಪಟ್ಟಣಕ್ಕೆ ಬಂದು ನೆಲೆಸಿ ಕಟ್ಟಿಗೆ ಕಡಿದು ಮಾರುವ ಮೋಳಿಗೆ ವೃತ್ತಿಯನ್ನು ಕೈಗೊಂಡು ಮೋಳಿಗೆ ಮಾರಯ್ಯ ಹಾಗೂ ಪತ್ನಿ ಮೋಳಿಗೆ ಮಹಾದೇವಿ ಎಂಬ ಹೆಸರಿನಲ್ಲಿ ಗುರುತಿಸಲ್ಪಟ್ಟರೆ ಅವರ ಸಹೋದರಿ ನಿಜದೇವಿಯು ಅಣ್ಣ ಮತ್ತು ಅತ್ತಿಗೆಯರಂತೆಯೇ ತಾವು ಕೂಡ ಶರಣ ಧರ್ಮದ ಆಕರ್ಷಣೆಗೆ ಒಳಗಾಗಿ ಅರಮನೆಯ ಸುಪ್ಪತ್ತಿಗೆಯನ್ನು ತೊರೆದು ಐಹಿಕ ಭೋಗಗಳನ್ನು ತ್ಯಜಿಸಿ ಬೊಂತಾದೇವಿ ಎಂಬ ಹೆಸರಿನಿಂದ ಕಲ್ಯಾಣಕ್ಕೆ ಬಂದು ನೆಲೆಸಿದರು.

ಈಕೆ ಓರ್ವ ಗುಪ್ತ ಶಿವಭಕ್ತಳಾಗಿದ್ದಳು. ಅರಮನೆಯ ಸುಪ್ಪತ್ತಿಗೆಯಲ್ಲಿದ್ದರೂ ಕೂಡ ಬಡವ, ದೀನ ದಲಿತರ ಕುರಿತು ಸದಾ ಚಿಂತಿಸುತ್ತಿದ್ದ ಆಕೆ ಒಂದು ಬಾರಿ ಸಾಯಂಕಾಲದ ವಾಯುವಿಹಾರಕ್ಕೆ ನಗರದ ಆಚೆ ನಡೆದು ಹೋಗುತ್ತಿದ್ದಾಗ ಒಂದು ಚೂರು ಅರಿವೆ ಕೂಡ ಮೈಮೇಲೆ ಇರದ ಓರ್ವ ವೃದ್ಧ ಹೆಣ್ಣು ಮಗಳನ್ನು ಕಂಡು ತನ್ನೆಲ್ಲ ಬಟ್ಟೆಗಳನ್ನು ಕಳಚಿ ಆಕೆಗೆ ಕೊಟ್ಟು ಬಂದಿದ್ದಳು ಎಂದು ಹೇಳುತ್ತಾರೆ. ಧನ ಕನಕಾದಿಗಳ ಮೋಹವನ್ನು ತೊರೆದ ಆಕೆ ಬಡವರ ದೀನ ದಲಿತರ ಸೇವೆಯನ್ನು ಮಾಡುತ್ತಿದ್ದಳಲ್ಲದೆ ಅವರಿಗೆ ಔಷಧಿ ಚಿಕಿತ್ಸೆಯನ್ನು ಕೂಡ ನೀಡುತ್ತಿದ್ದಳು.

ಮುಂದೆ ಕಲ್ಯಾಣಕ್ಕೆ ಬಂದ ಆಕೆ ಕಲ್ಯಾಣದ ಶರಣ ಗಣದಲ್ಲಿ ಒಬ್ಬಳಾಗಿ ಬದುಕನ್ನು ನಡೆಸುತ್ತಿರುವಾಗ ಆಕೆಯ ಭಕ್ತಿಯನ್ನು ಪರೀಕ್ಷಿಸಲು ಸಾಕ್ಷಾತ್ ಪರಶಿವನೆ ಬರಬೇಕಾಯಿತು.. ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದ ನಿಜದೇವಿಯು ಕೌದಿ ಹೋಲಿಯುವ ಕಾಯಕವನ್ನು ಮಾಡುತ್ತಿದ್ದರು ಯಾರ ಗಮನಕ್ಕೆ ಅಷ್ಟಾಗಿ ಬಾರದಂತೆ ಕಾರ್ಯನಿರ್ವಹಿಸುತ್ತಿದ್ದ ಆಕೆಯನ್ನು ಅನುಭವ ಮಂಟಪದ ಶೂನ್ಯಸಿಂಹಾಸನಾಧೀಶ್ವರರಾದ ಅಲ್ಲಮಪ್ರಭುಗಳು ಗಮನಿಸಿದ್ದರು.



ಬೊಂತಾ ದೇವಿಯು ಕೌದಿ ಹೊಲಿಯುವ ಕಾಯಕವನ್ನು ಮಾಡುತ್ತಿದ್ದ ಕಾರಣ ಆಕೆಗೆ ಬೊಂತಾದೇವಿ ಎಂಬ ಹೆಸರು ಬಂತು ಎಂದು ಕೆಲವರು ಹೇಳಿದರೆ, ಮತ್ತೆ ಕೆಲವರು ವೃದ್ಧ ವೇಷದಲ್ಲಿ ಬಂದ ಶಿವನು ಚಳಿಯಿಂದ ನಡುಗುತ್ತಿರುವುದನ್ನು ನೋಡಿ ಆಕೆ ತಾನು ಹೊಲಿಯುತ್ತಿದ್ದ ಕೌದಿಯನ್ನು ಆತನಿಗೆ ಹೊದ್ದುಕೊಳ್ಳಲು ನೀಡಿದ ಕಾರಣ ಆಕೆಗೆ ಬೊಂತಾದೇವಿ ಎಂಬ ಹೆಸರು ಬಂತು ಎಂದು ಮತ್ತೆ ಕೆಲವೆಡೆ ಹೇಳಲಾಗಿದೆ. ಇವರ ವೀರ ವೈರಾಗ್ಯ ಹಾಗೂ ಕಾಯಕ ದಲ್ಲಿನ ಶ್ರದ್ದೆಯನ್ನು ಕಾವ್ಯ ಪುರಾಣಗಳು ಕೊಂಡಾಡಿವೆ.

ತನ್ನ ಅಸಾಮಾನ್ಯ ಗುಪ್ತ ಭಕ್ತಿಗೆ ಮರುಳ ಶಂಕರ ದೇವರ, ನಿಷ್ಠೆಗೆ ನೀಲಾಂಬಿಕಾ ತಾಯಿಯ, ವಿರಕ್ತಿಗೆ ಅಕ್ಕಮಹಾದೇವಿಯ, ಜಾತೀಯತೆಯ ವಿಡಂಬನೆಗೆ ಪ್ರಭುದೇವರ, ಕಾರ್ಯಶ್ರದ್ದೆಗೆ ಕೊಟ್ಟಣದ ಸೋಮವ್ವೆಗೆ ಸಮವೆನಿಸಿದ ಬೊಂತಾ ದೇವಿಯು ಕಲ್ಯಾಣದ ಎಲ್ಲ ಶರಣರ ಮೆಚ್ಚುಗೆಗೆ ಪಾತ್ರವಾಗಿದ್ದರು.

ಅಕ್ಕಮಹಾದೇವಿ ತಾಯಿಯಂತೆ ಆಕೆಯೂ ಕೂಡ ವೈವಾಹಿಕ ಬಂಧನವನ್ನು ಒಲ್ಲೆ ಎಂದು ತ್ಯಜಿಸಿದವರು.

ಶಿಕ್ಷಿತಳಾಗಿದ್ದ ಆಕೆ ಬಿಡಾಡಿ ಎಂಬ ಅಚ್ಚ ಕನ್ನಡದ ಅಂಕಿತ ನಾಮದಲ್ಲಿ ವಚನಗಳನ್ನು ರಚಿಸಿದರು. ಪರಮಾತ್ಮನು ಸರ್ವತಂತ್ರ ಸ್ವತಂತ್ರ.... ಆತನಿಗೆ ಯಾವುದೇ ನಿರ್ಬಂಧಗಳಿಲ್ಲ ಎಂಬ ಅರ್ಥದಲ್ಲಿ ಆತನನ್ನು ಬಿಡಾಡಿ ಎಂದು ಕರೆದಿರುವ ಮುಂತಾದೇವಿಯವರ ಒಂದು ವಚನ ಹೀಗಿದೆ

**ಅಂತಾಯಿತ್ತಿಂತಾಯಿತ್ತೆಂತಾಯಿತ್ತೆನಬೇಡ,**
**ಅನಂತನಿಂತಾತನೆಂದರಿಯಾ ಬಿಡಾಡಿ.**
**ಕರೆದಡೆ ಓ ಎಂಬುದು**
**ನಾದವೊ ಬಿಂದುವೊ ಪ್ರಾಣವೊ**
**ಇದಾವುದು ? ಬಲ್ಲಡೆ ನೀ ಹೇಳಾ, ಬಿಡಾಡಿ.**
**ನಾಲ್ಕು ವೇದ, ಹದಿನಾರು ಶಾಸ್ತ್ರ, ಹದಿನೆಂಟು**
**ಪುರಾಣ, ಇಪ್ಪತ್ತೆಂಟಾಗಮ**
**ಇದಪ್ರತಿ ಬಿಡಾಡಿ.**
**ಶಬ್ದವೆ ಬ್ರಹ್ಮ, ಶಬ್ದವೆ ಸಿದ್ಧ, ಶಬ್ದವೆ ಶುದ್ಧ ಕಾಣಿರೆ,**
**ಬಿಡಾಡಿ ?**



ಬಂತಾದೇವಿಯವರ ಗುಪ್ತ ಭಕ್ತಿಯು ಹೊರ ಬಂದದ್ದು ಅಕ್ಕಮಹಾದೇವಿ ಕದಳಿವನಕ್ಕೆ ಹೊರಟು ನಿಂತಾಗ ಆಕೆಯನ್ನು ಬೀಳ್ಕೊಡಲು ಸೇರಿದ ಶರಣರು ಮತ್ತೆ ಕಲ್ಯಾಣಕ್ಕೆ ಮಹಾದೇವಿಯಂತಹ ಶರಣೆ ದೊರೆಯುವಳೆ ಎಂದು ಹಲುಬಿದಾಗ ಅಲ್ಲಮ ಪ್ರಭುಗಳು ಬೊಂತಾದೇವಿಯ ಮಹಿಮೆಯನ್ನು ತಿಳಿ ಹೇಳುತ್ತಾರೆ.

ಮುಂದೆ ಕಲ್ಯಾಣ ಕ್ರಾಂತಿಯ ನಂತರ ಶರಣರೆಲ್ಲ ಉಳವಿಯೆಡೆ ವಚನದ ಕಟ್ಟುಗಳನ್ನು ಹೊತ್ತು ನಡೆದರೆ ಬೊಂತಾದೇವಿ ಮಾತ್ರ ಕಲ್ಯಾಣದಲ್ಲಿಯೇ ಉಳಿದುಕೊಂಡಳು. ಅಲ್ಲಿಯೇ ತನ್ನ ಕಾಯಕ ಮತ್ತು ದೀನದಲಿತರ ಸೇವ ಕಾರ್ಯವನ್ನು ಮುಂದುವರೆಸಿದ ಆಕೆ ಅಲ್ಲಿಯೇ ಲಿಂಗೈಕ್ಯಳಾದಳು.

**ಅರಿವೆ ಬಿಡಾಡಿ, ಅರಿಯದೆ ಬಿಡಾಡಿ,**
**ಮರವೆ ಬಿಡಾಡಿ, ಮರೆಯದೆ ಬಿಡಾಡಿ,**
**ಅರಿವರತು ಕುರುಹಿಲ್ಲದಾತ ನೀನೆ ಬಿಡಾಡಿ.**

**ಎಲ್ಲಿ ನೋಡಿದಡೆ ಬಯಲೊಂದೆ**
**ಬಿತ್ತಿಯಿಂದ ಒಳಹೊರಗೆಂಬನಾಮವೈಸೆ. ಎಲ್ಲಿ ನೋಡಿದಡೆ**
**ಕರೆದಡೆ ಓ ಎಂಬಾತನೆ ಬಿಡಾಡಿ.**

ಅವರಿಗಿದ್ದ ಅಪಾರವಾದ ಆಧ್ಯಾತ್ಮಿಕ ಜ್ಞಾನವನ್ನು ಬೊಂತಾದೇವಿಯವರ ವಚನಗಳಲ್ಲಿ ನಾವು ಕಾಣಬಹುದು

ಬಯಲು ಎಂದರೆ ಶೂನ್ಯ ಶೂನ್ಯದಿಂದಲೇ ವಿಶ್ವ ಹಾಗೂ ಈ ಶೂನ್ಯ ಸಂಪಾದನೆ ಭಕ್ತನ ಪರಮ ಗುರಿ ಎಂದು ಹೇಳಿದ ಆಕೆ ಅಂತಿಮವಾಗಿ ಬಯಲನ್ನು ಶಿವನಲ್ಲಿ ಒಂದಾಗಿಸಿ ಎಲ್ಲರೂ ಬಯಲಾಗುವುದೇ ಜೀವನದ ಸತ್ಯ ಎಂದು ಹೇಳಿದ್ದಾರೆ

**ಘಟದೊಳಗಣ ಬಯಲು, ಮಠದೊಳಗಣ**
**ಬಯಲು,**
**ಬಯಲು ಬಯಲು ಬಯಲು ?**
**ತಾನೆಲ್ಲಾ ಬಯಲು, ಬಿಡಾಡಿ ಬಯಲು.**

ಒಟ್ಟು ಆರು ವಚನಗಳು ದೊರೆತಿದ್ದು ಅದರಲ್ಲಿ ಶಿವನ ಸ್ವರೂಪತೆ ಅಸೀಮ ಅನಂತತೆಯನ್ನು ವರ್ಣಿಸಲಾಗಿದೆ ಇದರ ಜೊತೆಗೆ ಸಾಮಾಜಿಕ ಕಳಕಳಿ ಸಮಸಭಾವ ಮತ್ತು ಆಧ್ಯಾತ್ಮಿಕ ಸಾಧನೆಗಳು ಮಿಳಿತಗೊಂಡಿವೆ

ಇಂತಹ ಅಪಾರ ಜ್ಞಾನ ಸಾಗರ ಹಾಗೂ ಗುಪ್ತ ಭಕ್ತಿಯು ಮೇಳವಿಸಿದ ಗುಪ್ತಶರಣೆ ಬೊಂತಾ ದೇವಿಗೆ ನಮೋನ್ನಮಹ.

# ಯುವಕ-ಯುವತಿಯರ ಉಚಿತ ಕೌಶಲ್ಯ ತರಬೇತಿ ನೀಡಿ

## ಡೀಸಿ ಡಾ. ಕುಮಾರ ಸೂಚನೆ



**ಮಂಡ್ಯ :** ಯುವಕ-ಯುವತಿಯರಿಗೆ ಆಸಕ್ತಿಯ ಕ್ಷೇತ್ರದಲ್ಲಿ ಉದ್ಯೋಗ ಮಾಡಲು ಉಚಿತ ಕೌಶಲ್ಯ ತರಬೇತಿ ಹಾಗೂ ಸ್ವ ಉದ್ಯೋಗ ನೀಡಲು ಮಾರ್ಗದರ್ಶನ ನೀಡಲು ಅಗತ್ಯ ಕ್ರಮ ಕ?ಗೊಳ್ಳುವಂತೆ ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಕೌಶಲ್ಯ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೌಶಲ್ಯ ಅಭಿವೃದ್ಧಿ ತರಬೇತಿಗಳು ಇಂದಿನ ಯುವಜನತೆಗೆ ಅಗತ್ಯವಾಗಿದ್ದು, ಪ್ರಸಕ್ತ ಕೈಗಾರಿಕೆ ಹಾಗೂ ಉದ್ಯೋಗ ಮಾರುಕಟ್ಟೆಗೆ ಅವಶ್ಯಕವಾಗಿರುವ ತರಬೇತಿಗಳನ್ನು ನೀಡಲು ಕ್ರಮ ವಹಿಸುವಂತೆ ಹಾಗೂ ಕೈಗಾರಿಕೆಗಳ ಸಹಯೋಗದೊಂದಿಗೆ ತರಬೇತಿ ಯೋಜನೆಗಳನ್ನು ರೂಪಿಸುವಂತೆ ತಿಳಿಸಿದರು.

ಯುವನಿಧಿ, ಯುವನಿಧಿ ಪ್ಲಸ್ ಯೋಜನೆಯಡಿ ತಾಂತ್ರಿಕ ಹಾಗೂ ಕೈಗಾರಿಕಾ ಕೌಶಲವನ್ನು ಯುವಕರಿಗೆ ಕಲಿಸಿ ಅವರಿಗೆ ಉದ್ಯೋಗಾವಕಾಶ ಕಲ್ಪಿಸುವಂತೆ ತಿಳಿಸಿದರು.

ಜಿಲ್ಲೆಯ ಯುವಕರಿಗೆ ಉದ್ಯೋಗ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಬೇರೆ ಬೇರೆ ಸಂಸ್ಥೆಗಳಿಂದ ಸ್ಪೋಕನ್ ಇಂಗ್ಲಿಷ್ ತರಬೇತಿಯನ್ನು ನೀಡುವಂತೆ ಮತ್ತು ವಿಶೇಷ ಚೇತನರಿಗೆ ವಿಶೇಷ ತರಬೇತಿ ಕಾರ್ಯಕ್ರಮವನ್ನು ನೀಡುವಂತೆ ಸೂಚಿಸಿದರು.

ಸ್ವನಿಧಿ ಯೋಜನೆಯಡಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಕೈಗೊಂಡು ಕೇಂದ್ರ ಸರ್ಕಾರದ 8 ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಯೋಜನೆಗಳ ಸಂಪರ್ಕ ಕಲ್ಪಿಸಬೇಕು ಹಾಗೂ ಸದರಿ ಯೋಜನೆಯಡಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಡಿಜಿಟಲ್ ಸಾಕ್ಷರತೆಯ ಬಗ್ಗೆ ಅರಿವು ಮೂಡಿಸುಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗನಂದ, ಡಿಹೆಚ್ ಓ ಡಾ ಮೋಹನ್ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ರಮೇಶ ಬಂಡಿಸಿದ್ದೇಗೌಡ ಕ್ಷಮೆ ಕೇಳಲಿ



**ಮಂಡ್ಯ:** ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು, ಆದಿಚುಂಚನಗಿರಿ ಪೀಠಾಧ್ಯಕ್ಷ ಪರಮ ಪೂಜ್ಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಬಗ್ಗೆ ಮಾತನಾಡಿರುವುದು ಅಕ್ಷಮ್ಯ ಅಪರಾಧ ಎಂದು ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಶ್ರೀಗಳು ಕೋಟ್ಯಾಂತರ ಒಕ್ಕಲಿಗರ ಮುಖವಾಣಿಯಂತಿದ್ದು ಸಮಾಜ ಸೇವೆಯಲ್ಲಿ ಮಾಡುತ್ತಾ ಬಂದಿದ್ದಾರೆ. 450ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಅನಾಥಾಲಯಗಳು ಇವುಗಳನ್ನು ನಡೆಸುವ ಮೂಲಕ ಜ್ಞಾನದಾಸೋಹ ಹಾಗೂ ಅನ್ನದಾಸೋಹ ಮಾಡುತ್ತಾ ನೂರಾರು ಸಮಾಜಮುಖಿ ಕೆಲಸಗಳನ್ನು ನಡೆಸಿಕೊಂಡು ಬಂದಿದ್ದಾರೆ. ಶ್ರೀಗಳಿಗೆ ದೇಶ ಹಾಗೂ ಹಿಂದೂ ಧರ್ಮದ ಬಗ್ಗೆ ಅಪಾರವಾದ ಕಾಳಜಿ ಇದ್ದು, ವೈಜ್ಞಾನಿಕ ತಳಹದಿ ಉಳ್ಳವರಾಗಿರುತ್ತಾರೆ. ಪರಮಪೂಜ್ಯ ಶ್ರೀಗಳ ಬಗ್ಗೆ ಬಹಿರಂಗ ವೇದಿಕೆಯಲ್ಲಿ ಗುರುನಿಂದನೆ ಮಾಡಿರುವ ಶಾಸಕರು ಹಾಗೂ ಕಾಂಗ್ರೆಸ್ ಪಕ್ಷವು ಬಹಿರಂಗವಾಗಿ ಕ್ಷಮೆಯಾಚಿಸಬೇಕು.

ರಮೇಶ ಬಂಡಿಸಿದ್ದೇಗೌಡ ಅವರ ವಿರುದ್ಧ ಕಾಂಗ್ರೆಸ್ ಪಕ್ಷವು ಕಠಿಣ ಕ್ರಮ ಕೈಗೊಳ್ಳಬೇಕು. ಮಾತ್ರ ಸಮಾನವಾದ ಒಕ್ಕಲಿಗ ಸಮಾಜಕ್ಕೆ ಅದರದೇ ಆದ ಗೌರವವಿದೆ. ಶ್ರೀಗಳನ್ನ ಅಪಮಾನ ಮಾಡುವ ಮೂಲಕ ಇಡೀ ಒಕ್ಕಲಿಗ ಸಮುದಾಯವನ್ನು ಅಪಮಾನ ಮಾಡಿರುವ ಕಾಂಗ್ರೆಸ್ ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು ಬಹಿರಂಗವಾಗು ಕೂಡಲೇ ಶ್ರೀಗಳು ಹಾಗೂ ಸಮುದಾಯದವರಲ್ಲಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

# ಯುದ್ಧದ ನೆರಳು ಮತ್ತು ಅಡುಗೆಮನೆಯ ಸವಾಲು:

## ಇಂಧನ ಉಳಿತಾಯದ ಅನಿವಾರ್ಯತೆ ಹಾಗೂ ಪೌಷ್ಟಿಕ ಪರ್ಯಾಯಗಳು

ಯುದ್ಧದಂತಹ ಅನಿಷ್ಟಗಳು ಎದುರಾದಾಗ ಮನುಷ್ಯ ಮೊದಲು ತಡಕಾಡುವುದು ತನ್ನ ಮೂಲಭೂತ ಅವಶ್ಯಕತೆಗಳಿಗಾಗಿ. ಮಧ್ಯಪ್ರಾಚ್ಯದಲ್ಲಿ ಸಿಡಿಯುತ್ತಿರುವ ಬಾಂಬ್‌ಗಳು ಜಗತ್ತಿನಾದ್ಯಂತ ಇರುವ ಸಾಮಾನ್ಯ ಜನರ ದೈನಂದಿನ ಅವಶ್ಯಕತೆಗಳಿಗೂ ಕುತ್ತು ತರುತ್ತಿದೆ .



ನಮ್ಮ ದೇಶದ ಇಂಧನ ಅವಶ್ಯಕತೆಯ ಬಹುಪಾಲು ಆಮದಿನ ಮೇಲೆ ಅವಲಂಬಿತವಾಗಿದೆ. ಯುದ್ಧದ ಕಾರಣದಿಂದ ಕಚ್ಚಾ ತೈಲದ ಸರಬರಾಜು ಕುಂಠಿತವಾದಾಗ, ಅದರ ನೇರ ಪರಿಣಾಮ ಅಡುಗೆ ಅನಿಲ (LPG) ಮತ್ತು ಸಾರಿಗೆ ವೆಚ್ಚದ ಮೇಲೆ ಉಂಟಾಗುತ್ತದೆ. ಸಿಲಿಂಡರ್ ಬೆಲೆ ಏರಿಕೆ ಕೇವಲ ಒಂದು ಅಂಕಿ-ಅಂಶವಲ್ಲ; ಅದು ಕೋಟ್ಯಂತರ ಕುಟುಂಬಗಳ ಜೀವನದ ಮೇಲೆ ಬೀರುವ ಹೊಡೆತ. ಇಂತಹ ಬಿಕ್ಕಟ್ಟಿನ ಸಮಯದಲ್ಲಿ "ಇಂಧನ ಉಳಿತಾಯವೇ ಇಂಧನ ಉತ್ಪಾದನೆ" ಎಂಬ ಮಂತ್ರವನ್ನು ನಾವು ಅಳವಡಿಸಿಕೊಳ್ಳಬೇಕಿದೆ. ಅಡುಗೆಮನೆಯಲ್ಲಿ ನಾವು ಮಾಡುವ ಸಣ್ಣ ಬದಲಾವಣೆಗಳು ರಾಷ್ಟ್ರದ ಆರ್ಥಿಕತೆಗೆ ಮತ್ತು ನಮ್ಮ ಕುಟುಂಬದ ಆರೋಗ್ಯಕ್ಕೆ ದೊಡ್ಡ ಕೊಡುಗೆಯನ್ನು ನೀಡಬಲ್ಲವು.

### ಇಂಧನ ಉಳಿತಾಯ: ಒಂದು ಜೀವನಶೈಲಿ

ನಾವು ಬಳಸುವ ಅಡುಗೆ ಅನಿಲ ಅಥವಾ ವಿದ್ಯುತ್ ಶಕ್ತಿಯನ್ನು ಅತ್ಯಂತ ಜಾಣ್ಮೆಯಿಂದ ಬಳಸುವುದು ಇಂದಿನ ತುರ್ತು ಅಗತ್ಯ. ಭಾರತೀಯ ಸಾಂಪ್ರದಾಯಿಕ ಅಡುಗೆ ಪದ್ಧತಿಯಲ್ಲಿ ಇಂಧನ ಉಳಿಸುವ ಅನೇಕ ಸುಪ್ತ ವಿಧಾನಗಳಿವೆ. ಅವುಗಳನ್ನು ಆಧುನಿಕ ಜ್ಞಾನದೊಂದಿಗೆ ಮಿಳಿತಗೊಳಿಸಿದರೆ, ಕಡಿಮೆ ಉರಿಯಲ್ಲಿಯೂ ಅದ್ಭುತ ರುಚಿಯ ಆಹಾರ ತಯಾರಿಸಬಹುದು.

1. ಪೂರ್ವ ತಯಾರಿಯ ಮಹತ್ವ (Mise en Place)
   ಅಡುಗೆಯನ್ನು ಒಲೆಯ ಮೇಲೆ ಇಟ್ಟ ನಂತರ ತರಕಾರಿ ಹೆಚ್ಚುವುದು ಅಥವಾ ಮಸಾಲೆ ಅರೆಯುವುದು ಇಂಧನ ವ್ಯರ್ಥಕ್ಕೆ ಪ್ರಮುಖ ಕಾರಣ. ಅಡುಗೆ ಪ್ರಾರಂಭಿಸುವ ಮುನ್ನವೇ ಎಲ್ಲವನ್ನೂ ಸಿದ್ಧಪಡಿಸಿಟ್ಟುಕೊಳ್ಳುವುದು ಅತ್ಯಗತ್ಯ. ಇದು ಸುಮಾರು ಶೇ. 15ರಷ್ಟು ಗ್ಯಾಸ್ ಉಳಿಸುತ್ತದೆ.
2. ನೆನೆಸುವ ಪ್ರಕ್ರಿಯೆ (The Magic of Soaking)
   ಬೇಳೆಕಾಳುಗಳು, ಅಕ್ಕಿ ಮತ್ತು ಧಾನ್ಯಗಳನ್ನು ಅಡುಗೆಗೆ 30 ರಿಂದ 60 ನಿಮಿಷಗಳ ಮೊದಲು ನೀರಿನಲ್ಲಿ ನೆನೆಸಿಡುವುದರಿಂದ ಅವುಗಳ ಹೊರಪದರ ಮೃದುವಾಗುತ್ತದೆ. ಇದರಿಂದ ಬೇಯುವ ಸಮಯ ಗಣನೀಯವಾಗಿ ಕಡಿಮೆಯಾಗುತ್ತದೆ. ಉದಾಹರಣೆಗೆ, ನೆನೆಸಿದ ಅಕ್ಕಿಯು ನೆನೆಸದ ಅಕ್ಕಿಗಿಂತ ಶೇ. 20ರಷ್ಟು ಬೇಗ ಬೇಯುತ್ತದೆ.
3. ಪಾತ್ರೆಗಳ ಗಾತ್ರ ಮತ್ತು ಆಕಾರ
   ಸಣ್ಣ ಪಾತ್ರೆಯನ್ನು ದೊಡ್ಡ ಬರ್ನರ್ ಮೇಲೆ ಇಡುವುದು ಶಕ್ತಿಯ ಅಪವ್ಯಯ. ಜ್ವಾಲೆಯು ಪಾತ್ರೆಯ ತಳಭಾಗವನ್ನು ಮಾತ್ರ ತಾಗಬೇಕು, ಹೊರಗೆ ಬರಬಾರದು. ಅಲ್ಲದೆ, ಫ್ಲಾಟ್ ಬಾಟಮ್ (ಸಮತಟ್ಟಾದ ತಳ) ಇರುವ ಪಾತ್ರೆಗಳು ಶಾಖವನ್ನು ಸಮವಾಗಿ ಹೀರಿಕೊಳ್ಳುತ್ತವೆ.
4. ಪ್ರೆಶರ್ ಕುಕ್ಕರ್: ಗೃಹಿಣಿಯರ ಅತ್ಯುತ್ತಮ ಮಿತ್ರ
   ತೆರೆದ ಪಾತ್ರೆಯಲ್ಲಿ ಬೇಯಿಸುವುದಕ್ಕಿಂತ ಪ್ರೆಶರ್ ಕುಕ್ಕರ್ ಬಳಕೆ ಶೇ. 50ರಷ್ಟು ಇಂಧನವನ್ನು ಉಳಿಸುತ್ತದೆ. ಒಂದೇ ಕುಕ್ಕರ್‌ನಲ್ಲಿ ಕೆಳಗೆ ಅನ್ನ, ಮೇಲೆ ಬೇಳೆ ಮತ್ತು ತರಕಾರಿಗಳನ್ನು ಇಡುವ 'ಮಲ್ಟಿ ಟಯರ್' ವಿಧಾನವು ಅತ್ಯಂತ ಪರಿಣಾಮಕಾರಿ.

**ಪೌಷ್ಟಿಕ ಮತ್ತು ಇಂಧನ ಸ್ನೇಹಿ:** ಟಾಪ್ 20 ಸಸ್ಯಾಹಾರಿ ಆಹಾರಗಳು
ಇಂಧನದ ಲಭ್ಯತೆ ಕಡಿಮೆಯಾದಾಗ ಅಥವಾ ಬೆಲೆ ಹೆಚ್ಚಾದಾಗ ನಾವು ಈ ಕೆಳಗಿನ ಆಹಾರಗಳನ್ನು ನಮ್ಮ ದೈನಂದಿನ ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದು. ಇವು ತಯಾರಿಸಲು ಸುಲಭ ಮತ್ತು ರುಚಿಯಲ್ಲಿ ಶ್ರೇಷ್ಠ.

1. ಅವಲಕ್ಕಿ (Poha)
   ಇದು ಇಂಧನ ಸ್ನೇಹಿ ಆಹಾರಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಅವಲಕ್ಕಿಯನ್ನು ಕೇವಲ ನೀರಿನಲ್ಲಿ ತೊಳೆದು, ಹತ್ತು ನಿಮಿಷ ನೆನೆಸಿಟ್ಟರೆ ಸಾಕು. ಇದಕ್ಕೆ ಬೇಕಾದ ಒಗ್ಗರಣೆಗೆ ಕೇವಲ 2-3 ನಿಮಿಷಗಳ ಉರಿ ಸಾಕು. ತರಕಾರಿಗಳನ್ನು ಸೇರಿಸುವ ಮೂಲಕ ಇದನ್ನು ಪೌಷ್ಟಿಕವಾಗಿಸಬಹುದು.
2. ಮಿಶ್ರ ಮೊಳಕೆ ಕಾಳುಗಳ ಸಲಾಡ್ (Sprouted Salad)
   ಮೊಳಕೆ ಬರಿಸಿದ ಹೆಸರುಕಾಳು, ಕಡಲೆಕಾಳುಗಳಿಗೆ ಬೇಯಿಸುವ ಅಗತ್ಯವೇ ಇಲ್ಲ. ಇದಕ್ಕೆ ಸೌತೆಕಾಯಿ, ಟೊಮೆಟೊ, ಕ್ಯಾರೆಟ್ ಮತ್ತು ನಿಂಬೆ ರಸ ಸೇರಿಸಿದರೆ ಪ್ರೋಟೀನ್ ಯುಕ್ತ ಹಸಿ ಆಹಾರ ಸಿದ್ಧ. ಇದು ಗ್ಯಾಸ್ ಇಲ್ಲದೆಯೂ ಮಾಡಬಹುದಾದ ಅತ್ಯುತ್ತಮ ತಿಂಡಿ.
3. ಬಿಸಿಬೇಳೆ ಬಾತ್ (One-Pot Meal)
   ಕುಕ್ಕರ್ ಬಳಸಿ ಅನ್ನ, ಬೇಳೆ ಮತ್ತು ತರಕಾರಿಗಳನ್ನು ಒಟ್ಟಿಗೆ ಬೇಯಿಸುವುದರಿಂದ ಪ್ರತ್ಯೇಕವಾಗಿ ಬೇಯಿಸುವ ಶ್ರಮ ಮತ್ತು ಇಂಧನ ಎರಡೂ ಉಳಿಯುತ್ತದೆ. ಇದು ದಕ್ಷಿಣ ಭಾರತದ ಅತ್ಯಂತ ಜನಪ್ರಿಯ ಮತ್ತು ಆರೋಗ್ಯಕರ ಊಟ.
4. ಮಜ್ಜಿಗೆ ಹುಳಿ / ತಂಬುಳಿ
   ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ತಂಬುಳಿ ಬಹಳ ಪ್ರಸಿದ್ಧ. ಹಸಿ ಶುಂಠಿ, ಜೀರಿಗೆ ಅಥವಾ ಕರಿಬೇವಿನ ಸೊಪ್ಪನ್ನು ಅರೆದು ಮಜ್ಜಿಗೆಗೆ ಸೇರಿಸುವುದು. ಸಣ್ಣ ಒಗ್ಗರಣೆ ಕೊಟ್ಟರೆ ಸಾಕು.
5. ಓಟ್ಸ್ ಮತ್ತು ಹಣ್ಣುಗಳ ಮಿಶ್ರಣ
   ಓಟ್ಸ್ ಅನ್ನು ಬಿಸಿ ನೀರಿನಲ್ಲಿ ಅಥವಾ ಹಾಲಿನಲ್ಲಿ ನೆನೆಸಿಟ್ಟು ಅದರ ಮೇಲೆ ಹಣ್ಣುಗಳನ್ನು ಹಾಕಿಕೊಂಡರೆ ಅದು ಬೆಳಗಿನ ಉತ್ತಮ ಉಪಹಾರವಾಗುತ್ತದೆ. ಇದಕ್ಕೆ ಸ್ಟೌವ್ ಹಚ್ಚುವ ಅಗತ್ಯವೂ ಇರುವುದಿಲ್ಲ.
6. ಮೊಸರನ್ನ (Curd Rice)
   ಭಾರತೀಯರ ಸಾರ್ವಕಾಲಿಕ ಮೆಚ್ಚಿನ ಊಟ. ಅನ್ನ ತಯಾರಿದ್ದರೆ ಸಾಕು, ಉಳಿದ ಪ್ರಕ್ರಿಯೆಗೆ ಇಂಧನ ಬೇಕಿಲ್ಲ. ಜೀರ್ಣಕ್ರಿಯೆಗೆ ಇದು ಅತ್ಯುತ್ತಮ.
7. ಪನೀರ್ ಅಥವಾ ಟೋಫು ಬುರ್ಜಿ
   ಪನೀರ್ ಅಥವಾ ಟೋಫು ಬೇಯಲು ಮಾಂಸಾಹಾರದಂತೆ ಅತಿ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಕೇವಲ 5-8 ನಿಮಿಷಗಳಲ್ಲಿ ರುಚಿಕರವಾದ ಬುರ್ಜಿ ತಯಾರಿಸಬಹುದು.
8. ಮೆಂತೆ ಅಥವಾ ಪಾಲಕ್ ಪಲ್ಯ
   ಸೊಪ್ಪುಗಳು ಅತಿ ಹೆಚ್ಚು ನೀರಿನಾಂಶ ಹೊಂದಿರುತ್ತವೆ ಮತ್ತು ಬೇಗನೆ ಮೃದುವಾಗುತ್ತವೆ. ಇವುಗಳನ್ನು ಮುಚ್ಚಳ ಮುಚ್ಚಿ ಬೇಯಿಸಿದರೆ 5 ನಿಮಿಷಗಳಲ್ಲಿ ಸಿದ್ಧವಾಗುತ್ತವೆ.
9. ಉದ್ದಿನ ಚಟ್ನಿ ಮತ್ತು ರೊಟ್ಟಿ
   ಉದ್ದಿನ ಬೇಳೆಯನ್ನು ಹುರಿದು ಚಟ್ನಿ ಮಾಡುವುದು ಹಳೆಯ ಪದ್ಧತಿ. ಇದನ್ನು ಒಮ್ಮೆ ಮಾಡಿಟ್ಟುಕೊಂಡರೆ ಹಲವು ದಿನ ಬಳಸಬಹುದು. ರೊಟ್ಟಿ ಬೇಯಿಸಲು ಕನಿಷ್ಠ ಶಾಖ ಸಾಕು.
10. ಹುರಿಗಡಲೆ ಉಪ್ಪಿಟ್ಟು
    ಹುರಿಗಡಲೆ ಪುಡಿಯಿಂದ ಮಾಡುವ 'ಪಿಟ್ಲೆ' ಅಥವಾ ಚಟ್ನಿ ಪುಡಿಗಳು ತ್ವರಿತ ಊಟಕ್ಕೆ ಸಹಕಾರಿ. ರವೆಯನ್ನು ಮೊದಲೇ ಹುರಿದಿಟ್ಟುಕೊಂಡರೆ ಉಪ್ಪಿಟ್ಟು ಮಾಡುವ ಸಮಯ ಉಳಿಯುತ್ತದೆ.
11. ಹಬೆಯಲ್ಲಿ ಬೇಯಿಸಿದ ಕಡುಬು / ಇಡ್ಲಿ
    ಹಬೆಯಲ್ಲಿ ಬೇಯಿಸುವ ಆಹಾರಗಳು ನೇರವಾಗಿ ಎಣ್ಣೆಯಲ್ಲಿ ಕರೆಯುವ ಆಹಾರಗಳಿಗಿಂತ ಆರೋಗ್ಯಕರ ಮತ್ತು ಇಂಧನ ಉಳಿತಾಯಕ್ಕೆ ಪೂರಕ. ಕುಕ್ಕರ್‌ನ ಹಬೆಯಲ್ಲಿ ಇವು ವೇಗವಾಗಿ ತಯಾರಾಗುತ್ತವೆ.
12. ರಾಗಿ ಅಂಬಲಿ
    ಬೇಸಿಗೆಯಲ್ಲಿ ಮತ್ತು ಇಂಧನ ಉಳಿಸಲು ಇದು ಅತ್ಯುತ್ತಮ. ರಾಗಿ ಹಿಟ್ಟನ್ನು ನೀರಿನಲ್ಲಿ ಕಲಸಿ ಅಲ್ಪ ಸಮಯ ಕುದಿಸಿ ನಂತರ ಮಜ್ಜಿಗೆ ಸೇರಿಸಿದರೆ ದಿನವಿಡೀ ಶಕ್ತಿ ನೀಡುವ ಪಾನೀಯ ಸಿದ್ಧ.
13. ಸೌತೆಕಾಯಿ ಸಾಸಿವೆ (Hashi)
    ಸೌತೆಕಾಯಿಯನ್ನು ತುರಿದು, ಅದಕ್ಕೆ ತೆಂಗಿನಕಾಯಿ ಮತ್ತು ಸಾಸಿವೆ ಅರೆದು ಹಾಕಿ ಮೊಸರಿನೊಂದಿಗೆ ಬೆರೆಸುವುದು. ಇದು ಯಾವುದೇ ಶಾಖವಿಲ್ಲದ ಪೌಷ್ಟಿಕ ವ್ಯಂಜನ.
14. ಹುರಿದ ಧಾನ್ಯಗಳ ಲಡ್ಡು
    ಅಕ್ಕಿ, ಗೋಧಿ ಅಥವಾ ರಾಗಿಯನ್ನು ಮೊದಲೇ ಹುರಿದು ಪುಡಿ ಮಾಡಿಟ್ಟುಕೊಂಡರೆ, ಬೇಕಾದಾಗ ಬೆಲ್ಲದ ಪಾಕ ಅಥವಾ ಹಾಲಿನೊಂದಿಗೆ ಬೆರೆಸಿ ತಿನ್ನಬಹುದು.
15. ದಾಲ್ ಕಿಚಡಿ
    ಬೇಳೆ ಮತ್ತು ಅಕ್ಕಿಯನ್ನು ಅತ್ಯಂತ ಮೃದುವಾಗಿ ಬೇಯಿಸುವುದು. ಇದು ಅನಾರೋಗ್ಯದ ಸಮಯದಲ್ಲಿ ಮತ್ತು ಕೆಲಸದ ಒತ್ತಡವಿರುವಾಗ ಇಂಧನ ಉಳಿಸುವ ಉತ್ತಮ ಮಾರ್ಗ.
16. ತರಕಾರಿ ಸ್ಯಾಂಡ್‌ವಿಚ್
    ಹಸಿ ತರಕಾರಿಗಳನ್ನು ಬ್ರೆಡ್ ನಡುವೆ ಇಟ್ಟು ತಿನ್ನುವುದು. ಬ್ರೆಡ್ ಅನ್ನು ಲಘುವಾಗಿ ಬಿಸಿ ಮಾಡಲು ಕೇವಲ ಒಂದು ನಿಮಿಷ ಸಾಕು.
17. ಹಣ್ಣುಗಳ ಸಲಾಡ್
    ಯಾವುದೇ ಅಡುಗೆಯ ಅಗತ್ಯವಿಲ್ಲದ ನೈಸರ್ಗಿಕ ಆಹಾರ. ಇದು ಜೀವಸತ್ವಗಳ ಗಣಿ.
18. ಅಕ್ಕಿ ಶ್ಯಾವಿಗೆ (Akki Shavige)
    ಮನೆಯಲ್ಲಿಯೇ ಸಿದ್ಧಪಡಿಸಿದ ಶ್ಯಾವಿಗೆಯನ್ನು ಕೇವಲ ಹಬೆಯಲ್ಲಿ ಬೇಯಿಸಿದರೆ ಸಾಕು. ಇದು ಲಘು ಆಹಾರವಾಗಿ ಅತ್ಯುತ್ತಮ.
19. ಕಡಲೆಕಾಯಿ ಚಟ್ನಿ ಮತ್ತು ಅನ್ನ
    ಕಡಲೆಕಾಯಿಯನ್ನು ಮೊದಲೇ ಹುರಿದಿಟ್ಟುಕೊಂಡರೆ, ಚಟ್ನಿ ಮಾಡಲು ಇಂಧನ ಬೇಕಿಲ್ಲ. ಇದು ಪ್ರೋಟೀನ್ ಸಮೃದ್ಧ ಆಹಾರ.
20. ಮಿಕ್ಸ್ ವೆಜಿಟೇಬಲ್ ರಾಯ್ತ
    ಮೊಸರಿಗೆ ಕ್ಯಾರೆಟ್, ಬೀಟ್ರೂಟ್ ಮತ್ತು ಈರುಳ್ಳಿ ಸೇರಿಸಿ ಮಾಡುವ ರಾಯ್ತ. ಇದು ಅನ್ನ ಅಥವಾ ರೊಟ್ಟಿಯೊಂದಿಗೆ ರುಚಿಕರವಾಗಿರುತ್ತದೆ.



ಸಾಂಸ್ಕೃತಿಕ ಹಿನ್ನೆಲೆ ಮತ್ತು ಜವಾಬ್ದಾರಿ : ಯುದ್ಧದ ಕಾಲವು ನಮಗೆ ಸಂಪನ್ಮೂಲಗಳ ಮೌಲ್ಯವನ್ನು ನೆನಪಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಆಹಾರವನ್ನು 'ಪರಬ್ರಹ್ಮ' ಎಂದು ಕರೆಯಲಾಗುತ್ತದೆ. ಆಹಾರವನ್ನು ವ್ಯರ್ಥ ಮಾಡದಿರುವುದು ಹೇಗೆ ಧರ್ಮವೋ, ಹಾಗೆಯೇ ಆಹಾರ ತಯಾರಿಸಲು ಬಳಸುವ ಇಂಧನವನ್ನು ವ್ಯರ್ಥ ಮಾಡದಿರುವುದು ಇಂದಿನ ದೇಶಭಕ್ತಿ.

ನಮ್ಮ ಅಡುಗೆಮನೆಯಲ್ಲಿ ನಾವು ಬಳಸುವ ಪ್ರತಿಯೊಂದು ಲೀಟರ್ ನೀರು ಮತ್ತು ಪ್ರತಿಯೊಂದು ಗ್ರಾಂ ಅನಿಲವು ಜಾಗತಿಕ ಪರಿಸರ ಮತ್ತು ದೇಶದ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತದೆ. ಯುದ್ಧಗಳು ದೂರದಲ್ಲಿ ನಡೆಯುತ್ತಿದ್ದರೂ, ಅದರ ಬಿಸಿ ನಮ್ಮನ್ನು ತಟ್ಟದಂತೆ ತಡೆಯಲು ನಾವು ಸ್ವಾವಲಂಬಿಗಳಾಗಬೇಕು ಮತ್ತು ಮಿತವ್ಯಯಿಗಳಾಗಬೇಕು.



ಇಂಧನ ಉಳಿತಾಯ ಎಂಬುದು ಕೇವಲ ಅನಿವಾರ್ಯತೆಯಲ್ಲ, ಅದು ಪ್ರಜ್ಞಾವಂತ ನಾಗರಿಕನ ಲಕ್ಷಣ. ಕಡಿಮೆ ಶಾಖದಲ್ಲಿ ತಯಾರಾಗುವ ಸಸ್ಯಾಹಾರಿ ಆಹಾರಗಳು ಕೇವಲ ಇಂಧನವನ್ನಷ್ಟೇ ಉಳಿಸುವುದಿಲ್ಲ, ಬದಲಿಗೆ ನಮ್ಮ ಆರೋಗ್ಯವನ್ನೂ ಸುಧಾರಿಸುತ್ತವೆ. ಅತಿಯಾದ ಸಂಸ್ಕರಿಸಿದ ಆಹಾರಗಳಿಗಿಂತ ನೈಸರ್ಗಿಕವಾಗಿ ಮತ್ತು ಸರಳವಾಗಿ ಬೇಯಿಸಿದ ಆಹಾರವು ಮನುಷ್ಯನನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿಡುತ್ತದೆ. ಬನ್ನಿ, ಇಂದೇ ನಮ್ಮ ಅಡುಗೆ ಮನೆಯಲ್ಲಿ ಬದಲಾವಣೆಯನ್ನು ತರೋಣ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,